

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜನವರಿ 30 ಸೋಮವಾರ 2023

ಸಂಪುಟ: 43 | ಸಂಚಿಕೆ: 282 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಹಾಲಾಳು ಗ್ರಾಮದಲ್ಲಿ ಸಾಹಸಸಿಂಹ ವಿಷ್ಣುವರ್ಧನ್ ಸ್ಮಾರಕ ಲೋಕಾರ್ಪಣೆ

ಸ್ಮಾರಕ ನಿರಂತರ ಚಟುವಟಿಕೆಯ ಕೇಂದ್ರವಾಗಲೆಂಬುದು ನಮ್ಮ ಉದ್ದೇಶ: ಸಿಎಂ ಬಸವರಾಜ ಬೊಮ್ಮಾಯಿ

● ವಿಷ್ಣುವರ್ಧನ್ ಸ್ಮಾರಕ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಸಾಕ್ಷಿಯಾದ ಅಭಿಮಾನಿಗಳು ● ದೂರದೂರದ ಜಿಲ್ಲೆಗಳಿಂದ ಆಗಮಿಸಿದ್ದರು ● ಅಭಿಮಾನಿಗಳ ಒಳಬಿಡದ ಪೊಲೀಸರು ● ಮುಖ್ಯ ಗೇಟು ಹತ್ತಿ ನುಗ್ಗಲು ಯತ್ನಿಸಿದ ಅಭಿಮಾನಿಗಳಿಗೆ ಪೊಲೀಸರ ತಡೆ


ಮೈಸೂರಿನ ಹೆಚ್.ಡಿ.ಕೋಟೆ ರಸ್ತೆ ಉದ್ಬೂರು ಗೇಟ್ ಬಳಿ ಹಾಲಾಳು ಗ್ರಾಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಾಹಸಸಿಂಹ ಡಾ.ವಿಷ್ಣುವರ್ಧನ್ ಸ್ಮಾರಕ ಲೋಕಾರ್ಪಣೆ ಮಾಡಿದರು. ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಭಾರತಿ ವಿಷ್ಣುವರ್ಧನ್, ಅನಿರುದ್ಧ ಇನ್ನಿತರರಿದ್ದಾರೆ.

ಮೈಸೂರು, ಜ.29(ಆರ್‌ಕೆಬಿ)– ಸಾಹಸಸಿಂಹ ಡಾ.ವಿಷ್ಣುವರ್ಧನ್ ಅವರಿಗೆ ಗೌರವ ತರುವ ರೀತಿಯಲ್ಲಿ ವಿಷ್ಣುವರ್ಧನ್ ಸ್ಮಾರಕ ನಿರಂತರ ಚಟುವಟಿಕೆಯ ಕೇಂದ್ರವಾಗಬೇಕು ಎಂಬುದು ಸರ್ಕಾರದ ಉದ್ದೇಶವಾಗಿದ್ದು, ಅದಕ್ಕೆ ತಕ್ಕಂತೆ ಇದನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ಭರವಸೆ ನೀಡಿದರು.

ಮೈಸೂರಿನ ಹೆಚ್.ಡಿ.ಕೋಟೆ ರಸ್ತೆ ಉದ್ಬೂರು ಗೇಟ್ ಬಳಿ ಹಾಲಾಳು ಗ್ರಾಮದಲ್ಲಿ 11 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಡಾ.ವಿಷ್ಣುವರ್ಧನ್ ಸ್ಮಾರಕವನ್ನು ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಡಾ.ವಿಷ್ಣುವರ್ಧನ್ ಅವರು ಚಲನಚಿತ್ರದಲ್ಲಿ ಮಾಡಿದ ಸಾಧನೆ ಕಣ್ಣ ಮುಂದಿದೆ. ನಾನು ವಿಷ್ಣುವರ್ಧನ್ ಅಭಿಮಾನಿಯಾಗಿ ಇಲ್ಲಿಗೆ ಬಂದಿದ್ದೇನೆ. 70ರ ದಶಕದಲ್ಲಿ ಪ್ರಜಾಮತದ ಮುಖಪುಟದಲ್ಲಿ ನಾಗರಹಾವು ಚಿತ್ರದಲ್ಲಿನ ಹೊಸ ನಾಯಕನಾಗಿ ವಿಷ್ಣುವರ್ಧನ್‌ರ ಭಾವಚಿತ್ರ ಪ್ರಕಟವಾಗಿತ್ತು. ಅದನ್ನು ಯಾರಾದರೂ ಮೊದಲ ಬಾರಿ ನೋಡಿದವರು ವಿಷ್ಣುವರ್ಧನ್‌ರ ಅಭಿಮಾನಿಯಾಗುತ್ತಾರೆ ಎಂಬ ರೀತಿಯಲ್ಲಿತ್ತು. ನಾಗರ ಹಾವು ಮೊದಲ ಚಿತ್ರದಲ್ಲೇ ನಾಯಕ ▶ 8ನೇ ಪುಟಕ್ಕೆ

13 ವರ್ಷದ ಹೋರಾಟಕ್ಕೆ ಸಿಕ್ಕ ಫಲ

ಹಿರಿಯ ನಟಿ ಭಾರತಿ ವಿಷ್ಣುವರ್ಧನ್ ಹರ್ಷ

ಮೈಸೂರು, ಜ.29(ಆರ್‌ಕೆಬಿ)– ರಾಜ್ಯದ ಅಭಿಮಾನಿಗಳ ಆಶಯ ಮತ್ತು 13 ವರ್ಷಗಳ ಹೋರಾಟ ಮತ್ತು ತಪಸ್ಸಿಗೆ ಸಿಕ್ಕ ಫಲ ಇದು ಎಂದು ಹಿರಿಯ ನಟಿ ಭಾರತಿ ವಿಷ್ಣುವರ್ಧನ್ ಇಂದಿಲ್ಲಿ ಹರ್ಷ ವ್ಯಕ್ತಪಡಿಸಿದರು. ಹಾಲಾಳು ಗ್ರಾಮದಲ್ಲಿ ಡಾ.ವಿಷ್ಣುವರ್ಧನ್ ಸ್ಮಾರಕ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಬಸಿರಾದ ಮಹಿಳೆಗೆ ಡೆಲಿವರಿ ನಂತರ ಮಗು ಜನಿಸಿದಾಗ ಮಗುವಿನ ಮುಖ ನೋಡಿದಾಗ ಎಷ್ಟು ಸಂತಸವಾಗುತ್ತದೆಯೋ ಅಷ್ಟು ಸಂತಸ ಇಂದು ಎಲ್ಲರ ಸಹಕಾರದಿಂದ ಆಗಿದೆ. ಇದಕ್ಕೆ ಸರ್ಕಾರ, ಮುಖ್ಯಮಂತ್ರಿಗಳು, ಇಲಾಖೆ ಅಧಿಕಾರಿಗಳು ಮತ್ತು ಅಭಿಮಾನಿಗಳ ಸಹಕಾರದಿಂದ ಇದು ಈಡೇರಿದೆ. ನಮಗಾಗಿರುವ ಸಂತೋಷಕ್ಕೆ, ನಿಮ್ಮ ಪ್ರೀತಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದರು. ಇಂದು ಸಂತಸ ಪಡುವ ದಿನ. ಅಭಿಮಾನಿಗಳೆಲ್ಲರೂ ನೋಡಬೇಕಾದ ಜಾಗ. ನಿಮ್ಮ ಸಹನೆ, ತಾಳ್ಮೆಯಿದ್ದರೆ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಈ ಸ್ಮಾರಕ ನಿದರ್ಶನ. ನಿಮ್ಮ ಈ ಒಗ್ಗಟ್ಟು ಮುಂದೆಯೂ ಹೀಗೇ ಇರಬೇಕು. ಸ್ಮಾರಕವನ್ನು ಜವಾಬ್ದಾರಿಯಿಂದ ಮುನ್ನಡೆಸಿಕೊಂಡು ಹೋಗುವಂತೆ ಭಾರತಿ ವಿಷ್ಣುವರ್ಧನ್ ಅಭಿಮಾನಿಗಳಲ್ಲಿ ಮನವಿ ಮಾಡಿದರು.

ಬೊಮ್ಮಾಯಿ ಮತ್ತೆ ಸಿಎಂ ಆಗಲಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಒಳ್ಳೆಯ ಕೆಲಸ ಮಾಡಿದ್ದಾರೆ. ಇಂಥವರು ನಮ್ಮೊಂದಿಗೆ ಸದಾ ಇರಬೇಕು. ಮತ್ತೆ ಅವರು ಮುಖ್ಯಮಂತ್ರಿಯಾಗಿ ಬಂದರೆ ಒಳ್ಳೆಯದು ಅಲ್ಲವೇ. ಅವರಿಗೆ ಒಳ್ಳೆಯದಾಗಲಿ ಎಂದು ಮುಖ್ಯಮಂತ್ರಿಗಳು ಮತ್ತೊಮ್ಮೆ ಮುಖ್ಯಮಂತ್ರಿಯಾಗಿ ಬರಲಿ ಎಂಬ ಅರ್ಥದಲ್ಲಿ ಹಿರಿಯ ನಟಿ ಭಾರತಿ ವಿಷ್ಣುವರ್ಧನ್ ಹೇಳಿದರು.

ಅಭಿಮಾನಿಗಳಿಂದ ಭಾರೀ ಸಂಭ್ರಮ

ಮೈಸೂರು,ಜ.29(ಆರ್‌ಕೆಬಿ)– ಮೈಸೂರಿನ ಹೆಚ್.ಡಿ.ಕೋಟೆ ರಸ್ತೆ ಉದ್ಬೂರು ಗೇಟ್ ಬಳಿ ಹಾಳಾಳು ಗ್ರಾಮದಲ್ಲಿ ಕನ್ನಡದ ಮೇರುನಟ, ಸಾಹಸಸಿಂಹ ಡಾ.ವಿಷ್ಣುವರ್ಧನ್ ಸ್ಮಾರಕ ಪ್ರದೇಶ ಭಾನುವಾರ ಸಾವಿರಾರು ಅಭಿಮಾನಿಗಳಿಂದ ತುಂಬಿ, ವಿಷ್ಣುವರ್ಧನ್ ಪರ ಘೋಷಣೆಗಳು ಗಗನ ಮುಟ್ಟಿದವು. ತಮ್ಮ ಅಭಿಮಾನಿ ನಟನ ಭಾವಚಿತ್ರ ಹಿಡಿದು, ಸಂಭ್ರಮಿಸಿದರು.


ಹಾಲಾಳು ಗ್ರಾಮದಲ್ಲಿ ಡಾ.ವಿಷ್ಣುವರ್ಧನ್ ಸ್ಮಾರಕ ನಿರ್ಮಿಸಲಾಗಿದೆ. ಡಾ.ವಿಷ್ಣುವರ್ಧನ್ ಪ್ರತಿಷ್ಠಾನ ಮತ್ತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಸರ್ಕಾರದಿಂದ ಮಂಜೂರಾದ ಒಟ್ಟು 5 ಎಕರೆ ಜಮೀನಿನಲ್ಲಿ ಮೂರು ಎಕರೆಯಲ್ಲಿ 11 ಕೋಟಿ ರೂ. ವೆಚ್ಚದಲ್ಲಿ ಸ್ಮಾರಕ ನಿರ್ಮಾಣವಾಗಿದೆ. ಉದ್ಘಾಟನಾ ಸಮಾರಂಭಕ್ಕೆಂದು ನಿರ್ಮಿಸಲಾಗಿದ್ದ ಬೃಹತ್ ವೇದಿಕೆಯಲ್ಲಿ 2 ಸಾವಿರಕ್ಕೂ ಹೆಚ್ಚು ಆಸನಗಳ ವ್ಯವಸ್ಥೆ ಮಾಡಲಾಗಿತ್ತಾದರೂ, ಅದಕ್ಕೂ ಮೀರಿ ಅಭಿಮಾನಿಗಳ ದಂಡು, ಸುಡು ಬಿಸಿಲಿನಲ್ಲಿಯೇ ನಿಂತು ಮುಖ್ಯಮಂತ್ರಿಗಳಿಂದ ಉದ್ಘಾಟನಾ ▶ 8ನೇ ಪುಟಕ್ಕೆ



ಸ್ಮಾರಕದ ಮುಂದಿನ ರಸ್ತೆ ಚತುಷ್ಪಥ ರಸ್ತೆಯಾಗಲಿ: ಜಿಟಿಡಿ

ಮೈಸೂರು,ಜ.29(ಆರ್‌ಕೆಬಿ)–ಮೈಸೂರಿನಲ್ಲೇ ಹುಟ್ಟಿ ಬೆಳೆದ ಸಾಹಸಸಿಂಹ ಡಾ.ವಿಷ್ಣುವರ್ಧನ್ ಅವರ ಸ್ಮಾರಕ ಇರುವ ಹಾಲಾಳು ಗ್ರಾಮದ ಈ ರಸ್ತೆ ಚತುಷ್ಪಥ ರಸ್ತೆಯಾಗಿ ಅಭಿವೃದ್ಧಿಪಡಿಸುವಂತೆ ತಾವು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದಾಗಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಅವರು, ವಿಷ್ಣು ಸ್ಮಾರಕ ಮೈಸೂರಿನಲ್ಲೇ ಆಗಬೇಕು ಎಂದು ಭಾರತಿ ವಿಷ್ಣುವರ್ಧನ್, ಅನಿರುದ್ಧ ಅವರ ಹೋರಾಟವಿದೆ. ಮೈಸೂರಿನಲ್ಲಿಯೇ ಚಿತ್ರ ನಗರಿ ನಿರ್ಮಿಸುವಂತೆ ಹಾಗೂ ಸ್ಮಾರಕದಲ್ಲಿ ಜಮೀನು ಉಳುತ್ತಿದ್ದ ರೈತರಿಗೆ ಸರ್ಕಾರದಿಂದ ಪ್ರತ್ಯೇಕವಾಗಿ ಸಹಾಯಧನ ನೀಡುವಂತೆಯೂ ಸಿಎಂಗೆ ಮನವಿ ಮಾಡಿರುವುದಾಗಿಯೂ ಹೇಳಿದರು. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ವಿಷ್ಣುವರ್ಧನ್ ಅವರ ಇತಿಹಾಸ, ವಿಚಾರಧಾರೆಗಳನ್ನು ಮಾಡುತ್ತಿರು ವುದು ಮೈಸೂರಿನ ಹೆಸರು ರಾಜ್ಯ, ದೇಶ ಹೆಮ್ಮೆ ಪಡುವಂಥದ್ದು. ಈ ಸ್ಮಾರಕ ಯಾತ್ರಾ ಸ್ಥಳವಾಗಲಿ. ಇದಕ್ಕೆ ಎಲ್ಲರ ಸಹಕಾರ, ಪ್ರೀತಿ, ವಿಶ್ವಾಸ ಸಿಗಲಿ ಎಂದು ಜಿಟಿಡಿ ಹಾರೈಸಿದರು.

ಮುಂದಿನ ಚುನಾವಣೆಗೆ ಸ್ಪರ್ಧಿಸುವುದಿಲ್ಲ



ಬೆಳಗಾವಿ,ಜ.29–ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಯಾವುದೇ ಕಾರಣಕ್ಕೂ ಸ್ಪರ್ಧಿಸುವುದಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಘೋಷಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಬಂದಿದ್ದೇನೆ. ನನಗೀಗ 80 ವರ್ಷ ವಯಸ್ಸಾಗುತ್ತಿದೆ. ಹೀಗಾಗಿ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸದಿರಲು ತೀರ್ಮಾನಿಸಿದ್ದೇನೆ. ಆದರೆ, ಪಕ್ಷದ ಸಂಘಟನೆಗಾಗಿ ರಾಜ್ಯಾದ್ಯಂತ ಪ್ರವಾಸ ಮಾಡುತ್ತೇನೆ ಎಂದರು. ಮಗ ರಾಘವೇಂದ್ರ ಸಂಸದರಿದ್ದಾರೆ. ಮತ್ತೊಬ್ಬ ಮಗ ವಿಜಯೇಂದ್ರ ಕೂಡ ಬಿಜೆಪಿ ಗಟ್ಟಿಗೊಳಿಸಲು ರಾಜ್ಯ ಪ್ರವಾಸ ಮಾಡುತ್ತಿದ್ದಾರೆ. ನಾನು ರಾಜಕೀಯದಿಂದ ನಿವೃತ್ತಿ ಹೊಂದಿಲ್ಲ. ಈ ಚುನಾವಣೆಯಲ್ಲಿ ಓಡಾಡುತ್ತೇನೆ. ದೇವರು ಶಕ್ತಿ ಕೊಟ್ಟರೆ ಮುಂದಿನ ಚುನಾವಣೆವರೆಗೂ ಪಕ್ಷಕ್ಕಾಗಿ ದುಡಿಯುತ್ತೇನೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ತರಲು ಪ್ರಯತ್ನಿಸುತ್ತೇನೆ ಎಂದು ಹೇಳಿದರು.

ರಾಜ್ಯದಲ್ಲಿ ಪಕ್ಷವೂ ನನಗೆ ಸ್ಥಾನಮಾನ, ಅಧಿಕಾರ ಮತ್ತು ಗೌರವ ಕೊಟ್ಟಿದೆ. ಹಾಗಾಗಿ ರಾಷ್ಟ್ರ ರಾಜಕಾರಣಕ್ಕೆ ನಾನು ಹೋಗುವುದಿಲ್ಲ. ಬಿಜೆಪಿ ಋಣ ತೀರಿಸಲು ರಾಜ್ಯಾದ್ಯಂತ ಸಂಚರಿಸುತ್ತೇನೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಮುಂಬರುವ ಚುನಾವಣೆಯಲ್ಲಿ 140 ಸ್ಥಾನ ಗೆಲ್ಲುತ್ತೇವೆ. ಯಾರೋ ನಾನೇ ಮುಂದಿನ ಮುಖ್ಯಮಂತ್ರಿ ಎಂದು ▶ 8ನೇ ಪುಟಕ್ಕೆ



ಚಾ.ಬೆಟ್ಟದಲ್ಲಿ ಪರಿಸರ ಮಾರಕ ಕಾಮಗಾರಿ ವಿರುದ್ಧ ಮೈಸೂರಿನ ಪಾರ್ಕ್‌ಗಳಲ್ಲಿ ಸತ್ಯಾಗ್ರಹ

ಉತ್ತಮ ಆಡಳಿತಕ್ಕೆ ಆಗ್ರಹಿಸಿ ಎಂಜಿಪಿಯಿಂದ ಜಾಗೃತಿ


ಮೈಸೂರಿನ ನೇತಾಜಿನಗರದ ಗಣಪತಿ ದೇವಾಲಯದ ಆವರಣದಲ್ಲಿ ಪರಿಸರ ಬಳಗದ ಸದಸ್ಯರು ಮತ್ತು ನೇತಾಜಿನಗರದ ನಿವಾಸಿಗಳು ಉತ್ತಮ ಆಡಳಿತಕ್ಕಾಗಿ ಸತ್ಯಾಗ್ರಹ ನಡೆಸಿದರು.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಕೇಂದ್ರದ 'ಪ್ರಸಾದ' ಯೋಜನೆಯಲ್ಲಿ ಬೃಹತ್ ಕಟ್ಟಡಗಳ ನಿರ್ಮಿಸಿ ಬೆಟ್ಟದ ಪಾವಿತ್ರ್ಯತೆಗೆ ಹಾಗೂ ಭದ್ರತೆಗೆ ಧಕ್ಕೆ ತರಬಾರದು ಹಾಗೂ ಮೈಸೂರಿನ ವಿವಿಧ ಪಾರ್ಕ್‌ಗಳಲ್ಲಿ ಕಾಂಕ್ರೀಟ್ ಕಟ್ಟಡ ನಿರ್ಮಾಣ ಮಾಡಬಾರದು ಎಂದು ಆಗ್ರಹಿಸಿ ಕರೆ ನೀಡಿದ್ದ ಸತ್ಯಾಗ್ರಹದಲ್ಲಿ ನೂರಾರು ಮಂದಿ ಪಾಲ್ಗೊಂಡು ಗಮನ ಸೆಳೆದರು.

ಮೈಸೂರು,ಜ.29(ಎಂಟಿವೈ)– ಉತ್ತಮ ಆಡಳಿತಕ್ಕಾಗಿ ಹಾಗೂ ಪರಿಸರಕ್ಕೆ ಮಾರಕವಾದ ಯೋಜನೆಗಳನ್ನು ಅನುಷ್ಠಾನಗೊಳಿಸದಂತೆ ಆಗ್ರಹಿಸಿ ಮೈಸೂರಲ್ಲಿ ಭಾನುವಾರ ಮೈಸೂರು ಗ್ರಾಹಕರ ಪರಿಷತ್(ಎಂಜಿಪಿ) ಕರೆ ನೀಡಿದ್ದ ಒಂದು ದಿನದ ಸತ್ಯಾಗ್ರಹಕ್ಕೆ ಉತ್ತಮವಾದ ಬೆಂಬಲ ವ್ಯಕ್ತವಾಗಿದ್ದು, ಮೈಸೂರಿನ ಹಲವೆಡೆ ಧರಣಿ ನಡೆಸಿ ಪರಿಸರ ಸಂರಕ್ಷಣೆ ಕ್ರಮಕ್ಕಾಗಿ ಒಕ್ಕೊರಲಿನ ಆಗ್ರಹ ಮಾಡಿದರು.

ಮೈಸೂರಿನ ಚೆಲುವಾಂಬ ಪಾರ್ಕ್, ನ್ಯಾಯಾಲಯದ ಮುಂಭಾಗ, ನಿವೇದಿತಾನಗರ ಪಾರ್ಕ್, ಟಿ.ನರಸೀಪುರ ರಸ್ತೆಯ ನೇತಾಜಿನಗರ ಪಾರ್ಕ್ ಮತ್ತು ರಾಮಕೃಷ್ಣನಗರ ಉದ್ಯಾನವನ, ವಿಜಯನಗರ ಸೇರಿದಂತೆ ವಿವಿಧೆಡೆ ನಡೆದ ಸತ್ಯಾಗ್ರಹದಲ್ಲಿ ಮಕ್ಕಳು, ಹಿರಿಯ ನಾಗರಿಕರು, ಮಹಿಳೆಯರು, ವಿದ್ಯಾರ್ಥಿಗಳು, ಯುವ ಜನರು ಒಳಗೊಂಡಂತೆ ವಿವಿಧ ವಯೋಮಾನದ ಪರಿಸರ ಕಾಳಜಿಯುಳ್ಳ ನಾಗರಿಕರು ಪಾಲ್ಗೊಂಡು ಮೈಸೂರು ನಗರ, ಮೈಸೂರಿನ ಪರಿಸರ ಸಂರಕ್ಷಣೆಗೆ ಉತ್ತಮ ಆಡಳಿತ ನೀಡುವಂತೆ ಆಗ್ರಹಿಸಿದರು. ಇದೇ ವೇಳೆ ವಾಯುವಿಹಾರಿಗಳಿಗೆ, ದಾರಿಹೋಕರಿಗೆ, ಸಾರ್ವಜನಿಕರಿಗೆ ಕರಪತ್ರ ವಿತರಿಸಿ ಸತ್ಯಾಗ್ರಹಕ್ಕೆ ಬೆಂಬಲ ಯಾಚಿಸಿದರು.

ಚೆಲುವಾಂಬ ಪಾರ್ಕ್: ಮೈಸೂರಿನ ಚೆಲುವಾಂಬ ಪಾರ್ಕ್‌ನಲ್ಲಿ ಎಂಜಿಪಿ ಆಯೋಜಿಸಿದ್ದ ಸತ್ಯಾಗ್ರಹದಲ್ಲಿ ಸಿಎಫ್‌ಟಿಆರ್‌ಐ ವಿಶ್ರಾಂತ ನಿರ್ದೇಶಕ ಡಾ.ವಿ.ಪ್ರಕಾಶ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮೈಸೂರಿನ ಸುತ್ತಮುತ್ತಲಿನ ಪರಿಸರ ನಾಶವಾಗುತ್ತಿದೆ. ವಿವಿಧ ಸ್ವರೂಪದಲ್ಲಿ ಪರಿಸರದ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಗೆ ಮೈಸೂರು ಗ್ರಾಹಕರ ಪರಿಷತ್ ಶ್ರಮಿಸುತ್ತಿದೆ. ಈ ನಡುವೆ ಮೈಸೂರಿನ ಎಲ್ಲಾ ನಿವಾಸಿಗಳು ಆತ್ಮಾವಲೋಕನ ಮಾಡಿಕೊಂಡು 'ಮೈಸೂರು ನಮಗೆ ಮುಖ್ಯವೋ ಅಥವಾ ನಾವು ಮೈಸೂರಿಗೆ ಮುಖ್ಯವೋ'ಎಂದು ಪ್ರಶ್ನಿಸಿಕೊಳ್ಳಬೇಕು. ನಮಗೆ ಮೈಸೂರು ಮುಖ್ಯವಾಗಿದ್ದರೆ, ನಾವು ಇಂದು ಮೈಸೂರಿಗೆ ಏನು ಕೊಡುಗೆ ನೀಡಬೇಕು ಎಂದು ಆಲೋಚಿಸಬೇಕು. ಮೈಸೂರಿನ ಪರಿಸರ ಸಂರಕ್ಷ ಣೆಗೆ ಎಂಜಿಪಿಯು ▶ 8ನೇ ಪುಟಕ್ಕೆ

ಮೈಸೂರಿನ ವಿದ್ಯಾವರ್ಧಕ ತಾಂತ್ರಿಕ ಕಾಲೇಜಿನಲ್ಲಿ ಪದವಿ ದಿನಾಚರಣೆ



ಮೈಸೂರು, ಜ.29(ಪಿಎಂ)– ಪದವೀಧರರು ಜೀವನದಲ್ಲಿ ತಮ್ಮ ಕೌಶಲ್ಯ ಮತ್ತು ಜ್ಞಾನವನ್ನು ಸಮರ್ಪಕವಾಗಿ ಬಳಸಬೇಕೆಂದು ಬೆಂಗಳೂರಿನ ಎಪ್ಸಿಲಾನ್ ಕ್ಯಾಂಪಸ್ ನೇಮಕಾತಿ ಮುಖ್ಯಸ್ಥೆ ಅರ್ಪಿತಾ ಮಹದೇವ್ ಹೇಳಿದರು.

ಮೈಸೂರಿನ ವಿದ್ಯಾವರ್ಧಕ ತಾಂತ್ರಿಕ ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ 2020–2022ನೇ ಸಾಲಿನ ಪಿಜಿ ಪದವೀಧರರ ಪದವಿ ದಿನಾಚರಣೆಯಲ್ಲಿ ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು. ಪ್ರತಿಯೊಬ್ಬ ಪದವೀಧರರು ಗುರಿ ಮುಟ್ಟಲು ಪರಿಶ್ರಮ ವಹಿಸಬೇಕು. ಜೀವನವೆಂದರೆ ಕೇವಲ ಹಣ ಒಂದೇ ಅಲ್ಲ. ಅಲ್ಲದೆ, ಮೋಜು–ಮಸ್ತಿಯೂ ಅಲ್ಲ. ಅದಕ್ಕೂ ಮಿಗಿಲಾಗಿ ತಮಗಿರುವ ಜವಾಬ್ದಾರಿಗಳನ್ನು ಅರಿತು ಮುನ್ನಡೆಯಬೇಕು. ಬಹುಮುಖ್ಯವಾಗಿ ತಮ್ಮ ಪೋಷಕರ ಭಾವನೆಗಳನ್ನು ನಿರ್ಲಕ್ಷ್ಯ ಮಾಡಬಾರದು. ಕಠಿಣ ಪರಿಶ್ರಮವು ಯಾವಾಗಲೂ ಪ್ರತಿಫಲ ನೀಡುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು ಎಂದು ತಿಳಿ ಹೇಳಿದರು.

ಎಂಬಿಎಯಿಂದ 86, ಸಿಎಸ್ ಅಂಡ್ ಇ ಎಂ.ಟೆಕ್‌ನಿಂದ 8 ಮತ್ತು ಮೇಶಿನ್ ಡಿಸೈನ್ ಎಂ.ಟೆಕ್‌ನಿಂದ 5 ಮಂದಿ ಪದವೀಧರರಾಗಿ ಹೊರಹೊಮ್ಮಿದರು. ಈ ಪೈಕಿ ಎಂಬಿಎ ವಿಭಾಗದಲ್ಲಿ ಅಪ್ಸರಾ, ಮೊದಲ ರ್‍ಯಾಂಕ್ ಪಡೆದು ಅತ್ಯುತ್ತಮ ವಿದ್ಯಾರ್ಥಿಯಾಗಿ ಹೊರಹೊಮ್ಮಿದರು. ಅಲ್ಲದೆ, ಸಂದೀಪ್ ಕಾರಂತ್ ಮತ್ತು ಎನ್.ಮನು ಕ್ರಮವಾಗಿ ದ್ವಿತೀಯ ಮತ್ತು ತೃತೀಯ ರ್‍ಯಾಂಕ್ ಪಡೆದರು.

ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಕಾಲೇಜಿನ ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಎಲ್.ಜೆ.ಸುದೇವ್, ಪ್ರಾಂಶುಪಾಲ ಡಾ.ಬಿ.ಸದಾಶಿವೇಗೌಡ, ಡೀನ್ ಡಾ.ಶೋಭಾ ಶಂಕರ್ ಮತ್ತಿತರರು ಹಾಜರಿದ್ದರು.

ಕುರುಬರಿಂದ ಕುರುಬರಿಗಾಗಿ

ಹತ್ತು ಕುರಿ ಮರಿ, ನೀರಿನ ಕ್ಯಾನ್ ವಿತರಣೆ



ಮೈಸೂರು, ಜ.29– ನಗರದ ಆರಾಧ್ಯ ಮಹಾಸಭಾ ಸಭಾಂಗಣದಲ್ಲಿ ಎಸ್.ಪ್ರಕಾಶ್ ಪ್ರಿಯಾದರ್ಶನ್ ಸ್ನೇಹಬಳಗದ ವತಿಯಿಂದ ಶನಿವಾರ ಆಯೋಜಿಸಿದ್ದ 'ಕುರುಬರಿಂದ ಕುರುಬರಿಗಾಗಿ' ಕಾರ್ಯಕ್ರಮದಡಿ ಲಾಟರಿ ಎತ್ತುವ ಮೂಲಕ ಹತ್ತು ಕುರಿಮರಿ ಮತ್ತು ನೀರಿನ ಕ್ಯಾನ್‌ಗಳನ್ನು ಆಧ್ಯಾತ್ಮಿಕ ಗುರು ರಾಮಲಿಂಗು ಗುರೂಜಿ ವಿತರಿಸಿದರು.

ಬಳಿಕ ಮಾತನಾಡಿದ ಅವರು, ಕುರಿಗಳನ್ನು ಬಳಸಿಕೊಂಡು ಜೀವನ ರೂಪಿಸಿಕೊಳ್ಳಿ, ಪ್ರತಿಯೊಬ್ಬರೂ ಸಹಾಯ ಮನೋಭಾವ ಬೆಳೆಸಿಕೊಂಡು ಅದನ್ನು ಕಾರ್ಯರೂಪಕ್ಕೆ ತರಬೇಕು. ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಪರರಿಗೆ ಸ್ಪಂದಿಸಬೇಕು, ಮಾನವೀಯತೆಯನ್ನು ಬೆಳಸಿಕೊಳ್ಳಬೇಕು ಎಂದರು.

ಹುಣಸೂರು, ಕೆ.ಆರ್.ನಗರ, ಪಿರಿಯಾಪಟ್ಟಣ್ಣ ತಾಲೂಕಿನ ಇಬ್ಬರಿಗೆ, ತಿ.ನರಸೀಪುರ ತಾಲ್ಲೂಕಿನ ಮೂವರಿಗೆ ಮತ್ತು ವರುಣಾ ಕ್ಷೇತ್ರದ ಒಬ್ಬರಿಗೆ ಕುರಿಮರಿಗಳನ್ನು ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯಾದರ್ಶನ್, ಪ್ರೊ.ಪ್ರೇಮಕುಮಾರಿ, ಮುಖಂಡರಾದ ಗಿರೀಶ್ ಗೌಡ, ಪ್ರಮೋದ್, ಅಕ್ಷಯ್, ಉಷಾ ರಮೇಶ್, ಬಾನು, ಮಹೇಂದ್ರ ಕಾಗಿನೆಲೆ, ಸುರೇಶ್, ಸುಂದರ್‌ರಾಜ್, ಪ್ರಕಾಶ್‌ಗೌಡ, ಪುರುಷೋತ್ತಮ್, ಎಂ.ದೀಪಕ್, ಲಿಂಗರಾಜು, ಎಲ್.ಆರ್.ಪ್ರಮೋದ್, ಪವನ್‌ಕುಮಾರ್ ಉಪಸ್ಥಿತರಿದ್ದರು.



ಶಾಸಕ ಎಲ್.ನಾಗೇಂದ್ರ ಅವರ ಅನುದಾನದಲ್ಲಿ ಕೈಗೊಂಡಿರುವ ಯಾದವಗಿರಿ–ಬಂಬೂ ಬಜಾರ್ ರೈಲ್ವೆ ಅಂಡರ್‌ಪಾಸ್ ರಸ್ತೆ ಕಾಮಗಾರಿಯನ್ನು ಪಾಲಿಕೆ ಸದಸ್ಯರಾದ ರವೀಂದ್ರ, ಚಿಕ್ಕವೆಂಕಟು ಪರಿಶೀಲಿಸಿದರು. ಈ ವೇಳೆ ಬಿಜೆಪಿ ಅಧ್ಯಕ್ಷ ಕೆ.ಸೋಮಶೇಖರ್ ರಾಜು, ವಲಯ 4ರ ಇಂಜಿನಿಯರ್ ರಾಮಣ್ಣ, ಗುತ್ತಿಗೆದಾರ ಅಶೋಕ್ ಇದ್ದರು.

ವಿಜಯ ವಿಠಲ ಪಿಯು ಕಾಲೇಜಲ್ಲಿ ವಚನ ಗಾಯನ ಸ್ಪರ್ಧೆ ಉದ್ಘಾಟನೆ

ಮೈಸೂರು, ಜ.29(ಎಸ್‌ಪಿಎನ್)–ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯಕ್ಕೆ ತನ್ನದೇ ಆದ ಛಾಪು ಇದೆ. ಹಾಗಾಗಿ ಇಂದಿಗೂ ವಚನಗಳು ಸಾಹಿತ್ಯವಾಗಿ ಉಳಿದುಕೊಂಡಿವೆ ಎಂದು ಸರಸ್ವತಿಪುರಂ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಸಿ.ಎಂ.ರವೀಂದ್ರ ಅಭಿಪ್ರಾಯಪಟ್ಟರು.

ಮೈಸೂರು ಸರಸ್ವತಿಪುರಂ ವಿಜಯ ವಿಠಲ ಸಂಯುಕ್ತ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕದ ವತಿಯಿಂದ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ವಚನ ಗಾಯನ ಸ್ಪರ್ಧೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಅಲ್ಲಮ ಪ್ರಭುವಿನ ವಚನದಂತೆ ವಚನ ಕಾರ್ಯಕ್ರಮಕ್ಕೂ ಪೊಲೀಸ್ ಇಲಾಖೆಗೂ ಎತ್ತಣದತ್ತ ಸಂಬಂಧವಯ್ಯ ಎಂಬ ವಚನ ಜ್ಞಾಪಕಕ್ಕೆ ಬಂತು. ಕಾರ್ಯಕ್ರಮದ ಆಯೋಜಕರು ನನ್ನನ್ನು ಮುಖ್ಯ ಅತಿಥಿಗಳಾಗಿ ಕರೆದಾಗ ನನ್ನ ಮನಸ್ಸಿನಲ್ಲಿ ಈ ಆಲೋಚನೆ ಬಂತು. ನಂತರ ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ನನಗೂ ವಚನ ಸಾಹಿತ್ಯದ ಪರಿಚಯವಾಗುತ್ತದೆ ಎಂದು ಒಪ್ಪಿಕೊಂಡೆ ಎಂದು ತಿಳಿಸಿದರು.

ಈ ವೇಳೆ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಪ್ರೊ.ಡಿ.ಎಸ್.ಸದಾಶಿವಮೂರ್ತಿ, ವಿಜಯ ವಿಠಲ ವಿದ್ಯಾಶಾಲಾ ಕಾರ್ಯದರ್ಶಿ ಆರ್.ವಾಸುದೇವ ಭಟ್, ವಿಜಯ ವಿಠಲ ಸಂಯುಕ್ತ ಕಾಲೇಜು ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್, ಶಸಾಪ ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ಸೇರಿದಂತೆ ಇತರರಿದ್ದರು.

ನ್ಯಾಷನಲ್ ಮಾಸ್ಟರ್ಸ್ ಅಥ್ಲೆಟಿಕ್ಸ್‌ಗೆ ಆಯ್ಕೆ



ಮೈಸೂರು, ಜ.29(ಎಸ್‌ಪಿಎನ್)– ಮೈಸೂರು ಅಥ್ಲೆಟಿಕ್ ಕ್ಲಬ್ ಕಾರ್ಯದರ್ಶಿ, ಅಂತರರಾಷ್ಟ್ರೀಯ ಅಥ್ಲೆಟ್ ಮಾದಪ್ಪ ಯೋಗೇಂದ್ರ, ಕೊಲ್ಕತ್ತದ ಸ್ಪಾಟ್ ಲೇಕ್ ಕ್ರೀಡಾಂಗಣದಲ್ಲಿ ಫೆ.13ರಿಂದ 19ರವರೆಗೆ ನಡೆಯುವ 43ನೇ ನ್ಯಾಷನಲ್ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗೆ ರಾಜ್ಯವನ್ನು ಪ್ರತಿನಿಧಿಸಲು ಆಯ್ಕೆಯಾಗಿದ್ದಾರೆ ಎಂದು ಮಾಜಿ ಶಾಸಕರೂ ಆದ ಕ್ಲಬ್ ಅಧ್ಯಕ್ಷ ವಾಸು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೈಕ್ ಡಿಕ್ಕಿಯಾಗಿ ಸವಾರ ಸಾವು

ಮೈಸೂರು,ಜ.29– ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿದ ಘಟನೆ ಮೈಸೂರು–ಹುಣಸೂರು ರಸ್ತೆಯಲ್ಲಿ ಸಂಭವಿಸಿದೆ.

ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕು ಕೆನ್ನಾಳು ಗ್ರಾಮದ ಶ್ರೀನಾಥ್(38) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಜನವರಿ 26ರಂದು ರಾತ್ರಿ 11.30ರ ಸುಮಾರಿನಲ್ಲಿ ಬೈಕ್ (ಕೆಎ 09–ಹೆಚ್‌ಹೆಚ್ 2783)ನಲ್ಲಿ ಅತೀ ವೇಗವಾಗಿ ಕಲಾ ಮಂದಿರ ಕಡೆಯಿಂದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದ ಕಡೆಗೆ ತೆರಳುತ್ತಿದ್ದಾಗ ನಿಯಂತ್ರಣ ತಪ್ಪಿ ಬೈಕ್ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಈ ರಭಸಕ್ಕೆ ರಸ್ತೆಯಲ್ಲಿ ಉಜ್ಜಿಕೊಂಡು ಹೋದ ಶ್ರೀನಾಥ್, ವಿದ್ಯುತ್ ಕಂಬಕ್ಕೆ ತಲೆ ಅಪ್ಪಳಿಸಿ ಅಸುನೀಗಿದ್ದಾರೆ. ಈ ಸಂಬಂಧ ದೇವರಾಜ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅರಮನೆ ಆವರಣದಲ್ಲಿ ಯೋಗಪಟುಗಳಿಂದ ಸೂರ್ಯ ನಮಸ್ಕಾರ



ಮೈಸೂರು,ಜ.29(ಎಂಟಿವೈ)– ರಥ ಸಪ್ತಮಿ ಹಿನ್ನೆಲೆಯಲ್ಲಿ ಯೋಗ ಫೆಡರೇಶನ್ ಆಫ್ ಮೈಸೂರು ಟ್ರಸ್ಟ್ ಭಾನುವಾರ ಅರಮನೆ ಆವರಣದಲ್ಲಿ ಆಯೋಜಿಸಿದ್ದ ಸಾಮೂಹಿಕ 108 ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ನೂರಾರು ಯೋಗಪಟುಗಳು ಪಾಲ್ಗೊಂಡು ಸೂರ್ಯ ನಮಸ್ಕಾರ ಮಾಡಿದರು.

ಮೈಸೂರು ಅರಮನೆ ಆಡಳಿತ ಮಂಡಳಿ ನೆರವಿನೊಂದಿಗೆ ಯೋಗ ಫೆಡರೇಶನ್ ಆಫ್ ಮೈಸೂರು ಟ್ರಸ್ಟ್ ನೇತೃತ್ವದಲ್ಲಿ ವಿವಿಧ ಯೋಗ ತರಬೇತಿ ಸಂಸ್ಥೆಗಳ ವತಿಯಿಂದ ನಡೆದ ಸಾಮೂಹಿಕ ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ವಿವಿಧ ಯೋಗ ಶಾಲೆಗಳ ನೂರಾರು ಮಂದಿ ಯೋಗಪಟುಗಳು ಮುಂಜಾನೆ 5.30ರಿಂದ 7.30ರವರೆಗೆ 108 ಸೂರ್ಯ ನಮಸ್ಕಾರ ಮಾಡಿ ಗಮನ ಸೆಳೆದರು. ಎರಡು ಗಂಟೆಗಳ ಕಾಲ ಯೋಗಪಟುಗಳು ನಮಸ್ಕಾರ ಸ್ಥಿತಿ, ಉರ್ಧ್ವಾಸನ, ಉತ್ತನಾಸನ, ಏಕ ಪಾದ, ಚದುರಂಗ, ಅಷ್ಟಾಂಗ, ಭುಜಂಗಾಸನ, ಅಧೋಮುಖ, ಏಕಪಾದಾಸನ, ಹಸ್ತಪಾದ, ಉರ್ಧ್ವಾಸನದೊಂದಿಗೆ ನಮಸ್ಕಾರ ಸ್ಥಿತಿಗೆ ಬಂದು ಸೂರ್ಯ ನಮಸ್ಕಾರವನ್ನು ಸಮಾಪ್ತಿಗೊಳಿಸಿದರು.

ಆರೋಗ್ಯ ಕಾಪಾಡಿಕೊಳ್ಳಲು ಯೋಗ ಅನಿವಾರ್ಯ: ಸಾಮೂಹಿಕ ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಯೋಗ ಎಂಬ ಅತ್ಯದ್ಭುತ ಹಾಗೂ ಪರಿಣಾಮಕಾರಿ ಕಲೆಯನ್ನು ಮನೆ ಮನೆಗೆ ತೆಗೆದುಕೊಂಡು ಹೋಗುವ ಗುರಿ ಇಟ್ಟುಕೊಳ್ಳಲಾಗಿದೆ. ಮೈಸೂರಿನ ಎಲ್ಲಾ ಮನೆ ಹಾಗೂ ಎಲ್ಲರ ಮನದಲ್ಲೂ ಯೋಗ ಗಟ್ಟಿಗೊಳಿಸಬೇಕು. ಯೋಗ ಮಾಡಲು ಉತ್ತೇಜಿಸುವ ನಿಟ್ಟಿನಲ್ಲಿ ಮೈಸೂರು ಯೋಗ ಫೌಂಡೇಶನ್ ಮುಂದಾಗಿದೆ. ಯೋಗಕ್ಕೆ ಇನ್ನಷ್ಟು ಶಕ್ತಿ ತುಂಬುವುದಕ್ಕಾಗಿ ನ್ಯಾಚುರೋಪತಿ ಹಾಗೂ ಆಯುರ್ವೇದ ಇಲಾಖೆಗಳು ಕೈಜೋಡಿಸುತ್ತಿವೆ ಎಂದು ಹೇಳಿದರು.

ಮೈಸೂರಲ್ಲಿ ಜೂ.21ಕ್ಕೆ ಅಂತಾರಾಷ್ಟ್ರೀಯ ಯೋಗ ದಿನವನ್ನು ಸಂಭ್ರಮದಿಂದ ಆಚರಿಸಲು ನಿರ್ಧರಿಸಲಾಗಿದೆ. ಅಂದು ಯೋಗದಲ್ಲಿ ವಿಶ್ವ ದಾಖಲೆ ನಿರ್ಮಿಸಲು ಅಗತ್ಯ ಸಿದ್ಧತೆ ನಡೆಸಲಾಗುತ್ತಿದೆ. ಈ ಮೂಲಕ ಜನಸಾಮಾನ್ಯರಲ್ಲಿ ಯೋಗದ ರುಚಿಯನ್ನು ಇನ್ನಷ್ಟು ಹೆಚ್ಚಿಸಬೇಕಾಗಿದೆ. ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆ ಯೋಗಪಟುಗಳು ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.

ಸಕ್ಕರೆ ಖಾಯಿಲೆ ಬಗ್ಗೆ ಎಚ್ಚರವಿರಲಿ: ಪ್ರಸ್ತುತ ಸಂದರ್ಭದಲ್ಲಿ ವಿವಿಧ ವಯೋಮಾನದವರಲ್ಲಿ ಸಕ್ಕರೆ ಖಾಯಿಲೆ ಸಮಸ್ಯೆ ಕಾಡುತ್ತಿದೆ. ಇದೀಗ ಸಕ್ಕರೆ ಖಾಯಿಲೆ ಸಾಮಾನ್ಯ ಎನಿಸಿಬಿಟ್ಟಿದೆ. ಈ ಕುರಿತು ಜನರಲ್ಲಿ ಜಾಗೃತಿ ಮೂಡಿಸಬೇಕಾಗಿದೆ. ಎಲ್ಲರೂ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಸಕಾಲಕ್ಕೆ ತಪಾಸಣೆ ಮಾಡಿಸಿಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕು. ಅದನ್ನು ನಿಯಂತ್ರಿಸದಿದ್ದಲ್ಲಿ ಭವಿಷ್ಯದ ಬದುಕಿನಲ್ಲಿ ದುಬಾರಿ ಬೆಲೆ ತರಬೇಕಾಗುತ್ತದೆ. ಆ ಕಾರಣಕ್ಕಾಗಿ ಎಲ್ಲರ ಬದುಕಿನಲ್ಲಿ ಯೋಗ ಎಂಬುದು ಅನಿವಾರ್ಯವಾಗಿದೆ ಎಂದರು.

ಇದೆ ವೇಳೆ ವಿಜಯನಗರದ ಶ್ರೀ ಯೋಗ ನರಸಿಂಹಸ್ವಾಮಿ ದೇವಾಲಯದ ಸಂಸ್ಥಾಪಕ ಡಾ.ಭಾಷ್ಯಂ ಸ್ವಾಮೀಜಿ ಮಾತನಾಡಿ, ಪ್ರತಿದಿನ ಸೂರ್ಯ ನಮಸ್ಕಾರ ಮಾಡುವುದರಿಂದ ಸೂರ್ಯನ ಕಿರಣ ಮೈ ಮೇಲೆ ಬೀಳುವುದರಿಂದ ನಮ್ಮ ಆರೋಗ್ಯ ಕಾಪಾಡಿಕೊಳ್ಳಲು ಸಹಕಾರಿಯಾಗಲಿದೆ. ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಯೋಗ ಅಭ್ಯಾಸ ಮಾಡುವುದು ಅನಿವಾರ್ಯವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಶ್ರೀ ಯೋಗ ನರಸಿಂಹ ಸ್ವಾಮಿ ದೇವಾಲಯದ ಆಡಳಿತಾಧಿಕಾರಿ ಶ್ರೀನಿವಾಸ್, ಜಿಎಸ್‌ಎಸ್ ಫೌಂಡೇಷನ್ ಮುಖ್ಯಸ್ಥ ಶ್ರೀಹರಿ, ಉಪ ಮೇಯರ್ ರೂಪ, ಡಾ.ಎಸ್.ಪಿ.ಯೋಗಣ್ಣ, ಆಯುರ್ವೇದ ಕಾಲೇಜಿನ ಪ್ರಾಂಶುಪಾಲ ಗಜಾನನ ಹೆಗಡೆ, ಸಂಚಾಲಕ ಲಕ್ಷ್ಮಿನಾರಾಯಣ್ ಶೆಣೈ ಇನ್ನಿತರರಿದ್ದರು.

ಕೆ.ಆರ್. ಕ್ಷೇತ್ರದಲ್ಲಿ ಸಕ್ಕರೆ ಕಾಯಿಲೆಯಿಂದ ಬಳಲುತ್ತಿರುವವರಿಗೆ ಐದು ವರ್ಷ ನಿರಂತರ ಆರೋಗ್ಯ ಕಾರ್ಯಕ್ರಮ

ಶಾಸಕ ಎಸ್.ಎ.ರಾಮದಾಸ್ ಘೋಷಣೆ



ಮೈಸೂರು, ಜ.29(ಜಿಎ)–ಕೆ.ಆರ್. ಕ್ಷೇತ್ರದಲ್ಲಿ ಸಕ್ಕರೆ ಕಾಯಿಲೆಯಿಂದ ಬಳಲುತ್ತಿರುವವರಿಗಾಗಿ ಕ್ಷೇತ್ರದಲ್ಲಿ ಐದು ವರ್ಷ ನಿರಂತರವಾಗಿ ಆರೋಗ್ಯ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ಶಾಸಕ ಎಸ್.ಎ.ರಾಮದಾಸ್ ತಿಳಿಸಿದರು.

ಕೃಷ್ಣರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 48ನೇ ವಾರ್ಡ್‌ನಲ್ಲಿ ಆಯೋಜಿಸಲಾಗಿದ್ದ ಸರ್ಕಾರಿ ಸವಲತ್ತುಗಳ ಅದಾಲತ್, ವಾರ್ಡಿನ ಸಮಸ್ಯೆಗಳ ಪರಿಹಾರ ಕಾರ್ಯಕ್ರಮ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಆರೋಗ್ಯ ಇಲಾಖೆಯವರು ನಡೆಸಿದ ಸರ್ವೇ ಪ್ರಕಾರ ಕೃಷ್ಣರಾಜ ಕ್ಷೇತ್ರ ವ್ಯಾಪ್ತಿಯಲ್ಲಿ ಸರಿ ಸುಮಾರು 60 ಸಾವಿರಕ್ಕೂ ಅಧಿಕ ಮಂದಿ ಸಕ್ಕರೆ ಕಾಯಿಲೆಯಿಂದ ಬಳಲುತ್ತಿರುವುದು ಕಂಡುಬಂದಿದೆ. ಇದು ನಿಜಕ್ಕೂ ಆತಂಕಕಾರಿ ಬೆಳವಣಿಗೆ. ದೈನಂದಿನ ಬದುಕಿನ ಒತ್ತಡದಿಂದಾಗಿ ಇಂದು ಸಕ್ಕರೆ ಕಾಯಿಲೆ ವ್ಯಾಪಕವಾಗಿ ಹರಡಿದ್ದು, ಅದರ ವಿರುದ್ಧ ಸಮರ ಸಾರುವ ಕಾರ್ಯಕ್ರಮ ರೂಪಿಸಲಾಗಿದೆ. ಈ ಕಾರಣಕ್ಕಾಗಿ ಮುಂದಿನ ಐದು ವರ್ಷಗಳ ಕಾಲ ಕ್ಷೇತ್ರದಲ್ಲಿ ಆರೋಗ್ಯ ಕಾರ್ಯಕ್ರಮ ನಿರಂತರವಾಗಿ ನಡೆಯಲಿದೆ ಎಂದರು.

ಸರ್ಕಾರಿ ಸವಲತ್ತುಗಳ ಉಪಯೋಗ ಪಡೆದುಕೊಳ್ಳಿ, ಅಂತೆಯೇ, ನಿಮ್ಮ ಮಕ್ಕಳಿಗೆ ಕೆಲಸ ಬೇಕಿದ್ದಲ್ಲಿ ಫೆ.14ರಂದು ವಸ್ತು ಪ್ರದರ್ಶನ ಆವರಣದಲ್ಲಿ ನಡೆಯಲಿರುವ ಬೃಹತ್ ಉದ್ಯೋಗ ಮೇಳದಲ್ಲಿ ಭಾಗವಹಿಸಲು ತಿಳಿಸಿ, ನೂರಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಮೇಳದಲ್ಲಿ ಭಾಗವಹಿಸುತ್ತಿವೆ. ಅದರ ಪ್ರಯೋಜನ ಮಕ್ಕಳು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಸಮಸ್ಯೆಗೆ ಪರಿಹಾರ ಕೇಳಿಕೊಂಡು ನೀವು ಸರ್ಕಾರಿ ಕಚೇರಿಗೆ ಹೋಗುವ ಬದಲಾಗಿ ಸಮಸ್ಯೆ ಬಗೆಹರಿಸಲು ಸರ್ಕಾರಿ ಕಚೇರಿಗಳೇ ನಿಮ್ಮ ಮನೆ ಬಾಗಿಲಿಗೆ ಬಂದಿವೆ. ಇದರ ಸದುಪಯೋಗ ಆಗಬೇಕು. ಇಡೀ ಕ್ಷೇತ್ರ ವ್ಯಾಪ್ತಿಯಲ್ಲಿ ಅದಾಲತ್ ಕಾರ್ಯಕ್ರಮ ರೂಪಿಸಿದ್ದು, ನೀರು, ಒಳಚರಂಡಿ, ಅರಣ್ಯ, ರಸ್ತೆ, ಆರೋಗ್ಯ, ವಿದ್ಯುತ್, ಶಿಕ್ಷಣ, ಕಾರ್ಮಿಕ ಸೇರಿದಂತೆ 20 ಇಲಾಖೆಗಳ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳ ಜೊತೆಗೂಡಿ ಪರಿಹಾರ ಕಲ್ಪಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ.

ಸವಲತ್ತುಗಳಿಗಾಗಿ ಸರ್ಕಾರಿ ಕಚೇರಿ ಅಲೆಯುವುದನ್ನು ತಪ್ಪಿಸುವ ಸಲುವಾಗಿಯೇ ಈ ಮಾದರಿಯ ಕಾರ್ಯಕ್ರಮವನ್ನು ಕ್ಷೇತ್ರದಾದ್ಯಂತ 19 ದಿನಗಳ ಕಾಲ ಆಯೋಜಿಸಲಾಗಿದೆ. ಎಲ್ಲಾ ಬಗೆಯ ಸವಲತ್ತುಗಳನ್ನು ಒಂದೇ ಸೂರಿನಡಿ ಕಲ್ಪಿಸಲಾಗಿದ್ದು, ಸಾರ್ವಜನಿಕರು ಕಾರ್ಯಕ್ರಮದ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ನಗರಪಾಲಿಕೆ ಸದಸ್ಯೆ ಶೋಭಾ ಸೇರಿದಂತೆ ವಾರ್ಡ್‌ನ ಮುಖಂಡರು ಉಪಸ್ಥಿತರಿದ್ದರು.

ಎನ್.ಆರ್ ಕ್ಷೇತ್ರದಲ್ಲಿ ಬಿಜೆಪಿ ಸಂಕಲ್ಪ ಅಭಿಯಾನ, ಕರಪತ್ರ ವಿತರಣೆ



ಮೈಸೂರು, ಜ.29(ಆರ್‌ಕೆಬಿ)– ನರಸಿಂಹರಾಜ ವಿಧಾನಸಭಾ ಕ್ಷೇತ್ರದ 15ನೇ ವಾರ್ಡ್‌ನ ರಾಜೇಂದ್ರ ನಗರ ಕುರಿಮಂಡಿ ಭಾಗದಲ್ಲಿ ಬಿಜೆಪಿ ವಿಜಯ ಸಂಕಲ್ಪ ಅಭಿಯಾನದ ಅಂಗವಾಗಿ ಬಿಜೆಪಿ ಮುಖಂಡ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ನಂಜುಂಡಸ್ವಾಮಿ ನೇತೃತ್ವದಲ್ಲಿ ಕಮಲ ಗುರುತಿರುವ ಗೋಡೆ ಬರಹಕ್ಕೆ ಬಣ್ಣ ಹಚ್ಚುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮನೆ ಮನೆಗೆ ತೆರಳಿ ರಾಜ್ಯ ಬಿಜೆಪಿ ಸರ್ಕಾರದ ಯೋಜನೆ ಮತ್ತು ಸಾಧನೆಗಳ ಕುರಿತ ಕರಪತ್ರಗಳನ್ನು ಸಾರ್ವಜನಿಕರಿಗೆ ವಿತರಿಸಿ, ಸರ್ಕಾರದ ಕಾರ್ಯವನ್ನು ಮನವರಿಕೆ ಮಾಡಿಕೊಟ್ಟರು. ಇದೇ ವೇಳೆ ಫಲಾನುಭವಿಗಳ ಪಟ್ಟಿ ಮಾಡಿ 8000090009 ಸಂಖ್ಯೆಗೆ ಮಿಸ್ ಕಾಲ್ ಕೊಡುವ ಮೂಲಕ ಸದಸ್ಯತ್ವ ನೋಂದಣಿ ಮಾಡಲಾಯಿತು. ಕಾರ್ಯಕ್ರಮದಲ್ಲಿ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಸ್ವಾಮಿಗೌಡ, ಕ್ಷೇತ್ರ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ವಿನೋದ್, ವಿವಿಧ ಭಾಷೆಗಳ ಪ್ರಕೋಷ್ಠ ಸಂಚಾಲಕ ನಾಗರಾಜ್, ಹಿರಿಯ ನಾಗರಿಕರ ಪ್ರಕೋಷ್ಟ ಸಂಚಾಲಕ ರಂಗಸ್ವಾಮಿ, ಮುಖೇಶ್ ಮಣಿಕಂಠ, ವಾರ್ಡ್‌ನ ವಿವಿಧ ಬೂತ್ ಅಧ್ಯಕ್ಷರಾದ ಕೀರ್ತಿ, ಸತೀಶ್, ಪ್ರೀತಿ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಉತ್ಕರ್ಷ್ ಸ್ಮಾಲ್ ಫೈನಾನ್ಸ್ ಬ್ಯಾಂಕಿಂಗ್ ಔಟ್‌ಲೆಟ್

ಮೈಸೂರು,ಜ.29–ಶಿವಮೊಗ್ಗ ಹಾಗೂ ಮೈಸೂರಿನಲ್ಲಿ ಉತ್ಕರ್ಷ್ ಸ್ಮಾಲ್ ಫೈನಾನ್ಸ್ ಬ್ಯಾಂಕಿಂಗ್ ಔಟ್ ಲೆಟ್‌ಗಳನ್ನು ಆರಂಭಿಸಿದೆ ಈ ಮೂಲಕ ಬ್ಯಾಂಕ್ ದೇಶಾದ್ಯಂತ 25 ಬ್ಯಾಂಕಿಂಗ್ ಔಟ್ ಲೆಟ್‌ಗಳನ್ನು ಆರಂಭಿಸಿದ್ದು, ಈ ಮೂಲಕ ತನ್ನ ಅಸ್ತಿತ್ವವನ್ನು 25 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ವಿಸ್ತರಿಸಿದೆ ಎಂದು ಉತ್ಕರ್ಷ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಎಂಡಿ ಮತ್ತು ಸಿಇಒ ಗೋವಿಂದ್ ಸಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರತಿ ಮನೆಗೆ ಬಿಜೆಪಿ ಸಾಧನೆ ಮನವರಿಕೆ ಮಾಡಿಕೊಡಿ

● ಬಿಜೆಪಿ ಕಾರ್ಯಕರ್ತರಿಗೆ ರಾಜ್ಯಾಧ್ಯಕ್ಷ ಕಟೀಲ್ ಸೂಚನೆ ● ಬೂತ್ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ



ಮೈಸೂರು, ಜ.29(ಎಸ್‌ಪಿಎನ್)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿ ಗೆಲ್ಲಬೇಕಾದರೆ, ಬೂತ್ ಮಟ್ಟದ ಕಾರ್ಯಕರ್ತರು ಮತದಾರರ ಮನೆ ಮನೆ ಭೇಟಿ ನೀಡಿ, ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಾಧನೆಗಳನ್ನು ತಿಳಿಸಿದಾಗ ಮಾತ್ರ ಸಾಧ್ಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅಭಿಪ್ರಾಯಪಟ್ಟರು.

ಮೈಸೂರು ಯಾದವಗಿರಿಯ ಬಯಲು ರಂಗ ಮಂದಿರದಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರ ಬಿಜೆಪಿ ಘಟಕದ ವತಿಯಿಂದ ಆಯೋಜಿಸಿದ್ದ 'ಬೂತ್ ವಿಜಯ ಸಂಕಲ್ಪ' ಅಭಿಯಾನಕ್ಕೆ ವಾರ್ಡ್ ನಂ.18 ರಲ್ಲಿ 10 ಮಂದಿ ಮತದಾರರ ಮನೆಗಳಿಗೆ ಭೇಟಿ ನೀಡುವ ಮೂಲಕ ಚಾಲನೆ ನೀಡಿದರು.


ಒಂದು ಕ್ಷೇತ್ರದಲ್ಲಿ ನಮ್ಮ ಪಕ್ಷದ ಅಭ್ಯರ್ಥಿ ಗೆಲ್ಲಬೇಕಾದರೆ, ಬೂತ್ ಮಟ್ಟದ ಕಾರ್ಯಕರ್ತರು ಸಕ್ರಿಯರಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಧನೆಗಳನ್ನು ಮತದಾರರಿಗೆ ತಿಳಿಸಿದಾಗ ಮಾತ್ರ ಸಾಧ್ಯ. ಮೈಸೂರು–ಬೆಂಗಳೂರು ದಶಪಥ ರಸ್ತೆ ಅಭಿವೃದ್ಧಿ ಸೇರಿದಂತೆ ಮೈಸೂರಿನ ಅಭಿವೃದ್ಧಿಗೆ ರಾಜ್ಯ ಸರ್ಕಾರ ಹಮ್ಮಿಕೊಂಡಿರುವ ಅಭಿವೃದ್ಧಿ ಕೆಲಸಗಳನ್ನು ಪ್ರತಿ ಮನೆಮನೆಗೂ ತಿಳಿಸುವುದು ಪ್ರತಿಯೊಬ್ಬ ಕಾರ್ಯಕರ್ತನ ಕರ್ತವ್ಯ ಎಂದು ತಿಳಿಸಿದರು.

ಶಾಸಕ ಎಲ್.ನಾಗೇಂದ್ರ ಮಾತನಾಡಿ, ಚಾಮರಾಜ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ 1500 ಕೋಟಿ ರೂ. ಅನುದಾನ ನೀಡಿದೆ. ಈ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಅಲ್ಲದೆ, ಈ ಕ್ಷೇತ್ರದ ಕಾರ್ಯಕರ್ತರನ್ನು ಗುರುತಿಸಿ ಸಾಧ್ಯವಾದಷ್ಟು ಕೆಲಸ–ಕಾರ್ಯಗಳಿಗೆ ಸ್ಪಂದಿಸುತ್ತಿದ್ದೇನೆ. ಕಾರ್ಯಕರ್ತರು ಮನೆಮನೆಗೆ ಭೇಟಿ ನೀಡಿ, ನಮ್ಮ ಸರ್ಕಾರ ಮತ್ತು ನಮ್ಮ ಕೆಲಸ–ಕಾರ್ಯವನ್ನು ಮತದಾರಿಗೆ ತಲುಪಿಸುವ ಹೊಣೆಗಾರಿಕೆ ನಿಮ್ಮ ಮೇಲಿದೆ ಎಂದರು.

ನಂತರ 18ನೇ ವಾರ್ಡ್‌ನ ಬಿಜೆಪಿ ಅಧ್ಯಕ್ಷ ಕಿರಣ್ ಬೊಲಾರೆ ಅವರ ಮನೆಗೆ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಭೇಟಿ ನೀಡಿ, ಚಹ ಸೇವಿಸಿ ಕುಶಲೋಪರಿ ಮಾತುಕತೆ ನಡೆಸಿದರು.

ಈ ವೇಳೆ ಮೇಯರ್ ಶಿವಕುಮಾರ್, ನಗರ ಪಾಲಿಕೆ ಸದಸ್ಯ ರವೀಂದ್ರ, ಸುಬ್ಬಯ್ಯ, ರಂಗಸ್ವಾಮಿ, ಚಿಕ್ಕವೆಂಕಟು, ಬಿಜೆಪಿ ಮೈಸೂರು ನಗರ ಘಟಕದ ಅಧ್ಯಕ್ಷ ಶ್ರೀವತ್ಸ, ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ನಗರ ಘಟಕದ ಉಪಾಧ್ಯಕ್ಷ ಎಸ್.ಎ.ದಿನೇಶ್, ಚಾಮರಾಜ ಕ್ಷೇತ್ರದ ಅಧ್ಯಕ್ಷ ಸೋಮಶೇಖರ ರಾಜು, ಪ್ರಧಾನ ಕಾರ್ಯದರ್ಶಿ ರಮೇಶ್ ಪುನೀತ್, ಯುವ ಮೋರ್ಚಾ ನಗರಾಧ್ಯಕ್ಷ ಕಿರಣ್‌ಗೌಡ, ಮಹಿಳಾ ಮೋರ್ಚಾ ನಗರಾಧ್ಯಕ್ಷೆ ಹೇಮಾ ನಂದೀಶ್, ಚಾಮರಾಜ ಯುವ ಮೋರ್ಚಾ ಅಧ್ಯಕ್ಷ ಸಚಿನ್, ಮಹಿಳಾ ಮೋರ್ಚಾ ಅಧ್ಯಕ್ಷೆ ತನುಜಾ ಮಹೇಶ್, ಆಶ್ರಯ ಸಮಿತಿ ಸದಸ್ಯರಾದ ಅನೋಜ್ ಸರಸ್ವತ್, ಎಸ್.ಟಿ.ಮಹೇಶ್ ಉಪಸ್ಥಿತರಿದ್ದರು. ನಂತರ ಕಟೀಲ್ ಅವರು, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಸಾಹಿತಿ ಡಾ.ಎಸ್.ಎಲ್. ಭೈರಪ್ಪ, ಪದ್ಮಶ್ರೀ ಪುರಸ್ಕೃತರಾದ ಡಾ.ಖಾದರ್ ವಲ್ಲಿ ದುಡೆಕುಲ ಹಾಗೂ ಪುರಾತತ್ವ ಇಲಾಖೆಯ ನಿವೃತ್ತ ಸೂಪರಿಂಟೆಂಡಿಂಗ್ ಎಸ್.ಸುಬ್ಬರಾಮನ್ ಅವರ ಮನೆಗೆ ಭೇಟಿ ನೀಡಿ ಸನ್ಮಾನಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.1.2023 ಸೋಮವಾರ, ಮಳೆ ನಕ್ಷತ್ರ: ಶ್ರವಣ, 24.01.2023ರಿಂದ 05.02.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಕೃತಿಕ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಡಿಪಾರ್ಟ್‌ಮೆಂಟ್ ಆಫ್ ಮೆಕ್ಯಾನಿಕಲ್ ಇಂಜಿನಿಯರಿಂಗ್ ದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ :** ಎಂಎಸ್‌ಎಂಇ ಅಭಿವೃದ್ಧಿಗಾಗಿ ಆಟೋಮೇಷನ್ ತಂತ್ರಜ್ಞಾನಗಳಲ್ಲಿ ಇತ್ತೀಚಿನ ಪ್ರವೃತ್ತಿಗಳು ಕುರಿತು ಕಾರ್ಯಾಗಾರ, ಸ್ಥಳ: ಸರ್ವಪಲ್ಲಿ ರಾಧಾಕೃಷ್ಣನ್ ಸೆಮಿನಾರ್ ಹಾಲ್, ಅಡ್ಮಿನ್ ಬ್ಲಾಕ್, ಎನ್‌ಐಇ, ಬೆಳಗ್ಗೆ 9.30ಕ್ಕೆ.

■ **ಮೈಸೂರು ನಗರ ಕಾಂಗ್ರೆಸ್ ಸಮಿತಿ :** 'ಭಾರತ್ ಜೋಡೋ ಯಾತ್ರೆ'ಯ ಮುಕ್ತಾಯ ಸಮಾರಂಭ ಮತ್ತು ರಾಷ್ಟ್ರ ಧ್ವಜಾರೋಹಣ, ಸ್ಥಳ: ಕಾಂಗ್ರೆಸ್ ಭವನ, ರೈಲ್ವೇ ನಿಲ್ದಾಣ ಬಳಿ, ಬೆಳಗ್ಗೆ 10 ಗಂಟೆಗೆ.

■ **ತ್ರಯಿನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್ :** ಶ್ರೀ ಶ್ಯಾಮಲಾ ನವರಾತ್ರಿ ಮಹೋತ್ಸವ, ಶ್ರೀ ಚಕ್ರಾರ್ಚನೆ, ನವಾವರಣ ಪೂಜಾ, ಬೆಳಗ್ಗೆ 10 ಗಂಟೆಗೆ, ಸಗ್ರಹಮುಖ ಚಂಡಿಯಾಗ, ಮಧ್ಯಾಹ್ನ 1 ಗಂಟೆಗೆ, ಪೂರ್ಣಾಹುತಿ, ಬಲಿ ಹರಣ, ಕುಮಾರಿ, ಸುವಾಸಿನಿ, ವಟುಕ ಪೂಜಾ, ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ಪ್ರಸಾದ ವಿನಿಯೋಗ, ಸ್ಥಳ: ಫೌಂಡೇಷನ್ ಆವರಣ, ಜಯಲಕ್ಷ್ಮೀಪುರಂ.

■ **ಸೌಹಾರ್ದ ಕರ್ನಾಟಕ, ಮೈಸೂರು:** ಗಾಂಧೀಜಿ ಹುತಾತ್ಮ ದಿನದ ಅಂಗವಾಗಿ 'ಸಹಬಾಳ್ವೆಗಾಗಿ ಸೌಹಾರ್ದ ನಡಿಗೆ', ಸ್ಥಳ: ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಗಾಂಧಿ ಅಧ್ಯಯನ ಕೇಂದ್ರ, ಗಾಂಧಿ ಭವನ, ಶೇಷಾದ್ರಿಪುರಂ ಪದವಿ ಕಾಲೇಜು** : 75ನೇ ಸರ್ವೋದಯ ದಿನಾಚರಣೆ, ಸ್ಥಳ: ಗಾಂಧಿ ಭವನ, ಮಾನಸ ಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ, ಮೈಸೂರು :** ಫೀಲ್ಡ್ ಮಾರ್ಷಲ್ ಕೆ.ಎಂ. ಕಾರಿಯಪ್ಪ ಜನ್ಮದಿನಾಚರಣೆ, ಅಧ್ಯಕ್ಷತೆ: ಭೈರವೇಶ್ವರ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾದ ಸೌಮ್ಯ, ಪ್ರಧಾನ ಭಾಷಣ: ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಅತಿಥಿ: ಲೇಖಕಿ ಡಾ. ಜಮುನಾರಾಣಿ, ಬಹುಮಾನ ವಿತರಣೆ: ಶಾಲಾ ಆಡಳಿತಾಧಿಕಾರಿ ಶ್ರೀಮತಿ ಪಂಚಾಕ್ಷರಿ, ಸ್ಥಳ: ಶ್ರೀ ಭೈರವೇಶ್ವರ ಪ್ರೌಢಶಾಲೆ, ಭೈರವೇಶ್ವರನಗರ, ಹೆಬ್ಬಾಳು, ಬೆಳಗ್ಗೆ 11 ಗಂಟೆಗೆ.

■ **ಜೆಎಸ್‌ಎಸ್ ಸೈನ್ಸ್ ಅಂಡ್ ಟೆಕ್ನಾಲಜಿ ಯುನಿವರ್ಸಿಟಿ :** ವಜ್ರ ಮಹೋತ್ಸವದ ಅಂಗವಾಗಿ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯಗಳ ಮಹಿಳಾ ಕ್ರಿಕೆಟ್ ಟೂರ್ನಮೆಂಟ್, ಸಾನಿಧ್ಯ: ಶ್ರೀ ಸುತ್ತೂರು ಶ್ರೀ ದೇಶಿಕೇಂದ್ರ ಮಹಾಸ್ವಾಮಿಗಳು, ಸ್ಥಳ: ಕೆಎಸ್‌ಸಿಎ ಮೈದಾನ, ಜೆಎಸ್‌ಎಸ್ ಟಿಐ ಕ್ಯಾಂಪಸ್, ಸಂಜೆ 5 ಗಂಟೆಗೆ.

■ **ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ :** ನಿವೃತ್ತ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಧರಣಿ, ಸ್ಥಳ: ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ, ಬೆಳಗ್ಗೆ 11 ಗಂಟೆಗೆ.

■ **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ಧಾರ್ಮಿಕ ಪ್ರವಚನ, ಬೆಂಗಳೂರಿನ ಪಂಡಿತ ಕೆಲ್ಯ ಶ್ರೀಕಾಂತಾಚಾರ್ ಅವರಿಂದ 'ಸಮಧ್ವ ವಿಜಯ' ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ 5.30ಕ್ಕೆ.

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ತ್ರಿಣೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಬೆಳಗ್ಗೆ 9.30ಕ್ಕೆ ಶುಭ ಮೀನ ಲಗ್ನದಲ್ಲಿ ಧ್ವಜಾರೋಹಣ, ರಾತ್ರಿ 7 ಗಂಟೆಗೆ ಬೇರಿತಾಡನ, ಬಲಿ ಪ್ರಧಾನ ವೃಷಭ ವಾಹನೋತ್ಸವ, ಸ್ಥಳ: ಮೈಸೂರು ಅರಮನೆ ಆವರಣ.



ಕ್ಷಣಾರ್ಧದಲ್ಲಿ ವಿಷ್ಣು ಚಿತ್ರ ಬಿಡಿಸಿದ ಬಾಲಕ

ಆರನೇ ತರಗತಿಯ ಮಂಡ್ಯದ ವಿಷ್ಣು ಪ್ರಸಾದ್ ಎಂಬ ಬಾಲಕ ಕ್ಷಣಾರ್ಧದಲ್ಲಿ ತನ್ನ ಅಭಿಮಾನಿ ನಟ ಡಾ.ವಿಷ್ಣುವರ್ಧನ್ ಅವರ ಭಾವಚಿತ್ರವನ್ನು ಬಣ್ಣಗಳಿಂದ ಬಿಡಿಸುವ ಮೂಲಕ ಎಲ್ಲರ ಕಣ್ಮನ ಸೆಳೆದ. ರಾಜ್ಯ ಮಟ್ಟದ ಚಿತ್ರ ಕಲಾವಿದನಾದ ಆತ ಸಮಾರಂಭ ಸ್ಥಳದಲ್ಲಿಯೇ ಬಿಳಿ ಹಾಳೆಯಲ್ಲಿ ವಿಷ್ಣುವರ್ಧನ್‌ನ ಭಾವಚಿತ್ರಗಳ ಗೆರೆ ಮೂಡಿಸಿ, ಅದಕ್ಕೆ ಬಣ್ಣ ಹಚ್ಚಿ ವಿಷ್ಣುವರ್ಧನ್ ಭಾವಚಿತ್ರವನ್ನು ರಚಿಸಿದ್ದು ವಿಶೇಷವಾಗಿತ್ತು.

ಮೈಸೂರಲ್ಲಿ ವಿಷ್ಣುವರ್ಧನ್ ಭಾವಚಿತ್ರದ ಬೃಹತ್ ಮೆರವಣಿಗೆ




ಮೈಸೂರು, ಜ.29(ಆರ್‌ಕೆಬಿ)– ಮೈಸೂರು ಅರಮನೆ ಉತ್ತರ ದ್ವಾರದಲ್ಲಿರುವ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಶ್ರೀರಾಂಪುರ ಹೊರವರ್ತುಲ ರಸ್ತೆ ಜಂಕ್ಷನ್‌ವರೆಗೆ ಮಾಜಿ ಕಾರ್ಪೊರೇಟರ್ ಎಂ.ಡಿ.ಪಾರ್ಥಸಾರಥಿ (ಪಾತಿ) ನೇತೃತ್ವದಲ್ಲಿ ವಿಷ್ಣುವರ್ಧನ್ ಅಭಿಮಾನಿಗಳು ವಿಶೇಷ ರಥದಲ್ಲಿ ಭಾವಚಿತ್ರದ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿದ್ದ ಅಭಿಮಾನಿಗಳು ತಮ್ಮ ವಿಷ್ಣು ನಟನೆಯ ಮೊದಲ 'ನಾಗರಹಾವು' ಚಿತ್ರದ ಭಾವಚಿತ್ರವಿರುವ ಬಿಳಿಯ ಧ್ವಜವನ್ನು ಬೀಸಿ, ತಮ್ಮ ಅಭಿಮಾನಿ ನಟನ ಪರ ಘೋಷಣೆಗಳನ್ನು ಕೂಗಿದರು. ಬಳಿಕ ಹಾಲಾಳು ಗ್ರಾಮದತ್ತ ತೆರಳಿ, ಸ್ಮಾರಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಅಭಿಮಾನಿಗಳ ಒಳಬಿಡದ ಪೊಲೀಸರು; ಮುಖ್ಯ ಗೇಟು ಹತ್ತಿ ಒಳನುಗ್ಗಲು ಯತ್ನಿಸಿದ ಅಭಿಮಾನಿಗಳ ತಡೆದ ಪೊಲೀಸರು

ಜಿಟಿಡಿ ಮಧ್ಯ ಪ್ರವೇಶ; ಅಭಿಮಾನಿಗಳಿಗೆ ವಿಷ್ಣು ಪ್ರತಿಮೆ ನೋಡಲು ಅವಕಾಶ

ಪ್ರತಿಮೆ ಕಂಡು ಕಣ್ಣೀರಿಟ್ಟರು, ಹರ್ಷದಿಂದ ಸಂಭ್ರಮಿಸಿದ ಅಭಿಮಾನಿಗಳು



ಮೈಸೂರು, ಜ.29(ಆರ್‌ಕೆಬಿ)– ತಮ್ಮ ಅಭಿಮಾನಿ ನಟನನ್ನು ಕಾಣಲು ಸ್ಮಾರಕ ಸ್ಥಳಕ್ಕೆ ತಂಡೋಪತಂಡವಾಗಿ ಆಗಮಿಸಿದ ಅಭಿಮಾನಿಗಳಿಗೆ ಸ್ಮಾರಕ ನೋಡಲು ಒಳಬಿಡದೆ ಪೊಲೀಸರ ತಡೆ ಒಡ್ಡಿದರು. ಸಾಕಷ್ಟು ಹೊತ್ತು ಸ್ಮಾರಕ ನೋಡಲು ಬಿಡುವಂತೆ ನೂರಾರು ಸಂಖ್ಯೆಯ ಅಭಿಮಾನಿಗಳು ಒತ್ತಾಯ ಮಾಡಿದರು. ಆದರೂ ಪೊಲೀಸರು ಒಳಬಿಡಲು ಮನಸ್ಸು ಮಾಡಲಿಲ್ಲ. ಗೇಟಿಗೆ ಬೀಗ ಹಾಕಲಾಗಿತ್ತು. ಇದು ಅಭಿಮಾನಿಗಳ ಸಹನೆಯನ್ನು ಕೆಣಕಿದಂತಾಯಿತು. ಗೇಟು ಹತ್ತಿ ಒಳನುಗ್ಗಲು ಕೆಲವರು ಯತ್ನಿಸಿದರು. ಅವರ ಯತ್ನವನ್ನು ಪೊಲೀಸರು ತಡೆಗಟ್ಟಿದರು.

ಇದು ಸಹಜವಾಗಿ ಅಭಿಮಾನಿಗಳ ಸಹನೆಯನ್ನು ಮತ್ತಷ್ಟು ಕೆರಳಿಸಿತು. ಘೋಷಣೆಗಳನ್ನು ಕೂಗಿದರು. ತಮ್ಮ ಅಭಿಮಾನಿ ನಟದ ಸ್ಮಾರಕ ನೋಡಲು ಬಿಡದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. ಮುಖ್ಯಮಂತ್ರಿಗಳ ಕಾರ್ಯಕ್ರಮ ಮುಗಿಸಿ ಹೊರ ಹೋಗಲು ಕಾದಿದ್ದವರಿಗೆ ಗೇಟು ತೆಗೆಯಲು ಗಂಟೆಗೂ ಹೆಚ್ಚು ಕಾಲ ಹೊರ ಹೋಗಲಾಗದೆ ಅಲ್ಲಿಯೇ ಉಳಿಯುವಂತಾಯಿತು.

ನಂತರ ಅಲ್ಲಿಗೆ ಆಗಮಿಸಿದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರು ಅಭಿಮಾನಿಗಳನ್ನು ಸಮಾಧಾನ ಪಡಿಸಲು ಯತ್ನಿಸಿದರು. ಅದಕ್ಕೂ ಅಭಿಮಾನಿಗಳು ಜಗ್ಗಲಿಲ್ಲ. ಬಳಿಕ ಅವರು ಪೊಲೀಸ್ ಅಧಿಕಾರಿಗಳೊಂದಿಗೆ ಮತ್ತು ಭಾರತಿ ವಿಷ್ಣುವರ್ಧನ್ ಅವರೊಂದಿಗೆ ಮಾತನಾಡಿ, ಅಭಿಮಾನಿಗಳನ್ನು ಒಳಬಿಡಲು ಅವಕಾಶ ಮಾಡಿಕೊಟ್ಟರು.

ಅಷ್ಟರಲ್ಲಾಗಲೇ ವೇದಿಕೆ ಸಮೀಪದ ಜಾಲರಿ ಗೋಡೆಯನ್ನು ಹತ್ತಿದ ನೂರಾರು ಅಭಿಮಾನಿಗಳು ಜಾಲರಿ ಗೋಡೆಯನ್ನು ಹತ್ತಿ, ದಾಟಿ, ಸಾಹಸಸಿಂಹ ಸಭಾಂಗಣದತ್ತ ತೆರಳಿದರು. ನಂತರ ಮುಖ್ಯದ್ವಾರವನ್ನು ತೆಗೆದ ಬಳಿಕ ಅಭಿಮಾನಿಗಳು ಗುಂಪು ಗುಂಪಾಗಿ ಸ್ಮಾರಕ ಸ್ಥಳದಲ್ಲಿ ವಿಷ್ಣು ಪ್ರತಿಮೆಯನ್ನು ಕಾಣಲು ಹೋದರು. ಅಭಿಮಾನಿ ನಟದ ಪ್ರತಿಮೆಯನ್ನು ಕಣ್ತುಂಬಿಕೊಂಡರು. ಕೆಲವರು ಅತ್ತರು, ಕೆಲವರು ಸಂತಸ ಪಟ್ಟರು. ಇನ್ನೂ ಕೆಲವರು ತಮ್ಮ ಅಭಿಮಾನಿ ನಟನ ಪ್ರತಿಮೆ ಎದುರು ಸೆಲ್ಫಿ ತೆಗೆದುಕೊಳ್ಳಲು ಪ್ರಯತ್ನಿಸಿದರು.

ಸ್ಮಾರಕ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಸಾಕ್ಷಿಯಾದ ಅಭಿಮಾನಿಗಳು

ದೂರ ದೂರದ ಜಿಲ್ಲೆಗಳಿಂದಲೂ ಆಗಮಿಸಿದ್ದರು

ಮೈಸೂರು, ಜ.29(ಆರ್‌ಕೆಬಿ)– ಹುಬ್ಬಳ್ಳಿ, ದಾವಣಗೆರೆ, ಮಂಡ್ಯ, ರಾಮನಗರ, ಚಾಮರಾಜನಗರ, ಶಿವಮೊಗ್ಗ, ಬೆಂಗಳೂರು, ರಾಮನಗರ, ತಮಿಳುನಾಡಿನ ತಾಳವಾಡಿ ಸೇರಿದಂತೆ ರಾಜ್ಯದ ಮೂಲೆ ಮೂಲೆಗಳಿಂದ ಸಾವಿರಾರು ಸಂಖ್ಯೆಯಲ್ಲ ಆಗಮಿಸಿದ್ದ ಡಾ.ವಿಷ್ಣುವರ್ಧನ್ ಅಭಿಮಾನಿಗಳು ತಮ್ಮ ಅಭಿಮಾನಿ ನಟನ ಸ್ಮಾರಕ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಬೆಂಗಳೂರಿನಿಂದ ವಿಷ್ಣು ಸೇನಾ ಸಮಿತಿಯ ನೂರಾರು ಮಂದಿ ಬೈಕ್ ಮೂಲಕ ಸ್ಮಾರಕ ಸ್ಥಳಕ್ಕೆ ಆಗಮಿಸಿದರು. ಮಂಡ್ಯದ ಜಯರಾಮ ನಾಯಕ್ ಮತ್ತು ಅವರ ತಂಡ ವಿಷ್ಣು ಅವರ ವಿವಿಧ ಚಿತ್ರಗಳ ವೇಷ ತೊಟ್ಟು ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಮೈಸೂರು ಮಿತ್ರನೊಂದಿಗೆ ಮಾತನಾಡಿದ ಮಂಡ್ಯದ ವಿಷ್ಣು ಅಭಿಮಾನಿ ನಟೇಶ್, ವಿಷ್ಣುದಾದಾ ನಮ್ಮ ದೇವರು. ಅವರ ಆಸೆ ಕೊನೆಗೂ ಈಡೇರಿದೆ. ಅವರ ಸ್ಮಾರಕದಲ್ಲಿ ನೂರಾರು ಜನರಿಗೆ ಸಿನಿಮಾ ತರಬೇತಿ ನಡೆಯುವಂತಾದರೆ ಅದು ವಿಷ್ಣು ಅವರಿಗೆ ಸಲ್ಲುವ ನಿಜವಾದ ಶ್ರದ್ಧಾಂಜಲಿ ಎನಿಸುತ್ತದೆ ಎಂದರು.

ಹುಬ್ಬಳ್ಳಿಯ ರಮೇಶ್ ಹುನಗುಂದ ಮಾತನಾಡಿ, ನನಗಿಂದು ತುಂಬಾ ಸಂತೋಷ ಆಗುತ್ತಿದೆ. ಸ್ಮಾರಕದಲ್ಲಿ ಗುರುಗಳಾದ ವಿಷ್ಣು ಸಾರ್ ಅವರು ಜೀವಂತ ವಾಗಿದ್ದಾರೆ. ಅವರು ಅಭಿಮಾನಿಗಳ ಹೃದಯದಲ್ಲಿ ಚಿರಾಯುವಾಗಿದ್ದಾರೆ. ಇಂದಿನ ಕಾರ್ಯಕ್ರಮದಲ್ಲಿ ತಾವು ಭಾಗವಹಿಸಿರುವುದು ಹೆಚ್ಚು ಖುಷಿ ತಂದಿದೆ ಎಂದು ಹೇಳಿದರು.

ಪಾವಗಡದ ಸುದರ್ಶನ್ ನಾಜರೆ ಮಾತನಾಡಿ, ಕನ್ನಡದ ಮೇರು ನಟ ವಿಷ್ಣುವನ್ನು ಆರಾದಿಸುವ ನಮಗೆ ಸ್ಮಾರಕ ನಿರ್ಮಾಣವಾಗಿದ್ದು, ಸಂತಸ ತಂದಿದೆ. ಇದು ರಾಜ್ಯದ ಪ್ರಸಿದ್ಧ ಪ್ರವಾಸಿ ಸ್ಥಳವಾಗಿ ಹೆಸರಾಗುವಂತೆ ಮಾಡುವುದು ರಾಜ್ಯ ಸರ್ಕಾರದ ಜವಾಬ್ದಾರಿ ಎಂದರು. ಬೆಂಗಳೂರಿನ ವಿಷ್ಣು ಅಭಿಮಾನಿ ಮಹಿಳೆಯರ ತಂಡ ವಿಷ್ಣುವರ್ಧನ್ ಭಾವಚಿತ್ರವಿದ್ದ ಕಳಸಗಳನ್ನು ಹಿಡಿದು ಗಮನ ಸೆಳೆದರು.

ವಿಷ್ಣುವರ್ಧನ್ 'ಕರ್ನಾಟಕ ರತ್ನ' ಅಲ್ಲವೇ...?

ಮುಖ್ಯಮಂತ್ರಿ ಭಾಷಣದ ವೇಳೆ ಸಾವಿರಾರು ಅಭಿಮಾನಿಗಳಿಂದ ಭಿತ್ತಿಪತ್ರ ಪ್ರದರ್ಶನ

ಮೈಸೂರು, ಜ.29(ಆರ್‌ಕೆಬಿ)– ಸಾಹಸಸಿಂಹ ವಿಷ್ಣುವರ್ಧನ್ ಅವರು ಕರ್ನಾಟಕ ರತ್ನ ಅಲ್ಲವೇ?' ಎಂಬ ಭಿತ್ತಿಪತ್ರಗಳನ್ನು ಹಿಡಿದ ಸಾವಿರಾರು ಮಂದಿ ಮುಖ್ಯಮಂತ್ರಿಗಳ ಗಮನ ಸೆಳೆಯಲು ಮುಂದಾದರು. ಭಾಷಣದ ಮಧ್ಯೆ ಭಿತ್ತಿಪತ್ರ ಹಿಡಿದು ಕರ್ನಾಟಕ ರತ್ನ ಘೋಷಣೆ ಮಾಡುವಂತೆ ಆಗ್ರಹಿಸಿದರು.

ತಮ್ಮ ಭಾಷಣದಲ್ಲಿ ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬರುವಂತಹ ದಿನಗಳಲ್ಲಿ ಸರ್ಕಾರ ನಿಮ್ಮ ಭಾವನೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಲಿದೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ, ಮೇಯರ್ ಶಿವಕುಮಾರ್, ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ ಗೌಡ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಉಪ ಮೇಯರ್ ಡಾ.ಡಿ.ರೂಪಾ, ವಾರ್ತಾ ಇಲಾಖೆ ಆಯುಕ್ತರೂ ಆದ ಡಾ.ವಿಷ್ಣುವರ್ಧನ್ ಪ್ರತಿಷ್ಠಾನದ ಸದಸ್ಯ ಕಾರ್ಯದರ್ಶಿ ಪಿ.ಎಸ್.ಹರ್ಷ ಇನ್ನಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ವೇದಿಕೆ ಮುಂಭಾಗದ ಆಸನಗಳಲ್ಲಿ ನಟರಾದ ರಮೇಶ್ ಭಟ್, ಭವ್ಯಾ, ನಿರ್ದೇಶಕ ರಾಜೇಂದ್ರಸಿಂಗ್ ಬಾಬು ಹಾಗೂ ವಿಷ್ಣುವರ್ಧನ್ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.



ಬೆಂಗಳೂರಿನಿಂದ ಆಗಮಿಸಿದ ವಿಷ್ಣು ಅಭಿಮಾನಿ ಮಹಿಳೆಯರು ವಿಷ್ಣುವರ್ಧನ್ ಭಾವಚಿತ್ರವುಳ್ಳ ಕಲಶವನ್ನು ಹೊತ್ತು ಸ್ಮಾರಕ ಸ್ಥಳದಲ್ಲಿ ಗಮನ ಸೆಳೆದರು



ವಿಷ್ಣು ಸ್ಮಾರಕದ ವೇದಿಕೆ ಎದುರಿನಲ್ಲಿ ರಾರಾಜಿಸಿದ ವಿಷ್ಣುವರ್ಧನ್‌ರವರ ಎತ್ತರ ಕಟೌಟ್‌ಗಳು

ಒಂದೆಡೆ ಸಂತಸ... ಮತ್ತೊಂದೆಡೆ ಅಸಮಾಧಾನ

ಕನಿಷ್ಠ ಸೌಲಭ್ಯ ಕಲ್ಪಿಸದ ಬಗ್ಗೆ ಆಕ್ರೋಶ

ಮೈಸೂರು, ಜ.29(ಎಸ್‌ಬಿಡಿ)– ಜನಮಾನಸದಲ್ಲಿ ಅಜರಾಮರವಾಗಿರುವ ಡಾ.ವಿಷ್ಣುವರ್ಧನ್ ಸ್ಮಾರಕ ಉದ್ಘಾಟನೆಯಿಂದ ಸಂತಸಗೊಂಡಿರುವ ಅವರ ಅಭಿಮಾನಿಗಳು, ಅಲ್ಲಿ ಕನಿಷ್ಟ ಸೌಕರ್ಯವನ್ನೂ ಕಲ್ಪಿಸದಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಡಾ.ವಿಷ್ಣುವರ್ಧನ್ ಸ್ಮಾರಕವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಮು ಇಂದು ಲೋಕಾರ್ಪಣೆ ಮಾಡಿದರು. ಈ ವೇಳೆ ಅಭಿಮಾನಿಗಳ ಸಂಭ್ರಮ ಆಗಸದೆತ್ತರಕ್ಕೇರಿತ್ತು. ಶಿಳ್ಳೆ, ಕೇಕೆ, ಜೈಕಾರ ಮಾರ್ಧನಿಸಿತ್ತು. ಅಂತೂ ಇಂತೂ ದಾದಾ ಸ್ಮಾರಕ ಸಾಕಾರವಾಯಿತು ಎಂಬ ಖುಷಿಯಲ್ಲಿ ತೇಲಿದ್ದರು. ಪೊಲೀಸರು ತಡೆದರೂ ಕೂಡ ಸ್ಮಾರಕ ಕಣ್ತುಂಬಿಕೊಳ್ಳಲು ದಿನವಿಡೀ ಕಾದು ಕುಳಿತಿದ್ದರು.

ಆದರೆ ಸಂಜೆಯಾಗುತ್ತಿದ್ದಂತೆ ಸ್ಮಾರಕವನ್ನು ಕಗ್ಗತ್ತಲು ಆವರಿಸಿತು. ಕನಿಷ್ಟ ವಿದ್ಯುತ್ ದೀಪದ ವ್ಯವಸ್ಥೆಯನ್ನೂ ಮಾಡಿರದ ಕಾರಣ ಸ್ಮಾರಕ ವೀಕ್ಷಿಸಲು ಬಂದಿದ್ದ ನೂರಾರು ಮಂದಿ ನಿರಾಸೆಯಿಂದ ವಾಪಸ್ಸಾದರು. ಅನೇಕರು ಸರ್ಕಾರದ ವಿರುದ್ಧ ಹರಿಹಾಯ್ದರು. ಚುನಾವಣೆ ಸಮೀಪಿಸುತ್ತಿದೆ ಎನ್ನುವ ಕಾರಣಕ್ಕೆ ತರಾತುರಿಯಲ್ಲಿ ಸ್ಮಾರಕ ಉದ್ಘಾಟಿಸಲಾಗಿದೆ. ಅಗತ್ಯ ಸೌಕರ್ಯಗಳನ್ನು ಕಲ್ಪಿಸಿಲ್ಲ. ಸರ್ಕಾರ ಕಾಟಾಚಾರಕ್ಕೆ ಸ್ಮಾರಕವನ್ನು ಲೋಕಾರ್ಪಣೆ ಮಾಡಿದೆ. ಚಲನಚಿತ್ರ ವಾಣಿಜ್ಯ ಮಂಡಳಿಯವರು, ಕಲಾವಿದರೂ ಕಾರ್ಯಕ್ರಮಕ್ಕೆ ಬಂದಿಲ್ಲ. ಹೀಗೆ ಮೇರು ಕಲಾವಿದ ವಿಷ್ಣುವರ್ಧನ್ ಅವರಿಗೆ ಅಗೌರವ ತೋರಿರುವುದು ಖಂಡನಾರ್ಹ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಷ್ಣು ಸ್ಮಾರಕ ನಿರ್ಮಾಣಕ್ಕೆ ನೆರವಾದ ಸರ್ಕಾರಕ್ಕೆ ಅಭಿನಂದನೆಗಳು. ಆದರೆ ಜಿಲ್ಲಾ ಉಸ್ತುವಾರಿ ಸಚಿವರು, ಸಿನಿಮಾ ಕಲಾವಿದರು ಕಾರ್ಯಕ್ರಮಕ್ಕೆ ಗೈರಾಗಿದ್ದು ವಿಷ್ಣುವರ್ಧನ್ ಅಭಿಮಾನಿಗಳಲ್ಲಿ ಬೇಸರ ಮೂಡಿಸಿದೆ. ಕಾರ್ಯಕ್ರಮಕ್ಕೆ ದೂರದ ಊರುಗಳಿಂದ ಆಗಮಿಸಿದ್ದ ಅಭಿಮಾನಿಗಳಿ ಕುಡಿಯುವ ನೀರು, ಊಟದ ವ್ಯವಸ್ಥೆ ಮಾಡಿರಲಿಲ್ಲ. ವಿದ್ಯುತ್ ದೀಪಗಳ ವ್ಯವಸ್ಥೆ ಇಲ್ಲದ ಕಾರಣ ಸಂಜೆಯಾಗುತ್ತಿದ್ದಂತೆ ಸ್ಮಾರಕವನ್ನು ಕತ್ತಲು ಆವರಿಸಿತು. ಸ್ಮಾರಕವನ್ನು ಪ್ರೇಕ್ಷಣೀಯ ಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸಬೇಕು ಎಂದು ವಿಷ್ಣುವರ್ಧನ್ ಅಭಿಮಾನಿ ವಿಕ್ರಂ ಅಯ್ಯಂಗಾರ್ ಆಗ್ರಹಿಸಿದ್ದಾರೆ.

ಮೈಸೂರಲ್ಲಿ ಬೀದಿ ನಾಯಿಗಳ ದಾಳಿಗೆ ಕರು ಬಲಿ

ಮೈಸೂರು, ಜ.29(ಎಂಟಿವೈ)– ಮೈಸೂರಿನ ರಾಮಕೃಷ್ಣನಗರದದಲ್ಲಿ ಬೀದಿ ನಾಯಿಗಳು ಕರುವಿನ ಮೇಲೆ ದಾಳಿ ನಡೆಸಿ ಕೊಂದಿರುವ ಘಟನೆ ಭಾನುವಾರ ಮುಂಜಾನೆ ನಡೆದಿದ್ದು, ಚಿರತೆ ದಾಳಿಗೆ ಕರು ಬಲಿಯಾಗಿದೆ ಎಂಬ ಶಂಕೆ ವ್ಯಕ್ತವಾಗಿದ್ದರಿಂದ ಸ್ಥಳೀಯರಲ್ಲಿ ಆತಂಕ ಮನೆ ಮಾಡಿತ್ತು. ಆದರೆ, ಸಿಸಿ ಕ್ಯಾಮರಾದಲ್ಲಿ ನಾಯಿ ದಾಳಿ ವೀಡಿಯೊ ದೊರೆತದ್ದರಿಂದ ನಿಟ್ಟುಸಿರು ಬಿಡುವಂತಾಯಿತು.



ರಾಮಕೃಷ್ಣ ನಗರ ಐ ಬ್ಲಾಕ್‌ನ ಇಂದ್ರಲೋಕ ಕನ್ವೆನ್ಷನ್ ಹಾಲ್ ಪಕ್ಕದಲ್ಲಿಯೇ ಇರುವ ಈಶ್ವರ್ ಅವರಿಗೆ ಸೇರಿದ ಕರುವಿನ ಮೇಲೆ ಭಾನುವಾರ ಮುಂಜಾನೆ ನಾಯಿಗಳು ದಾಳಿ ನಡೆಸಿ ಕೊಂದು ಹಾಕಿವೆ. ರಸ್ತೆ ಮೇಲೆ ಮಲಗಿದ್ದ ಕರುವನ್ನು ಖಾಲಿ ಜಾಗಕ್ಕೆ ಎಳೆದೊಯ್ದ ನಾಯಿಗಳು ಅದನ್ನು ಕೊಂದು, ಬಳಿಕ ಮಾಂಸವನ್ನು ಸ್ವಲ್ಪ ಮಟ್ಟಿಗೆ ಭಕ್ಷಿಸಿವೆ. ಬೆಳಗ್ಗೆ ಖಾಲಿ ಜಾಗದಲ್ಲಿ ಕರುವಿನ ಕಳೇಬರ ಕಂಡ ಸ್ಥಳೀಯರು ಬೆಚ್ಚಿಬಿದ್ದಿದ್ದಾರೆ.

ಚಿರತೆ ದಾಳಿ ನಡೆಸಿ ಕರು ಕೊಂದಿದೆ ಎಂದು ಅನುಮಾನಿಸಿದ ಸ್ಥಳೀಯರು, ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ ಸಿಬ್ಬಂದಿಗಳು, ಸ್ಥಳ ಪರಿಶೀಲನೆ ಮಾಡಿದರು. ಕರುವನ್ನು ಎಳೆದಾಡಿರುವ ಜಾಗದಲ್ಲಿ ಪ್ರಾಣಿಗಳ ಹೆಜ್ಜೆ ಗುರುತು ಕಂಡು ಬಂದಿವೆ. ಇದನ್ನು ಗಮನಿಸಿ ಸ್ಥಳೀಯರು ಚಿರತೆ ದಾಳಿಯಾಗಿದೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಸ್ಥಳೀಯರ ಒತ್ತಾಯದ ಮೇರೆಗೆ ಕೂಂಬಿಂಗ್ ಕಾರ್ಯಾಚರಣೆ ನಡೆಸಿ, ಬೋನ್ ಇಡಲು ಕ್ರಮ ಕೈಗೊಳ್ಳಲು ಅರಣ್ಯ ಸಿಬ್ಬಂದಿಗಳು ಭರವಸೆ ನೀಡಿದ್ದರು. ಯಾವುದಕ್ಕೂ ದಾಳಿ ನಡೆಸಿರುವ ಪ್ರಾಣಿ ಬಗ್ಗೆ ಖಚಿತ ಪಡಿಸಿಕೊಳ್ಳಲು ಸುತ್ತ–ಮುತ್ತಲಿನ ಕಟ್ಟಡಗಳಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾ ಪರಿಶೀಲಿಸಿದಾಗ ನಾಲ್ಕು ನಾಯಿಗಳು ಕರುವೊಂದರ ಮೇಲೆ ದಾಳಿ ಮಾಡಿರುವ ದೃಶ್ಯ ಸೆರೆಯಾಗಿದೆ. ಹೀಗಾಗಿ ಚಿರತೆ ಸೆರೆ ಕಾರ್ಯಚರಣೆ ಕೈಬಿಡಲಾಯಿತು.

ನಿಟ್ಟುಸಿರುವ ಬಿಟ್ಟ ಜನತೆ: ತಿ.ನರಸೀಪುರದಲ್ಲಿ ಚಿರತೆ ನಾಲ್ಕು ಮಂದಿಯನ್ನು ಬಲಿ ಪಡೆದಿರುವುದು, ನಗರದ ಸಿಎಫ್‌ಟಿಆರ್‌ಐ, ಕೆ.ಸಿ.ಲೇಔಟ್ ಬಳಿ ಚಿರತೆ ಕಾಣಿಸಿಕೊಂಡಿರುವ ಕಾರಣ ಸ್ಥಳೀಯರು ಚಿರತೆ ಕರುವಿನ ಮೇಲೆ ದಾಳಿ ನಡೆಸಿದೆ ಎಂದು ಭಾವಿಸಿದ್ದರು. ಇದೇ ಹಿನ್ನೆಲೆಯಲ್ಲಿ ಮುಂಜಾನೆಯೇ ಘಟನೆ ನಡೆದಿರುವ ಜಾಗದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದರು. ನಗರದ ಮಧ್ಯೆ ಭಾಗಕ್ಕೂ ಚಿರತೆ ಬರುವಂತಾಯಿತೇ ಎಂದು ಪರಸ್ಪರ ಆತಂಕದಿಂದಲೇ ಮಾತನಾಡಿಕೊಳ್ಳುತ್ತಿದ್ದರು. ಮಧ್ಯಾಹ್ನ 12 ಗಂಟೆವರೆಗೂ ಜನರು ನೆರೆದಿದ್ದರು. ಅಂತಿಮವಾಗಿ ಅದು ನಾಯಿ ದಾಳಿ ಎಂದು ಘೋಷಣೆಯಾದ ನಂತರ ಜನರು ನಿರ್ಭೀತಿಯಿಂದ ಸ್ಥಳದಿಂದ ಜಾಗ ಖಾಲಿ ಮಾಡಿದರು.

ವರ್ಗಾವಣೆಯಾದ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರಿಗೆ ಸನ್ಮಾನ

ಮೈಸೂರು, ಜ.29– ವರ್ಗಾವಣೆಗೊಂಡಿರುವ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರಾದ ರಘುನಾಥ್‌ರವರನ್ನು ಚಾಮರಾಜನಗರ ಮತ್ತು ಮೈಸೂರು ನೋಟರಿ ಸಂಘದ ವತಿಯಿಂದ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ರಘುನಾಥ್ ಅವರು, ಸಮಾಜದಲ್ಲಿ ನೋಟರಿಗಳಿಗೆ ತನ್ನದೇ ಆದ ಸ್ಥಾನಮಾನ ಇದೆ. ಅದನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ನೋಟರಿಗಳು ಕಾರ್ಯನಿರ್ವಹಿಸಬೇಕು ಹಾಗೂ ತಮ್ಮ ಕಾರ್ಯವನ್ನು ಚೊಕ್ಕವಾಗಿ ಕಾನೂನು ಬದ್ಧವಾಗಿ ಮಾಡಬೇಕು. ಇವರ ಹುದ್ದೆ ನ್ಯಾಯಾಧೀಶರ ಸಮಾನಂತರದ ಹುದ್ದೆಯಾಗಿರುತ್ತದೆ. ಆದರೆ, ಇತ್ತೀಚಿಗೆ ಈ ಹುದ್ದೆ ತನ್ನ ಘನತೆಯನ್ನು ಕಳೆದುಕೊಳ್ಳುತ್ತಿದೆ. ಅದಕ್ಕೆ ಕಾರಣ ನೋಟರಿಗಳು ರಚನಾತ್ಮಕವಾಗಿ ಕೆಲಸ ಮಾಡದೆ ಇರುವುದು. ಈ ನಿಟ್ಟಿನಲ್ಲಿ ನಾನು ಕಾರ್ಯೋನ್ಮುಖನಾಗಬೇಕಾಗಿತ್ತು. ಆದರೆ ನನ್ನ ವರ್ಗಾವಣೆ ಆಗಿದೆ. ಮುಂದೆ ಬರುವ ನ್ಯಾಯಾಧೀಶರು ಇದನ್ನು ಸರಿಪಡಿಸುತ್ತಾರೆ ಎಂದು ನನ್ನ ಭಾವನೆ ಹಾಗೂ ಇದಕ್ಕೆ ನೋಟರಿಗಳು ಸಹಕಾರ ನೀಡಿದಾಗ ಮಾತ್ರ ಸಾಧ್ಯ ಎಂದು ತಿಳಿಸಿದರು. ಈ ವೇಳೆ ನೋಟರಿ ಸಂಘದ ಅಧ್ಯಕ್ಷ ಪಿ.ರಮೇಶ್, ಉಪಾಧ್ಯಕ್ಷ ಪ್ರಶಾಂತ್, 'ಲಾ–ಗೈಡ್' ಕನ್ನಡ ಕಾನೂನ ಮಾಸ ಪತ್ರಿಕೆ ಸಂಪಾದಕ ವೆಂಕಟೇಶ್, ವಕೀಲರಾದ ಅಯ್ಯಣ್ಣ ಕೃಷ್ಣೇಗೌಡ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಲೆಕ್ಕಪರಿಶೋಧಕರಾದ ಕೃಷ್ಣೇಗೌಡ ಇನ್ನಿತರರಿದ್ದರು.



ಕಂದಕಕ್ಕೆ ಉರುಳಿದ ಬಸ್: 40 ಜನರ ದುರ್ಮರಣ

ಇಸ್ಲಾಮಾಬಾದ್, ಜ.29– 48 ಜನ ಪ್ರಯಾಣಿಕರಿದ್ದ ಬಸ್ ಒಂದು ಕಂದಕಕ್ಕೆ ಉರುಳಿ 40 ಜನರು ಸಾವನ್ನಪ್ಪಿರುವ ಘಟನೆ ಪಾಕಿಸ್ತಾನದ ಬಲೂಚಿಸ್ತಾನದಲ್ಲಿ ನಡೆದಿದೆ.

ಭಾನುವಾರ ಬೆಳಗ್ಗೆ ಈ ಭೀಕರ ಅಪಘಾತ ಬಲೂಚಿಸ್ತಾನದ ಲಾಸ್ಬೆಲಾದಲ್ಲಿ ನಡೆದಿದೆ. ಅತಿ ವೇಗದ ಚಾಲನೆಯೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಬಸ್ ಕ್ವೆಟ್ಟಾದಿಂದ ಕರಾಚಿಗೆ ತೆರಳುತ್ತಿತ್ತು ಎಂದು ಪಾಕ್ ಮಾಧ್ಯಮಗಳು ವರದಿ ಮಾಡಿವೆ.

ವೇಗವಾಗಿ ಚಲಿಸುತ್ತಿದ್ದ ಬಸ್ ಲಾಸ್ಬೆಲಾದಲ್ಲಿ ಸೇತುವೆಯೊಂದರ ಪಿಲ್ಲರ್‌ಗೆ ಡಿಕ್ಕಿ ಹೊಡೆದಿದೆ. ಬಳಿಕ ಅದು ಕಂದಕಕ್ಕೆ ಉರುಳಿದೆ. ಈ ವೇಳೆ ಬಸ್‌ಗೆ ಬೆಂಕಿ ಹೊತ್ತಿಕೊಂಡಿದ್ದು, 40 ಜನರ ಸಾವಿಗೆ ಕಾರಣವಾಗಿದೆ ಎಂದು ಮೂಲಗಳು ತಿಳಿಸಿವೆ.

ಭೀಕರ ಅಪಘಾತದಲ್ಲಿ ಬದುಕುಳಿದವರಲ್ಲಿ ಹೆಚ್ಚಿನವರು ಗಂಭೀರವಾಗಿ ಗಾಯಗೊಂಡಿದ್ದು, ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಪಘಾತದ ಕಾರಣದ ಬಗ್ಗೆ ತನಿಖೆ ಮಾಡಲಾಗುತ್ತಿದೆ. ಸಾವನ್ನಪ್ಪಿದವರ ಮೃತದೇಹಗಳು ವಿರೂಪಗೊಂಡಿದ್ದು, ಅವರ ಗುರುತು ಪತ್ತೆ ಹಚ್ಚಲು ಡಿಎನ್‌ಎ ಪರೀಕ್ಷೆ ನಡೆಸಲಾಗುತ್ತಿದೆ ಎಂದಿದ್ದಾರೆ.

ಉತ್ತಮ ಆಹಾರ ಪದ್ಧತಿ ರೂಡಿಸಿಕೊಳ್ಳುವುದು ಅತ್ಯಗತ್ಯ

ಶಾಸಕ ಎಸ್.ಎ.ರಾಮದಾಸ್ ಸಲಹೆ



ಮೈಸೂರು, ಜ.29(ಎಸ್‌ಬಿಡಿ)– ಉತ್ತಮ ಆಹಾರ ಪದ್ಧತಿಯನ್ನು ಪ್ರತಿಯೊಬ್ಬರೂ ರೂಡಿಸಿಕೊಳ್ಳುವುದು ಅಗತ್ಯವಾಗಿದೆ ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ತಿಳಿಸಿದರು.

ಮೈಸೂರಿನ 51ನೇ ವಾರ್ಡ್‌ನಲ್ಲಿ ಭಾನುವಾರ ಆಯೋಜಿಸಲಾಗಿದ್ದ ಸರ್ಕಾರಿ ಸವಲತ್ತುಗಳ ಅದಾಲತ್, ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಸಾರ್ವಜನಿಕ ಸಮಸ್ಯೆಗಳ ಪರಿಹಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಆರೋಗ್ಯ ಕಾಯ್ದುಕೊಳ್ಳುವ ಬಗ್ಗೆ ಸಲಹೆ ನೀಡಿದರು.

ಪ್ರಸ್ತುತ ಎಲ್ಲರದ್ದೂ ಒತ್ತಡಮಯ ಜೀವನ. ಪ್ರತಿಯೊಬ್ಬರೂ ಒಂದಿಲ್ಲೊಂದು ಯೋಚನೆಯೊಂದಿಗೆ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಉತ್ತಮ ಆರೋಗ್ಯಕ್ಕಾಗಿ ಆಹಾರ ಪದ್ಧತಿ ಬಗ್ಗೆ ಗಮನಹರಿಸುವುದು ತುಂಬಾ ಮುಖ್ಯ. ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಅಗತ್ಯ ಮಾರ್ಗದರ್ಶನ ನೀಡಲೆಂದೇ ಅದಾಲತ್‌ನಲ್ಲಿ ಪ್ರತ್ಯೇಕ ವಿಭಾಗ ತೆರೆಯಲಾಗಿದೆ. ನಮ್ಮ ಆಹಾರ ಕ್ರಮ ಹೇಗಿರಬೇಕು. ಯಾವ ಆಹಾರ ಸೇವನೆಯಿಂದ ಏನೆಲ್ಲಾ ಉಪಯೋಗವಿದೆ. ಇನ್ನಿತರ ಮಾಹಿತಿ ಪಡೆದುಕೊಳ್ಳಬಹುದು ಎಂದರು.

ಸಮಸ್ಯೆಗಳ ಪರಿಹಾರಕ್ಕಾಗಿ ಕ್ಷೇತ್ರದ ಜನ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸುವ ಉದ್ದೇಶದಿಂದ ಪ್ರತಿ ವಾರ್ಡ್‌ನಲ್ಲೂ ಅದಾಲತ್ ಆಯೋಜಿಸಲಾಗುತ್ತಿದೆ. ಈ ಮೂಲಕ ಹಲವು ಸರ್ಕಾರಿ ಕಚೇರಿಗಳೇ ನಿಮ್ಮ ಮನೆ ಬಾಗಿಲಿಗೆ ಬಂದಿವೆ. ಕುಡಿಯುವ ನೀರು, ಒಳಚರಂಡಿ, ಆಶ್ರಯ, ರಸ್ತೆ ಆರೋಗ್ಯ, ವಿದ್ಯುತ್, ಶಿಕ್ಷಣ ಹೀಗೆ ಸುಮಾರು 20 ಇಲಾಖೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಅದಾಲತ್‌ನಲ್ಲಿ ಪ್ರಸ್ತಾಪಿಸಬಹುದು. ಸಂಬಂಧಪಟ್ಟ ಇಲಾಖೆಯವರು ಸ್ಥಳದಲ್ಲೇ ಹಲವು ಸಮಸ್ಯೆಗಳನ್ನು ಪರಿಹರಿಸಲಿದ್ದಾರೆ ಎಂದು ತಿಳಿಸಿದರು. ಮೈಸೂರಿನ ವಸ್ತು ಪ್ರದರ್ಶನ ಮೈದಾನದಲ್ಲಿ ಫೆ.14ರಂದು ನಡೆಯಲಿರುವ ಉದ್ಯೋಗ ಮೇಳದಲ್ಲಿ ಸುಮಾರು 150 ಕಂಪನಿಗಳು ಭಾಗವಹಿಸುತ್ತಿವೆ. ಉದ್ಯೋಗ ಮೇಳದಲ್ಲಿ ಕೌಶಲ್ಯ ತರಬೇತಿ ಕುರಿತ ಕಾರ್ಯಕ್ರಮವನ್ನೂ ರೂಪಿಸಲಾಗಿದೆ. ಯುವ ಸಮುದಾಯ ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಳ್ಳುವಂತೆ ಇದೇ ವೇಳೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ಕೆಲಸ ಮಾಡುವಾಗ ಮುತ್ತು ಕೊಡಬೇಡಿ ಅಂತ ಎಷ್ಟು ಸಲ ಹೇಳ್ಬೇಕು ನಿಮಗೆ...?

ಕೆಲಸದವಳು : ಹೌದು ಅಮ್ಮಾವ್ರೆ... ಇವರಿಗೆ ಎಷ್ಟು ಹೇಳಿದ್ರು ಅಷ್ಟೆ ನನಗಂತೂ ಹೇಳಿ ಹೇಳಿ ಸಾಕಾಗಿ ಹೋಗಿದೆ!

ಮೈಸೂರು ಮಿತ್ರ

ಸೋಮವಾರ, 30 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಾವು ಎಷ್ಟೇ ದೂರವಿದ್ದರೂ, 'ನಂಬಿಕೆ' ಎಂಬುದು ಜೀವ-ಭಾವಗಳನ್ನು ಜೀವಂತವಾಗಿಡುತ್ತದೆ. – ಶ್ರೀ ಕೃಷ್ಣ ಪರಮಾತ್ಮ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಈಚಲ ಮರದ ಕೆಳಗೆ ಕುಳಿತು ಮಜ್ಜಿಗೆ ಕುಡಿದ ಹಾಗೆ...

ನಿಮ್ಮ ಪತ್ರಗಳು

ಎಸ್.ಎಲ್. ಭೈರಪ್ಪನವರ ಬಗ್ಗೆ ಇದೆಂತಹ ಪ್ರತಿಕ್ರಿಯೆ?

ಮಾನ್ಯರೆ,

ಸಾಹಿತಿ ಎಸ್.ಎಲ್. ಭೈರಪ್ಪ ಅವರಿಗೆ ಪದ್ಮಭೂಷಣ ಪ್ರಶಸ್ತಿ ಬಂದಾಗ



ಅವರು ಕೊಟ್ಟ ಹೇಳಿಕೆಗೆ ಪ್ರತಿಕ್ರಿಯಿಸಿ, ಬಿಜೆಪಿಯ ವಿಧಾನ ಪರಿಷತ್ ಸದಸ್ಯರಾಗಿರುವ ಮಾನ್ಯ ಶ್ರೀ ಅಡಗೂರು ಹೆಚ್.ವಿಶ್ವನಾಥ್ ಅವರು ಕೆಲವು ಮಾತುಗಳನ್ನಾಡಿರುವುದನ್ನು ನಿಮ್ಮ ಪತ್ರಿಕೆಯಲ್ಲಿ ಹಾಗೂ ಇತರ ಮಾಧ್ಯಮಗಳಲ್ಲಿ ಓದಿದ ನಂತರ ನನ್ನ ಪ್ರತಿಕ್ರಿಯೆ.

ಈ ಮೊದಲು 2016ರಲ್ಲಿ ಶ್ರೀ ಭೈರಪ್ಪನವರಿಗೆ ಪದ್ಮಶ್ರೀ ಪ್ರಶಸ್ತಿ ಸಿಕ್ಕಿತ್ತು. ಆಗಲೂ ಶ್ರೀ ನರೇಂದ್ರ ಮೋದಿಯವರೇ ಪ್ರಧಾನಮಂತ್ರಿಯಾಗಿದ್ದರು. ಕರ್ನಾಟಕದ, ಏಕೆ, ನಮ್ಮ ದೇಶದ ಈ ಕಾಲಮಾನದ ಅತಿ ಹೆಸರಾಂತ ಸಾಹಿತಿ ಹಾಗೂ ನಮ್ಮ ದೇಶದ ಓರ್ವ ಸಾಹಿತಿಯ ಅತಿ ಹೆಚ್ಚು ಪುಸ್ತಕಗಳು ಬೇರೆ ಭಾಷೆಗಳಿಗೆ ಅನುವಾದವಾದದ್ದು ಅಂದರೆ ಶ್ರೀ ಭೈರಪ್ಪನವರದು. ಈ ಹಿಂದೆ ಪದ್ಮಶ್ರೀ ಪ್ರಶಸ್ತಿ ಸಿಕ್ಕಾಗ ಶ್ರೀ ಭೈರಪ್ಪನವರು ಅದು ಮೋದಿಯವರಿಂದ ಬಂತು ಎಂದೇನೂ ಹೇಳಲಿಲ್ಲ. ಆದರೆ ಅದು ಕೇಂದ್ರದಲ್ಲಿ ಬಿಜೆಪಿ ಸರ್ಕಾರವಿದ್ದಾಗ ಬಂತು. ಆ ಪ್ರಶಸ್ತಿಯನ್ನು ಶ್ರೀ ಭೈರಪ್ಪನವರು ವಿನಯಪೂರ್ವಕವಾಗಿ ಸ್ವೀಕರಿಸಿದ್ದರು. **ಆದರೆ ನನ್ನಂತಹ ಅನೇಕರಿಗೆ ಶ್ರೀ ಭೈರಪ್ಪನವರಂತಹ ಅಸಾಧಾರಣ, ಅಸಾಮಾನ್ಯ ಸಾಹಿತಿಗೆ ದೊರೆತ ಪದ್ಮಶ್ರೀ ಗೌರವ ಅವರ ಸೃಜನಶೀಲತೆ, ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಸಾಧನೆಗೆ ಕಡಿಮೆ** ಎಂದೇ ಎನಿಸಿತು. ಆ ಕಾರಣಕ್ಕಾಗಿಯೇ ಹೆಸರಾಂತ ಇತಿಹಾಸಕಾರ, ಸಮಾಜಶಾಸ್ತ್ರಜ್ಞ ಶ್ರೀ ರಾಮಚಂದ್ರ ಗುಹ ಕೂಡ ಇದರ ಬಗ್ಗೆ ತಮ್ಮ ಅಸಮಧಾನವನ್ನು ವ್ಯಕ್ತಪಡಿಸಿದ್ದು. ಪದ್ಮಶ್ರೀ ಪ್ರಶಸ್ತಿ ಬಂದ ನಂತರ ಈಗ ಏಳು ವರ್ಷಗಳ ಬಳಿಕ ಪದ್ಮಭೂಷಣ ಪ್ರಶಸ್ತಿ ಬಂದಿದೆ. ಅದೂ ಕೂಡ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಇರುವಾಗ. ಕೇಂದ್ರದಲ್ಲಿ ಕಾಂಗ್ರೆಸ್-ಯುಪಿಎ ಇದ್ದಾಗ ಶ್ರೀ ಭೈರಪ್ಪನವರನ್ನು ಮರೆತೇ ಬಿಟ್ಟಿದ್ದರು. ಭೈರಪ್ಪನವರಿಗೆ ಪದ್ಮಭೂಷಣ ಪ್ರಶಸ್ತಿ ಬಂದ ಬಗ್ಗೆ ವ್ಯಂಗ್ಯವಾಗಿ ಪ್ರತಿಕ್ರಿಯಿಸಿರುವ ಮಾನ್ಯಶ್ರೀ ಅಡಗೂರು ವಿಶ್ವನಾಥ್ ಅವರು, ಆಗ ಕಾಂಗ್ರೆಸ್‌ನಲ್ಲೇ ಇದ್ದರು. ಜೊತೆಗೆ ಕೇಂದ್ರ ಸರ್ಕಾರದ ಭಾಗವಾಗಿರುವ ಸಂಸದರಾಗಿಯೂ ಇದ್ದರು.

ನಿಜ, 'ನರೇಂದ್ರ ಮೋದಿಯವರು ಪ್ರಧಾನಿ ಆದ್ದರಿಂದಲೇ ನನಗೆ ಪದ್ಮಭೂಷಣ ಪ್ರಶಸ್ತಿ ಬಂದಿದೆ. ಇಲ್ಲವಾಗಿದ್ದರೆ ಬರುತ್ತಿರಲಿಲ್ಲ' ಎಂಬ ಶ್ರೀ ಭೈರಪ್ಪನವರ ಹೇಳಿಕೆಗೆ ಮಾನ್ಯ ಶ್ರೀ ಅಡಗೂರು ವಿಶ್ವನಾಥರು ಆಕ್ಷೇಪ ವ್ಯಕ್ತಪಡಿಸಿದರು. ಪ್ರಶಸ್ತಿ ದೊರಕ್ಕಿದ್ದು ಮೋದಿಯವರಿಂದಲ್ಲ. ಅದು ದೊರಕ್ಕಿದ್ದು ನಿಮ್ಮ ಬರವಣಿಗೆ, ಸಾಹಿತ್ಯ ಕ್ಷೇತ್ರದ ಸಾಧನೆಯಿಂದಾಗಿ ಎಂದು 'ಪ್ರಶಂಸೆ'ಯನ್ನು ಕೂಡ ಮಾಡಿದ್ದಾರೆ. ಮಾನ್ಯ ಶ್ರೀ ಅಡಗೂರು ವಿಶ್ವನಾಥರು ಇಷ್ಟಕ್ಕೇ ತಮ್ಮ ಆಕ್ಷೇಪಣೆಯನ್ನು ನಿಲ್ಲಿಸಿದ್ದರೆ ಯಾರಿಗೂ ಬೇಸರವಾಗುತ್ತಿರಲ್ಲಿ.

ಆದರೆ ಅವರು ಮುಂದೆ ಹೋಗಿ ಭೈರಪ್ಪನವರು ಮುಂದಿನ ದಿನಗಳಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆಯಲಿಕ್ಕೋಸ್ಕರ ಮೋದಿಯವರನ್ನು ಈ ರೀತಿ ಮೆಚ್ಚಿಕೊಂಡಿದ್ದಾರೆ ಎಂದು ವ್ಯಂಗ್ಯವಾಡಿದ್ದು ಖಂಡಿತ ಸರಿಯಲ್ಲ. ಕುವೆಂಪು ಅವರ ಬಗ್ಗೆ ಯಾರೋ ಒಬ್ಬರು ಈ ರೀತಿ ಕೇವಲವಾಗಿ ಮಾತಾಡಿದಾಗ, ಆ ಮಹಾಕವಿ **'ನಾನೇರಿದ ಎತ್ತರಕ್ಕೆ ನೀನೇರ ಬಲ್ಲೆಯ'** ಎಂದು ಕೇಳಿದ್ದನ್ನು ಓದಿದ್ದು ನೆನೆಪಿಗೆ ಬಂತು. ಅಂದ ಹಾಗೆ ಜ್ಞಾನಪೀಠ ಪ್ರಶಸ್ತಿಯನ್ನು 1961ರ ಮೇ 22ರಂದು ಸಾಹು ಜೈನ್ ಪರಿವಾರದವರು ಸ್ಥಾಪಿಸಿದ್ದು, ಪ್ರಶಸ್ತಿ ಪುರಸ್ಕೃತರನ್ನು ಜ್ಞಾನಪೀಠ ಟ್ರಸ್ಟ್ ಆಯ್ಕೆ ಮಾಡುತ್ತದೆಯೇ ಹೊರತು ಕೇಂದ್ರ ಸರ್ಕಾರವಲ್ಲ.

ಅಷ್ಟಕ್ಕೂ ಜ್ಞಾನಪೀಠ ಪ್ರಶಸ್ತಿ ಮುಂದಿನ ದಿನಗಳಲ್ಲಿ ಬಂದರೂ ಅದನ್ನು ಫ್ರಾನ್ಸ್ ದೇಶದ ತತ್ವಜ್ಞಾನಿ (ಭೈರಪ್ಪನವರೂ ಕೂಡ ತತ್ವಜ್ಞಾನಿ), ಹೆಸರಾಂತ ಬರಹಗಾರ ಜೀನ್-ಪಾಲ್-ಸಾತ್ರೆಯವರು ಸಾಹಿತ್ಯಕ್ಕೆ ಕೊಡುವ ನೋಬಲ್ ಪ್ರಶಸ್ತಿಯನ್ನು ತಿರಸ್ಕರಿಸಿದಂತೆ, ನಮ್ಮ 92 ವರ್ಷ ಪ್ರಾಯದ ಶ್ರೀ ಭೈರಪ್ಪನವರು ಅದನ್ನು ತಿರಸ್ಕರಿಸಬಹುದಲ್ಲವೇ?

ರಾಜಕಾರಣಿಗಳ ನಡೆ-ನುಡಿ, ಯೋಚನೆಯೇ ಬೇರೆ ಇರುತ್ತದೆ. ಇದಕ್ಕೆ ಕೆಲವರು ಮಾತ್ರ ಹೊರತಾಗಿರುತ್ತಾರೆ. ಉದಾಹರಣೆಗೆ ಒಬ್ಬ ರಾಜಕಾರಣಿ ನ್ಯಾಯಾಲಯದಲ್ಲಿ ಸೋತರೆ, ಪ್ರತಿಕ್ರಿಯಿಸುವ ರೀತಿ. **'ಹೌದು ನ್ಯಾಯಾಲಯದಲ್ಲಿ ಸೋತಿದ್ದೀನಿ. ಆದರೆ ಜನತಾ ನ್ಯಾಯಾಲಯದಲ್ಲಿ ಗೆಲ್ಲುತ್ತೇನೆ'**.

ಅಂದಹಾಗೆ ಶ್ರೀ ಭೈರಪ್ಪನವರು 2018ರಲ್ಲಿ ಒಬ್ಬ ಪತ್ರಕರ್ತೆ ಶಿಫಾಲಿ ವೈದ್ಯರಿಗೆ ಕೊಟ್ಟ ಸಂದರ್ಶನದಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ಅನೇಕ ಮಾಹಿತಿ ದೊರೆಯುತ್ತದೆ. ಅದು you tube ಅಲ್ಲಿ ಕೂಡ ದೊರೆಯುತ್ತದೆ. ಅಂಥ ವ್ಯಕ್ತಿ ಜೀವನದಲ್ಲಿ ಯಾರೊಬ್ಬರನ್ನೂ ಹೊಗಳಿ, ಪ್ರಶಂಸಿಸಿ ಏನನ್ನೂ ಪಡೆದುಕೊಳ್ಳುವ ಅನಿವಾರ್ಯತೆಯಿಲ್ಲ. ಆ ಕೆಲಸವನ್ನು ಬಹುಶಃ ಕೆಲವು ರಾಜಕಾರಣಿಗಳು ಮಾಡಬಹುದೇನೋ!.

ಅದೇನೇ ಇರಲಿ, ಒಂದು ವೇಳೆ ಯುಪಿಎ ಸರ್ಕಾರ ಕೇಂದ್ರದಲ್ಲಿ ಇದ್ದಿದ್ದರೆ ಶ್ರೀ ಭೈರಪ್ಪನವರಿಗೆ ಪದ್ಮಶ್ರೀ ಆಗಲೀ, ಈ ಪದ್ಮಭೂಷಣವಾಗಲೀ ಸಿಗುತ್ತಿತ್ತೆ?


ಶ್ರೀ ಭೈರಪ್ಪನವರಿಗೆ ಪದ್ಮಭೂಷಣ ಪ್ರಶಸ್ತಿ ಸಿಕ್ಕಿರುವ ವಿಷಯಕ್ಕೆ ಪ್ರತಿಕ್ರಿಯಿಸಿದ ವ್ಯಕ್ತಿ ಸ್ವಲ್ಪ ಆತ್ಮ ವಿಮರ್ಶೆ ಮಾಡಿಕೊಳ್ಳಲಿ, ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳುವ ನಮ್ರತೆ ಇರಲಿ ಎಂದು ಭಾವಿಸೋಣ.

– ಕೆ.ಬಿ. ಗಣಪತಿ, ಹಿರಿಯ ಪತ್ರಕರ್ತ

ಇವರ ಸಾಧನೆಗೆ ಮನ್ನಣೆ ಇಲ್ಲವೇ?


ಮಾನ್ಯರೆ,

ಮೈಸೂರಿನ ಚಾಮರಾಜ ಕ್ಷೇತ್ರದ ಮಾಜಿ ಶಾಸಕರಾದ ವಾಸು ಅವರ



ಅಧಿಕಾರಾವಧಿಯಲ್ಲಿ ನೂತನ ಮಹಾರಾಣಿ ಕಾಲೇಜು, ಜಯದೇವ ಆಸ್ಪತ್ರೆ, ಟ್ರಾಮಾ ಸೆಂಟರ್, ಮೇಟಗಳ್ಳಿ ನೂತನ ಆಸ್ಪತ್ರೆ ಇನ್ನೂ ಹತ್ತು-ಹಲವಾರು ಅಭಿವೃದ್ಧಿ ಕಾರ್ಯಗಳು ಸಾಕಾರಗೊಂಡಿವೆ. ವಾಸು ಅವರ ಅವಧಿಯಲ್ಲಿ ಪೂರ್ಣಗೊಂಡ ಕೆಲವು ಕಟ್ಟಡಗಳು ಕೋವಿಡ್‌ನಂತಹ ಕ್ಲಿಷ್ಟಕರ ಸಮಯದಲ್ಲಿ ಬೆಡ್ ಕೊರತೆ ಉಂಟಾದಾಗ ಜನರ ಪಾಲಿಗೆ ರೋಗ ರಕ್ಷಕ ಸಂಜೀವಿನಿಗಳಾದವು. ವಾಸು ಅವರು ಒಂದೇ ಕ್ಷೇತ್ರಕ್ಕೆ ಸೀಮಿತವಾಗದೇ ಸಹಕಾರ ಕ್ಷೇತ್ರ, ಶಿಕ್ಷಣ ಕ್ಷೇತ್ರ, ಕ್ರೀಡಾ ಕ್ಷೇತ್ರ, ಕೈಗಾರಿಕಾ ಕ್ಷೇತ್ರಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಇವರ ಸೇವೆ ಚಾಮರಾಜ ಕ್ಷೇತ್ರಕ್ಕೆ ಅಗತ್ಯವಿದೆ. ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು ಇವರ ಅನುಭವವನ್ನು ಪರಿಗಣಿಸಿ ಟಿಕೆಟ್ ಹಂಚಿಕೆ ವಿಚಾರದಲ್ಲಿ ಪರಿಶೀಲಿಸಿ ಟಿಕೆಟ್ ನೀಡಬೇಕೆಂದು ಮನವಿ.


– ಅಭಿಮಾನಿಗಳು, ಹಿತೈಷಿಗಳು, ಚಾಮರಾಜ ಕ್ಷೇತ್ರ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಬೇಕಾಗಿರುವುದು ಏಕಾಂಗಿ ಭಾವವಲ್ಲ, ಅಂಗಾಂಗಿ ಭಾವ



ನಮ್ಮಲ್ಲಿ ಏನಿದ್ದರೇನು ಏಕಾಂಗಿ ಭಾವ ಮೂಡಿದರೆ ಜೀವನ ಅಸುಖಿ ಎನಿಸಿಬಿಡುತ್ತದೆ. ಜೊತೆಯಲ್ಲಿ ಎಲ್ಲರೂ ಇದ್ದರೂ, ಈ ಏಕಾಂಗಿ ಭಾವ ನಮ್ಮನ್ನು ಕಾಡುತ್ತದೆ. ಅಂತಹ ಮನೋಭಾವ ಮೂಡಿದಾಗ ನಮಗೆ ಯಾವುದರಲ್ಲೂ ಆಸಕ್ತಿ ಇರುವುದಿಲ್ಲ, ತಿಂದಿದ್ದು ರುಚಿಸುವುದಿಲ್ಲ, ಹಣದ ಬಗ್ಗೆಯೂ ಜಿಗುಪ್ಸೆ ಮೂಡಬಹುದು. ತಾನು ಏನು ಮಾಡಿದರೆ ಈ ಭಾವದಿಂದ ಹೊರಬರಬಹುದು? ಎಂಬುದು ಗೊತ್ತಾಗುವುದಿಲ್ಲ. ಏಕೆಂದರೆ ಆ ಸಂದರ್ಭದಲ್ಲಿ ಇತರರೊಡನೆ ಮಾತ ನಾಡುವುದೂ ಬೇಕಾಗುವುದಿಲ್ಲ. ಇಂತಹ ಸಂದರ್ಭಗಳು ಎಲ್ಲರ ಜೀವನದಲ್ಲೂ ಒಮ್ಮೆಯಾದರೂ ಮೂಡಿರುತ್ತದೆ. ಕೆಲವರಿಗೆ ಇದು ನಿರಂತರವಾಗಿ ಕಾಡಿಬಿಡಬಹುದು. ಇದಕ್ಕೆ ಪರಿಹಾರ ಎಂದರೆ ಆತ್ಮೀಯರೊಡನೆ ಮಾತನಾಡಿ ತಮ್ಮ ದುಗುಡವನ್ನು ಕಳೆದುಕೊಳ್ಳುವುದೇ ಆಗಿದೆ.

ಈ ಮನೋಭಾವ ಯುವಕರಲ್ಲಿ ಜಾಸ್ತಿ. ಯಾವುದೋ ಹುಚ್ಚುತನದಿಂದ ತಾನು ಯಾರನ್ನೋ ಪ್ರೀತಿಸುತ್ತಿರುವುದಾಗಿ ಭಾವಿಸುವುದು, ಅದು ಈಡೇರದಿದ್ದಾಗ ಈ ರೀತಿ ಏಕಾಂಗಿ ಭಾವ ತಂದುಕೊಳ್ಳುವುದು ಸಾಮಾನ್ಯ. ಹಾಗೆ ನೋಡಿದರೆ ತಾನು ಪ್ರೀತಿಸುತ್ತಿರುವ ವಿಷಯವನ್ನು ಮತ್ತೊಬ್ಬರಿಗೆ ಹೇಳೇ ಇರುವುದಿಲ್ಲ ಮನಸ್ಸಿನಲ್ಲೇ ಮಂಡಿಗೆ ತಿನ್ನುತ್ತಾ, ತಾವು ಮದುವೆಯಾದಂತೆ, ಹೆಚ್ಚು ವಿಹರಿಸುತ್ತಿರು ವಂತೆ ಕನಸು ಕಾಣುತ್ತಾರೆ. ಆದರೆ ನಿಜ ಜೀವನದಲ್ಲಿ ಅದು ಈಡೇರದಿದ್ದಾಗ ಅವರಲ್ಲಿ ಏಕಾಂಗಿ ಭಾವ ಮೂಡುತ್ತದೆ. ಈ ಜೀವನವೇ ಸಾಕು ಎನಿಸಿಬಿಡುತ್ತದೆ. ಏಕೆಂದರೆ ಜೀವನ ಎಂದರೆ ಕೇವಲ ಪ್ರೀತಿಸುವುದು, ಮದುವೆಯಾಗುವುದರಲ್ಲೇ ಮುಗಿಯುವು ದಿಲ್ಲ. ಆದರೆ ಆ ಹಂತದಲ್ಲಿ ಈ ವಿಷಯ ತಲೆಗೆ ಹೋಗುವುದಿಲ್ಲ. ಹಾಗೆಯೇ ತನಗೆ ದೊಡ್ಡ ಸಂಬಳದ ಕೆಲಸ ಸಿಗುತ್ತದೆ ಎಂದು ಭಾವಿಸಿ, ಪ್ರಯತ್ನವನ್ನೇ ಮಾಡದೆ, ಕೊನೆಗೆ ತನಗೆ ಅಂತಹ ಕೆಲಸ ಸಿಗಲಿಲ್ಲ ಎಂಬ ಏಕಾಂಗಿ ಭಾವ ಅವರಲ್ಲಿ ಹತಾಶೇ ಮೂಡಿಸಿಬಿಡುತ್ತದೆ.

ಹಿಂದೆ ಹೇಳುತ್ತಿದ್ದ ಒಂದು ಹಾಸ್ಯ ಪ್ರಸಂಗ ನೆನಪಾಗುತ್ತದೆ. ಒಬ್ಬ ಪಟ್ಟಣದ ವ್ಯಕ್ತಿ, ತನ್ನ ಮದುವೆ ಇಂಗ್ಲೆಂಡಿನ ಯುವರಾಣಿಯೊಂದಿಗೆ ನಿಶ್ಚಯವಾಗಿದೆ ಎಂದು ಹೇಳಿಕೊಂಡು ತಿರುಗುತ್ತಿದ್ದ. ಕೇಳಿದವರು ಇದು ಸಾಧ್ಯವೇ? ಎಂದು ಅಂದುಕೊಳ್ಳುತ್ತಿದ್ದರು. ಕೆಲವರು ಈ ಬಗ್ಗೆ ಅವನನ್ನು ಕೇಳಿಯೂ ಬಿಟ್ಟರು. ನೀನು ಇಂಗ್ಲೆಂಡಿನ ಯುವರಾಣಿಯನ್ನು ಹೇಗೆ ಮದುವೆಯಾಗುತ್ತೀಯಾ? ಇದು ಸಾಧ್ಯವೇ? ಅವರು ಹಾಗೂ ಅವರ ಮನೆಯವರು ಒಪ್ಪಿದ್ದಾರೆಯೇ? ಎಂದಾಗ ಅವನು ಹೇಳಿದನಂತೆ, ನಾನು ಒಪ್ಪಿಕೊಂಡಿದ್ದೇನೆ, ಇನ್ನು ಅವರು ಮಾತ್ರ ಒಪ್ಪಿಕೊಳ್ಳುವುದು ಬಾಕಿ ಇದೆ ಎಂದು. ನೀನು ಅವರನ್ನು ಭೇಟಿಯಾಗಿದ್ದೀಯಾ? ಎಂದರೆ ಹೌದು ಕನಸಿನಲ್ಲಿ ಎಂದನಂತೆ. ನಮ್ಮ ಮದುವೆ ಅರ್ಧದಷ್ಟು ನಿಶ್ಚಯವಾಗಿದೆ, ಏಕೆಂದರೆ ನಾನು ಒಪ್ಪಿದ್ದೇನಲ್ಲಾ! ಇನ್ನು ಅವರು ಒಪ್ಪುವುದು ಮಾತ್ರ ಬಾಕಿ ಇದೆ ಎಂದು ಹೇಳಿದನಂತೆ. ಹೀಗೆ ಜೀವನದಲ್ಲಿ ನಾವೇ ಏನೋ ಅಂದುಕೊಂಡು ಅದು ಈಡೇರದಿದ್ದಾಗ ಇಂತಹ ಏಕಾಂಗಿಭಾವ ಮೂಡುತ್ತದೆ. ಜೀವನ ಎಂದರೆ ಏನು? ಅದು ಹುಡುಗರ ಆಟವೇ? ಎಂಬುದನ್ನು ಅರಿಯದವರು ಇಂತಹ ಗೊಂದಲದಲ್ಲಿ ಮುಳುಗುತ್ತಾರೆ.

ನಮ್ಮ ದೇಶದಲ್ಲಿ ಅನೇಕರು ಆಗದಿರುವುದನ್ನು ಆಗುತ್ತದೆ ಎಂದು ಭಾವಿಸಿ, ಅದು ಈಡೇರದಿದ್ದಾಗ ಏಕಾಂಗಿ ಭಾವವನ್ನು ಅನುಭವಿಸುತ್ತಾರೆ. ಅವರು ದುರ್ಬಲ ಮನಸ್ಸಿನವರಾದರೆ ಪ್ರಾಣ ಕಳೆದುಕೊಳ್ಳುವವರೆಗೂ ಹೋಗಿಬಿಡಬಹುದು. ಇಂತಹ ದುರ್ಬಲ ಮನೋಭಾವದವರು ತನಗೆ ಆ ಹುಡುಗಿ ಸಿಗದಿದ್ದ ಮೇಲೆ ಇತರರಿಗೂ ಸಿಗಬಾರದು ಎಂದು ಹುಡುಗಿಯರ ಮೇಲೆ ಆಸಿಡ್ ಎರಚುವುದು, ತನ್ನ ರಕ್ತದಿಂದ ಪ್ರೇಮಪತ್ರ ಬರೆಯುವುದು ಇತ್ಯಾದಿ ಮಾಡುತ್ತಾರೆ. ಇದು ಕಾರ್ಯಸಾಧುವಲ್ಲ ಎಂಬುದು ಅವರಿಗೆ ಆ ಸಮಯದಲ್ಲಿ ಗೊತ್ತೇ ಆಗುವುದಿಲ್ಲ. ಅಲ್ಲದೆ ಹೀಗೆ ಮಾಡುವುದರಿಂದ ತನಗೇ ತೊಂದರೆಯಾಗುತ್ತದೆ ಎಂದೂ ಯೋಚಿಸುವುದಿಲ್ಲ.

ಇದಕ್ಕೆ ಪರಿಹಾರ ಎಂದರೆ ನಾವು ಅಂಗಾಂಗಿ ಭಾವವನ್ನು ಬೆಳೆಸಿಕೊಳ್ಳುವುದು. ಅಂಗಾಗಿ ಭಾವ ಎಂದರೇನು? ಎಂದರೆ ನಮ್ಮ ದೇಹವನ್ನು ಇದಕ್ಕೆ ಹೋಲಿಕೆ ಮಾಡಬಹುದು. ನಮಗೆ ಎರಡು ಕಣ್ಣಿದೆ, ಆದರೆ ಇವೆರಡೂ ಯಾವಾಗಲೂ ತಮ್ಮನ್ನು ತಾವು ನೋಡಿಕೊಳ್ಳಲಾಗುವುದಿಲ್ಲ. ಹಾಗೆಯೇ ಎರಡು ಕಿವಿಗಳಿವೆ. ಅವೂ ಸಹಾ ಇಡೀ ಜೀವನ ಒಂದನ್ನು ಇನ್ನೊಂದು ನೋಡುವುದಿಲ್ಲ. ಹೊಟ್ಟೆ-ಬೆನ್ನಿನ ಕಥೆಯೂ ಇದೆ. ಅವೂ ರೈಲಿನ ಹಳಿಗಳಂತೆ ಪರಸ್ಪರ ಭೇಟಿಯೇ ಆಗುವುದಿಲ್ಲ. ಹಾಗೆಂದು ಅವು ಆಯಾ ದೇಹಕ್ಕೆ ಪೂರಕವಾಗಿ ನಡೆದುಕೊಳ್ಳುವುದನ್ನು ಬಿಡುವುದಿಲ್ಲ. ಒಂದು ಕಿವಿ ಕೇಳುತ್ತಿರುವಾಗ ಇನ್ನೊಂದು ನಾನೇಕೆ ಕೇಳಿಸಿಕೊಳ್ಳಬೇಕು? ಎಂದು ಯೋಚಿಸುವುದಿಲ್ಲ. ಹಾಗೆಯೇ ಕಣ್ಣುಗಳು. ಅವು ಎಂದೂ ತಾವು ಬೇರೆ ಬೇರೆ ಎಂದು ಯೋಚಿಸದೆ, ತಾವು ಹೀಗೆ ಕೆಲಸ ಮಾಡುವುದು ಅನಿವಾರ್ಯ ಎಂದು ಭಾವಿಸಿ ದೇಹಕ್ಕೆ ಪೂರಕವಾಗಿ ಕೆಲಸ ಮಾಡುತ್ತವೆ. ಇದನ್ನು ಅಂಗಾಂಗಿ ಭಾವ ಎಂದು ಕರೆಯಲಾಗುತ್ತದೆ.

> ನಮ್ಮ ದೇಶದಲ್ಲಿ ಅನೇಕರು ಆಗದಿರುವುದನ್ನು ಆಗುತ್ತದೆ ಎಂದು ಭಾವಿಸಿ, ಅದು ಈಡೇರದಿದ್ದಾಗ ಏಕಾಂಗಿ ಭಾವವನ್ನು ಅನುಭವಿಸುತ್ತಾರೆ. ಅವರು ದುರ್ಬಲ ಮನಸ್ಸಿನವರಾದರೆ ಪ್ರಾಣ ಕಳೆದು ಕೊಳ್ಳುವವರೆಗೂ ಹೋಗಿಬಿಡಬಹುದು. ಇಂತಹ ದುರ್ಬಲ ಮನೋಭಾವದವರು ತನಗೆ ಆ ಹುಡುಗಿ ಸಿಗದಿದ್ದ ಮೇಲೆ ಇತರರಿಗೂ ಸಿಗಬಾರದು ಎಂದು ಹುಡುಗಿಯರ ಮೇಲೆ ಆಸಿಡ್ ಎರಚುವುದು, ತನ್ನ ರಕ್ತದಿಂದ ಪ್ರೇಮಪತ್ರ ಬರೆಯುವುದು ಇತ್ಯಾದಿ ಮಾಡುತ್ತಾರೆ. ಇದು ಕಾರ್ಯಸಾಧುವಲ್ಲ ಎಂಬುದು ಅವರಿಗೆ ಆ ಸಮಯದಲ್ಲಿ ಗೊತ್ತೇ ಆಗುವುದಿಲ್ಲ. ಅಲ್ಲದೆ ಹೀಗೆ ಮಾಡುವುದರಿಂದ ತನಗೇ ತೊಂದರೆಯಾಗುತ್ತದೆ ಎಂದೂ ಯೋಚಿಸುವುದಿಲ್ಲ.

ನಮ್ಮ ದೇಶವೂ ಹಾಗೆಯೇ. ಎರಡು ರಾಜ್ಯಗಳು ಎಂದಿಗೂ ಒಂದಾಗುವುದಿಲ್ಲ. ಆದರೆ ಅವು ದೇಶಕ್ಕೆ ಪೂರಕವಾದ ನಡವಳಿಕೆಯನ್ನು ಹೊಂದಿರುತ್ತವೆ. ದೇಶಕ್ಕೆ ಹೋಲಿಸಿದರೆ ಅವು ಚಿಕ್ಕದಾಗಿರಬಹುದಾದರೂ ಅವು ಇಡೀ ದೇಶಕ್ಕೆ ಪೂರಕವಾಗಿಯೇ ಕೆಲಸ ನಿರ್ವಹಿಸುತ್ತವೆ. ಒಂದು ವೇಳೆ ದೇಶಕ್ಕೆ ತೊಂದರೆಯಾದರೆ ತಮಗೂ ತೊಂದರೆಯಾಗುತ್ತದೆ ಎಂದು ಅವು ಭಾವಿಸುತ್ತವೆ. ಅವುಗಳಲ್ಲಿ ಏಕಾಂಗಿ ಭಾವ ಮೂಡುವುದಿಲ್ಲ, ಬದಲಾಗಿ ಅಂಗಾಂಗಿ ಭಾವ ಕಾಣುತ್ತದೆ. ಇದು ಅಪೇಕ್ಷಣೀಯವಾದ ಪ್ರಕ್ರಿಯೆ. ಕಣ್ಣು ನೋಡುವುದು ನಿಲ್ಲಿಸಿದಾಗ ವ್ಯಕ್ತಿ ಕುರುಡನಾಗುತ್ತಾನೆ. ಅಂತಹ ವ್ಯಕ್ತಿ ಏಕಾಂಗಿ ಭಾವ ಅನುಭವಿಸುತ್ತಾನೆ. ಆದರೆ ಅವನ ಇತರೆ ಅಂಗಾಗಗಳು ಆ ಕೊರತೆಯನ್ನು ನೀಗಿಸಲು ಪ್ರಯತ್ನಿಸುತ್ತವೆ. ನಾವು ಅನೇಕ ಅಂಗವಿಕಲರಲ್ಲಿ (ವಿಕಲ ಚೇತನರು) ಅಗಾಧವಾದ ಪ್ರತಿಭೆಯನ್ನು ಕಾಣುತ್ತೇವೆ. ಅವರು ತಮಗೆ ಒಂದು ಅಂಗ ಸರಿಯಿಲ್ಲ ಎಂದು ಯೋಚಿಸುತ್ತಾ ಕುಳಿತುಕೊಳ್ಳುವುದಿಲ್ಲ, ಬದಲಾಗಿ ಇತರೆ ಸರಿಯಾದ ಅಂಗಗಳನ್ನು ಬಳಸಿಕೊಂಡು ಸಾಧನೆ ಮಾಡುತ್ತಾರೆ. ಇತ್ತೀಚೆಗೆ ಗಮನಿಸಿದ ಹುಟ್ಟಿನಿಂದಲೇ ಎರಡೂ ಕಾಲಿಲ್ಲದ ವ್ಯಕ್ತಿಯೊಬ್ಬ, ತನಗೆ ಕಾಲಿಲ್ಲ ಎಂದು ಯೋಚಿಸುತ್ತಾ ಕುಳಿತುಕೊಳ್ಳದೇ ಕೈಗಳ ಸಹಾಯದಿಂದ ಓಡಲು ಕಲಿಯುತ್ತಾನೆ. ಕೊನೆಗೆ ಕಾಲಿದ್ದವರು ಓಡುವ ವೇಗದಲ್ಲೇ ಓಡುವಂತೆ ಪರಿವರ್ತನೆಯಾಗುತ್ತಾನೆ. ಕಾಲಿಲ್ಲ ಎಂದು ಚಿಂತಿಸುತ್ತಾ ಕುಳಿತುಕೊಳ್ಳುವುದು ಏಕಾಂಗಿ ಭಾವವಾದರೆ, ಕಾಲಿಲ್ಲದಿದ್ದರೂ ನಾನು ಓಡಬಹುದೇ? ಇದಕ್ಕೆ ನನ್ನ ಇತರೆ ಅಂಗಗಳು ಸಹಕರಿಸಬಹುದೇ? ಎಂದು ಚಿಂತಿಸುವುದು ಅಂಗಾಂಗಿ ಭಾವ ಎನಿಸುತ್ತದೆ. ಅಂಗಗಳು ತಮಗೆ ನಿಗದಿ ಪಡಿಸಿದ ಕೆಲಸಕ್ಕಿಂತಲೂ ಭಿನ್ನವಾದ ಕೆಲಸ ಮಾಡಬಲ್ಲವು. ಅದು ನಮ್ಮ ಮನಸ್ಥಿತಿ ಯನ್ನು ಅನುಸರಿಸುತ್ತದೆ. ಎರಡೂ ಕೈಗಳಿಲ್ಲದವರು ಕಾಲಿನ ಸಹಾಯದಿಂದಲೇ ತಮ್ಮ ಕೆಲಸ ಮಾಡಿಕೊಳ್ಳುವುದು, ಕಾರು ಓಡಿಸುವುದು, ಕಾಲಿನಿಂದಲೇ ಬರೆಯುವುದು, ಕಂಪ್ಯೂಟರ್‌ನಲ್ಲಿ ಕೆಲಸ ಮಾಡುವುದನ್ನು ಕಾಣುತ್ತೇವೆ. ಇಲ್ಲಿ ಮನೋಭಾವವನ್ನು ಗುರುತಿಸಬೇಕು. ಒಂದು ಅಂಗ ಇಲ್ಲವೆಂದರೆ ದೇಹದ ಇತರೆ ಅಂಗವನ್ನು ಆ ಅಂಗದ ಬದಲಿಯಾಗಿ ಅವರು ಉಪಯೋಗಿಸಿ ಕೊಂಡು ಸ್ವಾವಲಂಬಿಯಾಗಿ ಬದುಕುತ್ತಾರೆ. ಕಾಲಿಲ್ಲದವರು ಕೃತಕ ಕಾಲಿನಲ್ಲಿ ಎಲ್ಲರಿಗಿಂತ ಅಧಿಕ ವೇಗದಲ್ಲಿ ಓಡಬಲ್ಲರು. ಅವೆಲ್ಲಾ ಹೇಗೆ ಸಾಧ್ಯವಾಯಿತು ಎಂದರೆ ಅಂತಹ ಅಂಗವೈಕಲ್ಯವನ್ನು ಅವರು ಏಕಾಂಗಿ ಭಾವದ ಬದಲು ಅಂಗಾಂಗಿ ಭಾವದಿಂದ ಸ್ವೀಕರಿಸಿದ್ದೇ ಆಗಿದೆ. ಇಂತಹ ಮನೋಭಾವ ಬೆಳೆಸಿಕೊಳ್ಳಬೇಕು. ನಮ್ಮ ಸಮಾಜವೂ ಅಷ್ಟೇ, ಕೈಲಾಗದವರ ಸಹಾಯಕ್ಕೆ ಒಂದಷ್ಟಾದರೂ ಸಹಕ ರಿಸುತ್ತದೆ. ಆದರೆ ಬೇಡುವುದನ್ನೇ ಅಭ್ಯಾಸ ಮಾಡಿಕೊಂಡವರ ಬಗೆಗಿನ ಆಸ್ತೆ ಕಡಿಮೆಯಾಗುತ್ತದೆ. ತೊಂದರೆ ಇದ್ದರೂ ಅದರಿಂದ ಹೊರಬರಲು ಇಚ್ಛಿಸುವವರಿಗೆ ಸಮಾಜ ಯಾವಾಗಲೂ ಸ್ಪಂದಿಸುತ್ತದೆ.

ನನ್ನ ಸ್ನೇಹಿತರೊಬ್ಬರು ಬಲಗೈಯಲ್ಲಿ ಬರೆಯುತ್ತಿದ್ದರು. ಆದರೆ ಇದ್ದಕ್ಕಿದ್ದಂತೆ, ಏನೋ ಕಾರಣದಿಂದ ಅವರಿಗೆ ಬಲಗೈಯಲ್ಲಿ ಬರೆಯಲು ಸಾಧ್ಯವಾಗದ ಸ್ಥಿತಿ ಬಂದಿತು. ಹಾಗೆಂದು ಅವರು ಹತಾಶರಾಗಿ ಕೂಡಲಿಲ್ಲ. ಬದಲಿಗೆ ಎಡಗೈಯಿಂದ ಬರೆಯಬಹುದೇ? ಎಂದು ಪ್ರಯತ್ನಿಸಿದರು. ಆ ಪ್ರಯತ್ನ ನಿರಂತರವಾಗಿ ನಡೆಯಿತು. ಕೊನೆಗೆ ಅವರು ಎಡಗೈಯಿಂದ ಚೆನ್ನಾಗಿ ಬರೆಯುವಂತೆ ಆಯಿತು. ಬಲಗೈಯಲ್ಲಿ ಬರೆಯಲಾಗುತ್ತಿಲ್ಲ, ಎಡಗೈಯಿಂದ ಬರೆಯಲು ಬರುವುದಿಲ್ಲ ಎಂದು ಅವರು ಧೈರ್ಯ ಕಳೆದುಕೊಳ್ಳದೇ ಪ್ರಯತ್ನಿಸಿದರು. ಎಡಗೈ ಬರವಣಿಗೆ ಅವರಿಗೆ ಒಲಿಯಿತು. ಆರಂಭದಲ್ಲಿ ಸಾಧ್ಯವೇ ಇಲ್ಲವೇನೋ ಎಂಬಂತಿದ್ದುದು, ನಿರಂತರ ಪ್ರಯತ್ನದಿಂದಾಗಿ ಕ್ರಮೇಣ ಬರೆಯಲು ಸಾಧ್ಯವಾಯಿತು. ಎಡಗೈ ಹಠ ಹಿಡಿಯಲಿಲ್ಲ, ಬರೆಯುವುದು ನನ್ನ ಕೆಲಸವಲ್ಲ ಎಂದೂ ಅದು ಹೇಳಲಿಲ್ಲ. ನಿರಂತರ ಪ್ರಯತ್ನಕ್ಕೆ ಅದು ಸ್ಪಂದಿಸಿತು. ಎಡಗೈ ಬರೆಯಲು ಅನುವಾಯಿತು. ಇದು ಅಂಗಾಂಗಿ ಭಾವ. ನಾನು ಎಡಗೈಯಲ್ಲಿ ಬರೆಯಲಾರೆ ಎಂದು ಕುಳಿತಿದ್ದರೆ ಅದು ಏಕಾಂಗಿ ಭಾವವಾಗಿ ಬಿಡುತ್ತಿತ್ತು.


ಈ ಮಾತು ನಮ್ಮ ಕೌಟುಂಬಿಕ ಜೀವನಕ್ಕೂ ಅನ್ವಯವಾಗುತ್ತದೆ. ಮನೆಯಲ್ಲಿ ಒಬ್ಬನಿಗೆ ತೊಂದರೆಯಾದರೆ ಅವನ ಸಹಕಾರಕ್ಕೆ ಇಡೀ ಕುಟುಂಬದ ಸದಸ್ಯರು ನಿಲ್ಲುತ್ತಾರೆ. ಅವನು ಮೊದಲಿನ ಸ್ಥಿತಿಗೆ ಬರುವಂತಾಗಲು ಅವರೆಲ್ಲಾ ಸಹಕರಿಸುತ್ತಾರೆ. ಇದು ಅಂಗಾಂಗಿ ಭಾವ. ಏಕಾಂಗಿ ಭಾವದಿಂದ ಕುಗ್ಗುತ್ತಾ ಕುಳಿತರೆ, ಇತರರು ನಮ್ಮ ಸಹಾಯಕ್ಕೆ ಬರುವುದಿಲ್ಲ.

ನಾವು ಸಂಘಜೀವಿಗಳೇ ಹೊರತು, ಹಿಂಡಿನಲ್ಲಿರುವ ಪ್ರಾಣಿಗಳಂತೆ ಅಲ್ಲ. ನಾವೆಲ್ಲರೂ ನಮ್ಮ ನಮ್ಮ ಕುಟುಂಬದ ಅವಿಭಾಜ್ಯ ಅಂಗಗಳು. ನಮ್ಮ ಅಸ್ತಿತ್ವ ಹಾಗೂ ನಮ್ಮ ವ್ಯಕ್ತಿತ್ವದ ಮೂಲ ನಮ್ಮ ಕುಟುಂಬ. ಕುಟುಂಬದಿಂದಲೇ ನಮ್ಮ ಪಾಲನೆ, ಪೋಷಣೆ, ಸಂಸ್ಕಾರ ಸಿಗುತ್ತದೆ. ನಮ್ಮ ಹಾಗೂ ನಮ್ಮ ಕುಟುಂಬದ ಸಂಬಂಧವು ನಾವು ಶರೀರ ಹಾಗೂ ಅವಯವಗಳ ನಡುವಿನಂತೆ, ಇದನ್ನು ಅಂಗಾಂಗಿಭಾವ ಎನ್ನಬಹುದು. ಶರೀರದ ಬೇರೆ ಬೇರೆ ಅಂಗಗಳ ಸ್ಥಾನವೂ ಬೇರೆ ಬೇರೆ, ಅವುಗಳ ಕೆಲಸವೂ ಬೇರೆ ಬೇರೆ. ಆದರೆ ಎಲ್ಲ ಅಂಗಗಳ ಚೈತನ್ಯದ ಮೂಲ ಶರೀರವೇ ಮತ್ತು ಶರೀರಕ್ಕೂ ಒಟ್ಟು ಚೈತನ್ಯ ಪ್ರತಿ ಅಂಗದಿಂದಲೇ ಸಿಗುವುದು. ಎಲ್ಲ ಅಂಗಗಳೂ ಶರೀರದ ಹಿತಕ್ಕಾಗಿಯೇ ಕೆಲಸ ಮಾಡುತ್ತವೆ. ಶರೀರದಿಂದ ಯಾವುದೇ ಒಂದು ಅಂಗವೂ ಬೇರೆಯಾಗಿ ಹೋದರೆ ಅದು ಕೊಳೆತು ಹೋಗುತ್ತದೆ. ಶರೀರ ಮತ್ತು ಅಂಗಗಳ ಈ ಸಾಮರಸ್ಯದ ಸಂಬಂಧವನ್ನೇ ಅಂಗಾಂಗೀ ಭಾವ ಎನ್ನುತ್ತಾರೆ.

ನಾವು ಹೀಗೆ ಅಂಗಾಂಗಿ ಭಾವವನ್ನು ಬೆಳೆಸಿಕೊಳ್ಳಬೇಕು. ಏಕಾಂಗಿ ಭಾವದಿಂದ ಮನುಷ್ಯ ಕುಗ್ಗುತ್ತಾನೆ, ಆದರೆ ಅಂಗಾಂಗಿ ಭಾವದಿಂದ ಅವನು ಹಿಗ್ಗುತ್ತಾನೆ. ದೇಶದ ಹಿತದೃಷ್ಟಿಯಿಂದಲೂ ನಮಗೆ ಅಂಗಾಂಗಿ ಭಾವದ ಅಗತ್ಯತೆ ಇದೆ. ದೇಶದ ಒಂದು ಭಾಗದಲ್ಲಿ ಏನಾದರೂ ದುರಂತ ನಡೆದರೆ, ಅದಕ್ಕೆ ಇಡೀ ದೇಶ ಸ್ಪಂದಿಸುತ್ತದೆ. ಎಲ್ಲೋ ಭೂಕಂಪವಾಯಿತು, ಎಲ್ಲೋ ಪ್ರವಾಹ ಬಂದಿತು ಎಂದರೆ ದೇಶದ ಇತರೆ ಭಾಗದ ಜನ ಅದಕ್ಕಾಗಿ ಕಣ್ಣೀರು ಸುರಿಸುತ್ತಾರೆ, ತಮಗೆ ಸಾಧ್ಯವಾದ ಸಹಾಯ ಹಸ್ತ ಚಾಚುತ್ತಾರೆ. ಹಾಗಾದ ಪ್ರದೇಶದ ಜನರು ಏಕಾಂಗಿಗಳಲ್ಲ, ನಾವೂ ಅಂಗಾಂಗಿ ಭಾವದ ರೂಪದಲ್ಲಿ ಅವರಿಗೆ ಸ್ಪಂದಿಸುತ್ತೇವೆ. ಇದಕ್ಕೆ ಮಾನವೀಯತೆ ಎಂದು ಹೆಸರು. ಹಾಗಾಗಿ ನಾವು ಏನೇ ಆದರೂ ಏಕಾಂಗಿ ಭಾವ ಬೆಳೆಸಿಕೊಳ್ಳದೆ, ಇತರರ ಸಹಾಯದಿಂದ ಅಂಗಾಂಗಿ ಭಾವ ಬೆಳಸಿಕೊಂಡು ಮತ್ತೆ ಮೊದಲಿನಂತೆ ಆಗಲು ಪ್ರಯತ್ನಿಸಬೇಕು.

ಕುವೆಂಪು ವರ್ಸಸ್ ಕ್ಯಾಮರಾ ಪುಸ್ತಕ ಬಿಡುಗಡೆ

ಮೈಸೂರು, ಜ.29(ಎಂಟಿವೈ)- ವನ್ಯಜೀವಿ ಛಾಯಾ ಚಿತ್ರಗ್ರಾಹಕರಾದ ಕೃಪಾಕರ ಮತ್ತು ಸೇನಾನಿ ರಚಿಸಿರುವ ಕುವೆಂಪು ವರ್ಸಸ್ ಕ್ಯಾಮರಾ ಪುಸ್ತಕ ಬಿಡುಗಡೆ ಸಮಾರಂಭ ಭಾನುವಾರ ಮೈಸೂರಿನ ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಜರುಗಿತು.



ವನ್ಯಜೀವಿ ಛಾಯಾಚಿತ್ರಗ್ರಾಹಕರಾದ ಕೃಪಾಕರ ಮತ್ತು ಸೇನಾನಿ ರಚಿಸಿರುವ ಕುವೆಂಪು ವರ್ಸಸ್ ಕ್ಯಾಮರಾ ಪುಸ್ತಕ ಬಿಡುಗಡೆ ಸಮಾರಂಭ ಮೈಸೂರಿನ ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ನಡೆಯಿತು.

ಕರ್ನಾಟಕ ಶಾಂತವೇರಿ ಜನವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಮೂಡ್ನಕೂಡು ಚಿನ್ನಸ್ವಾಮಿ ಪುಸ್ತಕ ಲೋಕಾರ್ಪಣೆ ಮಾಡಿದರು. ಬಳಿಕ ಮಾತನಾಡಿದ ಅವರು, ರಾಷ್ಟ್ರಕವಿ ಕವಿ ಕುವೆಂಪು ಅವರ ಸರ್ವೋದಯವಾಗಲಿ, ಸಪ್ತ ಸೂತ್ರವಾಗಲಿ ಎಂಬ ಸೂತ್ರ ಇಂದಿಗೂ ಜಾರಿಯಾಗದಿರುವುದು ನೋವಿನ ಸಂಗತಿ. ನಾವು ಬರೆದ ಹಾಗೆ ಬದುಕು ನಡೆಸುವುದು ಬಹಳ ಕಷ್ಟ, ಆದರೆ, ಕುವೆಂಪು ಅವರು ಬರೆದ ಹಾಗೆ ಜೀವಿಸಿದರು. ಬುದ್ಧ, ಬಸವಣ್ಣ ನಂತರ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ರಾಷ್ಟ್ರಕವಿ ಕುವೆಂಪು ನಮ್ಮ ದೇಶಕ್ಕೆ ಯಾವುದು ಅಗತ್ಯವಿದೆ ಎನ್ನುವುದನ್ನು ತೋರಿಸಿಕೊಟ್ಟರು. ಕುವೆಂಪು ವಿರೋಧಿಸುತ್ತಿದ್ದ ವರ್ಣಾಶ್ರಮ ವ್ಯವಸ್ಥೆ ಮತ್ತು ಧಾರ್ಮಿಕ ಅಸಹಿಷ್ಣುತೆಯನ್ನು ಇಂದಿಗೂ ತೊಲಗಿಲ್ಲ. ಇಂದಿನ ವಿದ್ಯಾಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅವುಗಳು ಮತ್ತಷ್ಟು ಗಟ್ಟಿಯಾಗುತ್ತಿದ್ದಂತೆ ಕಂಡುಬರುತ್ತಿದೆ. ನಾವೆಲ್ಲರೂ ಕುವೆಂಪು ಅವರ ಸಾಹಿತ್ಯವನ್ನು ಓದಿ ಆನಂದ ಪಡುವುದಕ್ಕೆ ಮಾತ್ರ ಸೀಮಿತಿಗೊಂಡಿದ್ದೇವೆ. ಆದರೆ, ಅವರ ಚಿಂತನೆಗಳನ್ನು ಮೈಗೂಡಿಸಿಕೊಳ್ಳುವಲ್ಲಿ ಹಿಂದುಳಿದಿದ್ದೇವೆ ಎಂದು ವಿಷಾದಿಸಿದರು.

ಕುವೆಂಪು ಅವರ ವ್ಯಕ್ತಿ ಪರಿಚಯದ ಬಗ್ಗೆ ಅನೇಕ ಪುಸ್ತಕಗಳು ಹೊರ ಬಂದಿವೆ. ಆದರೆ, ಕೃಪಾಕರ-ಸೇನಾನಿ ಅವರು ರಚಿಸಿರುವ ಕುವೆಂಪು ವರ್ಸಸ್ ಕ್ಯಾಮರಾ ಪುಸ್ತಕ ಅನೇಕ ವಿಶಿಷ್ಟತೆ ಹೊಂದಿರುವ ಅಪರೂಪ ಪುಸ್ತಕವಾಗಿದೆ. ಇದರಲ್ಲಿ ಪ್ರಕಟಿಸಿರುವ ಎಲ್ಲಾ ಚಿತ್ರಕ್ಕೂ ಶೀರ್ಷಿಕೆ ನೀಡಿರುವುದು ಆಕರ್ಷಣೆಯವಾಗಿದೆ. ಕುವೆಂಪು ಅವರ ಸಂಧ್ಯಾಕಾಲದ ಫೋಟೊ ಗಮನ ಸೆಳೆಯುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಬಹುಭಾಷ ನಟ ಪ್ರಕಾಶ್ ರಾಜ್ ಮಾತನಾಡಿ, ಕುವೆಂಪು ವರ್ಸಸ್ ಕ್ಯಾಮೆರಾ ಪುಸ್ತಕದಲ್ಲಿ ಕೃಪಾಕರ್ ಮತ್ತು ಸೇನಾನಿಯವರನ್ನು ನಾನು ಹೆಚ್ಚಾಗಿ ಕಂಡಿದ್ದೇನೆ. ಇದು ಕೃತಿ ಎನ್ನುವುದಕ್ಕಿಂತ ಒಬ್ಬ ಧೀಮಂತ ದಾರ್ಶನಿಕನ ವ್ಯಕಿತ್ವ ಎನ್ನಬಹುದು. ಇದು ಸಂಸಾರಸ್ಥರಿಗೆ ಯೋಗ್ಯವಾದ ಪುಸ್ತಕವಲ್ಲ. ಇದು ದಿಢೀರ್ ಏಕಾಂತವನ್ನು, ನಮ್ಮ ಮುಂದಿನ ಬದುಕನ್ನು ಮತ್ತು ನಮ್ಮ ಮಧ್ಯೆ ನೆಲೆಸಿದಂತಹ ಮಹಾನ್ ಕವಿ ಕುವೆಂಪು ಅವರನ್ನು ಪರಿಚಯ ಮಾಡಿಸುವಂತಹ ಪುಸ್ತಕವಾಗಿದೆ. ರಾಷ್ಟ್ರಕವಿ ಕುವೆಂಪು ಅವರ ಸಾಕಷ್ಟು ಗೊತ್ತಿಲ್ಲದ ವಿಚಾರಗಳನ್ನು ಈ ಪುಸ್ತಕ ತಿಳಿಸಿಕೊಡು ತ್ತದೆ. ಇದೊಂದು ಅತ್ಯುತ್ತಮ ಪುಸ್ತಕವಾಗಿದೆ ಎಂದು ಅಭಿಪ್ರಾಯಪಟ್ಟರು.

ವನ್ಯಜೀವಿ ಛಾಯಾಗ್ರಾಹಕ ಸೇನಾನಿ ಮಾತನಾಡಿ, ನಾವು ಒಬ್ಬ ವ್ಯಕ್ತಿ ಚಿತ್ರವನ್ನು ಹಿಡಿಯಬಹುದು. ಆದರೆ ಅವರ ವ್ಯಕ್ತಿತ್ವವನ್ನು ಹಿಡಿಯುವುದು ಅಸಾಧ್ಯ. ಈ ವ್ಯಕ್ತಿ ಚಿತ್ರವನ್ನು ಸೆರೆ ಹಿಡಿಯುವುದು ಹೇಗೆ ಎಂಬ ಪ್ರಶ್ನೆ ತಲೆದೋರಿತ್ತು. ಕುವೆಂಪು ಅವರ ಸಾಹಿತ್ಯ ಓದಿದ್ದೇವೆ. ಆದರು, ಕ್ಯಾಮರಾದ ಮೂಲಕ ಈ ವ್ಯಕ್ತಿಯನ್ನು ಹೇಗೆ ಹಿಡಿಯುವುದು ಎಂಬುದು ಯೋಚನೆಯಾಗಿತ್ತು. ಕುವೆಂಪು ಅವರ ಭಾಷಣಗಳನ್ನು ಕೇಳಿದಾಗ, ಯಾವುದೇ ವ್ಯಕ್ತಿಗಿಂತ ಈ ವ್ಯಕ್ತಿ ಬಹಳ ವಿಶಿಷ್ಟವಾಗಿದ್ದಾರೆ ಎಂದು ಕುವೆಂಪು ಅವರನ್ನು ಫೋಟೊ ಮೂಲಕ ಸೆರೆಹಿಡಿಯುವ ಪ್ರಯತ್ನ ಮಾಡಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಪ್ರೊ. ಬಿ.ಎನ್. ಶ್ರೀರಾಮ್ ಹಾಗೂ ವನ್ಯಜೀವಿ ಛಾಯಗ್ರಾಹಕ ಕೃಪಾಕರ ಉಪಸ್ಥಿತರಿದ್ದರು.

ಕೇಂದ್ರ ಬಜೆಟ್ ಅಧಿವೇಶನ

ಇಂದು ಸರ್ವಪಕ್ಷ ಸಭೆ

ನವದೆಹಲಿ: ಸಂಸತ್ತಿನ ಬಜೆಟ್ ಅಧಿವೇಶನದ ಮುನ್ನಾ ದಿನವಾದ ಸೋಮವಾರ ಕೇಂದ್ರ ಸರ್ಕಾರ ಸರ್ವಪಕ್ಷಗಳ ಸಭೆ ಕರೆದಿದೆ. ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ವಾಡಿಕೆಯಂತೆ ಸಭೆಕರೆದಿದ್ದು, ಜ.30ರಂದು ಮಧ್ಯಾಹ್ನ ಸಂಸತ್ತಿನ ಆವರಣದಲ್ಲಿ ಸಭೆ ನಡೆಯಲಿದೆ. ಈ ವೇಳೆ ಸರ್ಕಾರ ಸುಗಮ ಕಲಾಪ ನಡೆಸಲು ಎಲ್ಲಾ ಪಕ್ಷಗಳ ಸಹಕಾರ ಕೋರುವ ನಿರೀಕ್ಷೆಯಿದೆ.

ಪ್ರತಿಪಕ್ಷಗಳು ಕೂಡ ಕಲಾಪಕ್ಕೆ ಸಜ್ಜಾಗಿದ್ದು ಬಜೆಟ್ ಸೇರಿದಂತೆ ಕೇಂದ್ರ ಸರ್ಕಾರದ ವೈಫಲ್ಯಗಳನ್ನು ಅಧಿವೇಶನದಲ್ಲಿ ಚರ್ಚಿಸುವ ನಿರೀಕ್ಷೆಯಿದೆ. ಜತೆಗೆ ಈಗಾಗಲೇ ಯೋಜಿಸಿಕೊಂಡಿರುವ ಅನೇಕ ವಿಚಾರಗಳನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಲು ಕಾರ್ಯತಂತ್ರ ರೂಪಿಸಿವೆ. ಮಧ್ಯಾಹ್ನ ಎನ್‌ಡಿಎ ಸಂಸದೀಯ ನಾಯಕರ ಸಭೆಯೂ ನಡೆಯಲಿದ್ದು, ಅಧಿವೇಶನದ ಕಾರ್ಯತಂತ್ರ ರೂಪಿಸಲಿದೆ. ಸಂಸತ್ತಿನ ಉಭಯ ಸದನಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ ಮಾಡಲಿದ್ದಾರೆ. ನಂತರ ಮುಂಗಡ ಪತ್ರ ಮಂಡನೆಯಾಗಲಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಫೆ.1ರಂದು ಕೇಂದ್ರ ಬಜೆಟ್ ಅನ್ನು ಮಂಡಿಸಲಿದ್ದಾರೆ. 2023-24ರ ಬಜೆಟ್ ಮುಂಬರುವ ಲೋಕ ಸಭೆ ಚುನಾವಣೆಗೆ ಪೂರಕವಾಗಿ ಸಿದ್ಧಗೊಂಡಿರಬಹುದೆಂದು ಅಂದಾಜಿಸಲಾಗಿದೆ ಅಧಿವೇಶನದ ಜ.31ರಿಂದ ಪ್ರಾರಂಭವಾಗಲಿದ್ದು, ಫೆಬ್ರವರಿ 13ರವರೆಗೆ ಮುಂದುವರಿಯುವ ಸಾಧ್ಯತೆಯಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು, ಮಂಡ್ಯದಲ್ಲಿ ಜರುಗಿದ 'ನಿಧಿ ಆಪ್‌ಕೆ ನಿಕಟ್ 2.0'



'ನಿಧಿ ಆಪ್‌ಕೆ ನಿಕಟ್ 2.0' ಕಾರ್ಯಕ್ರಮವು ಮೈಸೂರಿನ ಹೈಮಾ ಸಭಾಂಗಣದಲ್ಲಿ ನಡೆಯಿತು.



ಮಂಡ್ಯದ ಕರ್ನಾಟಕ ಸಂಘದ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ನಡೆಯಿತು

ಮೈಸೂರು,ಜ.29(ಪಿಎಂ)- ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಓ) ಸದಸ್ಯರು, ಉದ್ಯೋಗದಾತರು ಹಾಗೂ ಪಿಂಚಣಿ ಪಡೆಯುವವರ ಕೊಂದು ಕೊರತೆ ಆಲಿಸುವ 'ನಿಧಿ ಆಪ್‌ಕೆ ನಿಕಟ್ 2.0' ಕಾರ್ಯಕ್ರಮವು ಮೈಸೂರು ಮತ್ತು ಮಂಡ್ಯದಲ್ಲಿ ಜ.27ರಂದು ನಡೆಯಿತು. ಮೈಸೂರಿನ ಕಾರ್ಯಕ್ರಮವು ಹೆಬ್ಬಾಳು ಕೈಗಾರಿಕಾ ಪ್ರದೇಶದ ಹೆಬ್ಬಾಳು ಕೈಗಾರಿಕ ವಸಾಹತು ಉತ್ಪಾದಕರ ಸಂಘದ ಸಭಾಂಗಣದಲ್ಲಿ (ಹೈಮಾ) ನಡೆಯಿತು. ಇದಕ್ಕೆ ಹೈಮಾ ಕಾರ್ಯದರ್ಶಿ ರಾಮಕೃಷ್ಣ ಚಾಲನೆ ನೀಡಿದರು. ಆರ್‌ಓ ಅನುಷ್ಠಾನಾಧಿಕಾರಿ ಎಸ್.ನಾರಾಯಣರಾವ್, ಅಧಿಕಾರಿ ಸಂಪತ್‌ಕುಮಾರ್ ಮತ್ತಿತರರು ಹಾಜರಿದ್ದರು.

ಮಂಡ್ಯ: ಇಲ್ಲಿನ ಕರ್ನಾಟಕ ಸಂಘದ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮವನ್ನು ನಿವೃತ್ತ ಪ್ರಾಧ್ಯಾಪಕ ಜಯಪ್ರಕಾಶ್‌ಗೌಡ ಉದ್ಘಾಟಿಸಿದರು. ವಿಶ್ವಮಾನವ ಶಾಲೆ ಪ್ರಾಂಶುಪಾಲ ಮುಕುಂದ, ಅನುಷ್ಠಾನಾಧಿಕಾರಿ ಕೆ.ಪಿ.ಆನಂದ್ ಮತ್ತಿತರರು ಹಾಜರಿದ್ದರು.

ನಿರಂತರ ರಂಗ ಉತ್ಸವಕ್ಕೆ ತೆರೆ



ಮೈಸೂರು, ಜ.28(ಜಿಎ)-ಸರ್ಕಾರದ ಅನುದಾನದಲ್ಲಿ ನಾಟಕಗಳು ಮೂಡಿಬರುವ ಬದಲು ಸ್ವಾಯತ್ತ ರಂಗ ಭೂಮಿ ಸ್ಥಾಪನೆಯಾದರೆ, ಕಲಾವಿದ ಸೇರಿದಂತೆ ಇಡೀ ತಂಡಕ್ಕೆ ಅನುಕೂಲವಾಗುವುದರ ಜೊತೆಗೆ ನಾಟಕಗಳನ್ನು ಕಟ್ಟಬಹುದು ಎಂದು ಕವಿ ಆರಿಫ್ ರಾಜಾ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದ ಆವರಣದ ಕಿರುರಂಗ ಮಂದಿರದ ಆವರಣದಲ್ಲಿ ನಿರಂತರ ಫೌಂಡೇಷನ್ ವತಿಯಿಂದ ನಡೆಯುತ್ತಿರುವ ನಿರಂತರ ರಂಗ ಉತ್ಸವದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ನಿರಂತರ ರಂಗ ಉತ್ಸವ ಮತ್ತು ತಂಡಕ್ಕೆ ಅಭಿನಂದಿಸಿದ ಅವರು, ಲಂಕೇಶ್ ಬರೆದಿರುವ 'ಶ್ರೇಷ್ಠ ಸಂಭಾಷಣೆಕಾರ ಮಾತ್ರ ಶ್ರೇಷ್ಠ ನಾಟಕಕಾರ ಆಗುತ್ತಾನೆ ಎಂಬುವುದು ಭ್ರಮೆ' ಎಂದು ಹೇಳಿರುವಂತೆ ಬೌದ್ಧಿಕ ಅಹಂ ಕಾಣುತ್ತದೆ. ಹೊಸತನ ತಲೆಮಾರು ಆದರಿಂದ ಹೊರತಾಗಿ ಹೊಸ ಲಯ ಕಂಡುಕೊಳ್ಳುತ್ತಿದೆ. ಸರ್ಕಾರದ ಅನುದಾನದಲ್ಲಿ ನಡೆಸುವ ರಂಗ ಸಂಸ್ಥೆಗಳು ಕೆಲವೊಮ್ಮೆ ನಿಜ ಕನಸುಗಳು, ಮತ್ತೊಮ್ಮೆ ಮಲೆಗಳಲ್ಲಿ ಮದುಮಗಳು ,ಪರ್ವ ದಂತಹ ನಾಟಕಗಳು ಪ್ರದರ್ಶನವಾಗುತ್ತವೆ. ಆದರಿಂದ ಒಂದು ಸ್ವಾಯುತ್ತ ರಂಗ ಭೂಮಿ ನಿರ್ಮಾಣವಾದರೆ, ಕಲಾವಿದನಿಂದ ಪ್ರಾರಂಭವಾಗಿ ನಂತರ ಇಡೀ ತಂಡದವರ ಜೊತೆಗೆ ನಾಟಕವನ್ನು ಕಟ್ಟಬಹುದು. ಈ ಹಿನ್ನೆಲೆಯಲ್ಲಿ ಆರ್ಥಿಕ ಭ್ರಷ್ಟಾಚಾರಕ್ಕೆ ಕ್ಷಮೆ ಇದೆ ಆದರೆ ಬೌದ್ಧಿಕ ಭ್ರಷ್ಟಾಚಾರಕ್ಕೆ ಕ್ಷಮೆ ಇಲ್ಲ ಎಂದರು.

ಬೆಂಗಳೂರು ಬಿಬಿಎಂಪಿ ವಿಶೇಷ ಆಯುಕ್ತ ಹಾಗೂ ಮುಖ್ಯಮಂತ್ರಿಗಳ ಕಾರ್ಯದರ್ಶಿಯೂ ಆದ ಜಯರಾಂ ರಾಯಪುರ ಮಾತನಾಡಿ, ನಿರಂತರ ರಂಗೋತ್ಸವ 14 ವರ್ಷಗಳಿಂದ ಯಶಸ್ವಿ ಪ್ರದರ್ಶನ ನೀಡುತ್ತಿದ್ದೆ. ನನ್ನ ವಾರಸುದಾರ ನಾಟಕವನ್ನು ಕೂಡ ಇಲ್ಲಿ ಪ್ರದರ್ಶಿಸಲಾಗಿದೆ ಎಂದ ಅವರು, ಯಕ್ಷಗಾನ ಕೇವಲ ಕರಾವಳಿ ಕಲೆಯಲ್ಲ ಇದು ಕರ್ನಾಟಕದ ಕಲೆ. ಇದರಿಂದಾಗಿ ಪರಂಪರಿಕೆ ಯಕ್ಷಗಾನ ಕಲೆಯನ್ನು ಉಳಿಸಿದಂತಾಗುತ್ತದೆ. ಆದರಿಂದ ಶಾಲೆಗಳಲ್ಲಿ ಮೂಡಲಪಾಯ ಯಕ್ಷಗಾನವನ್ನು ತರಬೇತಿ ನೀಡುವುದಾದರೆ, ಅದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆ ಮಾಡುತ್ತೇನೆ ಎಂದರು.

ನಿರಂತರ ನಮ್ಮ ತಂಡವಾಗಿದ್ದು, ಹೀಗೆ ನಿರಂತರವಾಗಿ ಕೆಲಸ ಮಾಡಲಿ ಎಂದು ಹಿರಿಯ ರಂಗಕರ್ಮಿ ರಾಮೇಶ್ವರಿ ಹಾರೈಸಿದರು.

ವೇದಿಕೆ ಕಾರ್ಯಕ್ರಮದ ನಂತರ ಬೆಂಗಳೂರಿನ ಜಂಗಮ ಕಲೆಕ್ಟಿವ್ ತಂಡ ಕೆ.ಪಿ.ಲಕ್ಷ್ಮಣ ಅವರ ನಿರ್ದೇಶನದಲ್ಲಿ ದಕ್ಲಕಥಾ ದೇವಿಕಾವ್ಯ ನಾಟಕ ಪ್ರದರ್ಶಿಸಿದರು.

'ಹೊಸ ಸಾಮಾಜಿಕ ಕ್ರಮದ ಕಡೆಗೆ' ವಾಕಥಾನ್



ಮೈಸೂರು, ಜ.29(ಎಸ್‌ಬಿಡಿ)- ಧಾನ್ ಫೌಂಡೇಷನ್ ಮೈಸೂರು ಪ್ರಾದೇಶಿಕ ಕ್ಷೇತ್ರದ ವತಿಯಿಂದ 'ಹೊಸ ಸಾಮಾಜಿಕ ಕ್ರಮದ ಕಡೆಗೆ' ಶೀರ್ಷಿಕೆಯಡಿ ಶನಿವಾರ ವಾಕಥಾನ್ ಆಯೋಜಿಸಲಾಗಿತ್ತು.

ನಗರದ ಕೋಟೆ ಆಂಜನೇಯ ದೇವಾಲಯ ಮುಂಭಾಗದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕಿ(ಎಎಸ್‌ಪಿ) ಬಿ.ಎನ್.ನಂದಿನಿ ಚಾಲನೆ ನೀಡಿದರು. ಸಾಹಿತಿ ಡಾ.ಶ್ವೇತಾ ಮಡಪ್ಪಾಡಿ, ನವಾಯಿ ಕೇರ್ ಸೆಂಟರ್‌ನ ಡಾ.ರೇಣುಕಾ ಪ್ರಸಾದ್, ಎಲ್‌ಐಸಿ ಶಾಖಾ ವ್ಯವಸ್ಥಾಪಕಿ ಜ್ಯೋತಿ, ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ್, ಇನ್ನಿತರ ಸಂಸ್ಥೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಬಳಿಕ ಪೂಜಾ ಕುಣಿತ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಕಲಾತಂಡಗಳೊಂದಿಗೆ ಸುಮಾರು ಎರಡೂವರೆ ಕಿ.ಮೀ. ಕ್ರಮಿಸಿದ ವಾಕಥಾನ್, ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಮುಕ್ತಾಯವಾಯಿತು.

ಅಲ್ಲಿನ ಶ್ರೀ ಕಾಳಿಂಗರಾವ್ ಮಂಟಪದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಹಿರಿಯ ವಕೀಲ ಓ.ಶಾಮ್ ಭಟ್ ಮಾತನಾಡಿ, ಮಹಿಳಾ ಸಬಲೀಕರಣ ಮತ್ತು ಬಡತನ ನಿವಾರಣೆ ನಿಟ್ಟಿನಲ್ಲಿ ಧಾನ್ ಫೌಂಡೇಷನ್‌ನ ಪರಿಶ್ರಮವನ್ನು ಶ್ಲಾಘಿಸಿದರು. ಸಾಹಿತಿ ಶ್ವೇತಾ ಮಡಪ್ಪಾಡಿ ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಗಮನ ಹರಿಸುವ ಅಗತ್ಯವಿದೆ ಎಂದು ಮನವಿ ಮಾಡಿದರು.

ರುಡ್‌ಸೆಟ್‌ನ ಆನಂದ್ ನಾಯಕ್, ಕೃಷಿ ಇಲಾಖೆಯ ಡಾ.ಯೋಗೀಶ್, ಅಗರ್ವಾಲ್ ಕಣ್ಣಿನ ಆಸ್ಪತ್ರೆಯ ಡಾ.ಕವಿತಾ ಅಗರ್ವಾಲ್, ಫೌಂಡೇಷನ್‌ನ ಪ್ರಾದೇಶಿಕ ಸಂಯೋಜಕ ಶಂಕರ್ ಪ್ರಸಾದ್, ನಾರಾಯಣ ಹೆಗ್ಡೆ, ಮಂಜುನಾಥ, ಹುಸೇನ್, ಪ್ರಭು ಶಂಕರ್, ಭಾಗ್ಯ, ಜಯಲಕ್ಷ್ಮಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ 43 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಕ್ಕರೆ ನಾಡು ದಳಪತಿಗಳ ಭದ್ರಕೋಟೆಯಲ್ಲಿ ನಾನಾ ಬಿರುಕು

ಮೇಲುಕೋಟೆ ಹೊರತುಪಡಿಸಿ ಉಳಿದ ಕ್ಷೇತ್ರಗಳಲ್ಲಿ ಬಂಡಾಯ



ಶಿವರಾಮೇಗೌಡ ಮರಿತಿಬ್ಬೇಗೌಡ ದೇವರಾಜು ಡಾ.ಕೃಷ್ಣ ರಾಧಾಕೃಷ್ಣ ಸ್ವಾಮಿ ವೆಂಕಟೇಶ್ ರವಿ ಸಂತೋಷ್ ಅಶೋಕ್

ಎಂ.ಕೆ.ಮೋಹನ್‌ರಾಜ್

ಮಂಡ್ಯ, ಜ.29– ಕಳೆದ 2018ರ ಚುನಾವಣೆಯಲ್ಲಿ ಜಿಲ್ಲೆಯ ಏಳೂ ಕ್ಷೇತ್ರಗಳನ್ನು ಗೆದ್ದು ಬೀಗಿದ್ದ ಜೆಡಿಎಸ್‌ಗೆ ಈ ಬಾರಿ ಬಂಡಾಯದ ಬೇಗುದಿ ಹೆಚ್ಚಾಗುತ್ತಿದ್ದು, ಮೇಲುಕೋಟೆ ವಿಧಾನಸಭಾ ಕ್ಷೇತ್ರ ಹೊರತುಪಡಿಸಿ ಉಳಿದ 6 ಕ್ಷೇತ್ರದಲ್ಲಿ 'ದಳ' ಕೋಟೆಯಲ್ಲಿ ಬಿರುಕು ಕಾಣಿಸಿಕೊಂಡಿದೆ.

ಕಳೆದ 2 ದಶಕಗಳಿಂದ ಒಗ್ಗಟ್ಟಿನ ಹೋರಾಟದಿಂದ ಜೆಡಿಎಸ್ ಪಕ್ಷ ಸ್ಥಳೀಯ ಸಂಸ್ಥೆಯಿಂದ ಹಿಡಿದು ಲೋಕಸಭೆವರೆಗೆ ಜಿಲ್ಲೆಯಲ್ಲಿ ಪಾರುಪತ್ಯ ಮೆರೆಯುತ್ತಾ ಬಂದಿತ್ತು. ಆದರೆ ಈ ಬಾರಿ ಪ್ರತಿ ಕ್ಷೇತ್ರದಲ್ಲೂ ಬಂಡಾಯ ಸದ್ದು ಮಾಡುತ್ತಿದ್ದು, ಇದು ಸಕ್ಕರೆ ನಾಡಲ್ಲಿ ದಳಪತಿಗಳ ಬುಡ ಅಲುಗಾಡುವಂತೆ ಮಾಡಿದೆ. ಇದನ್ನು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಗೆ ನಿವಾರಿಸುತ್ತಾರೆ ಎಂಬುದೇ ಯಕ್ಷಪ್ರಶ್ನೆಯಾಗಿದೆ.

ಜೆಡಿಎಸ್‌ಗೆ ಬಂಡಾಯದ ರಾಜಧಾನಿಯಾದ ಮಂಡ್ಯ: ಮಂಡ್ಯದಲ್ಲಿ ಕಳೆದ 10 ವರ್ಷಗಳಿಂದ ಬೂದಿ ಮುಚ್ಚಿದ ಕೆಂಡದಂತಿದ್ದ ಜೆಡಿಎಸ್ ಬಂಡಾಯ ಈ ಬಾರಿ ಪ್ರಬಲವಾಗಿ ಸ್ಫೋಟಗೊಂಡಿದೆ. ಹಾಲಿ ಶಾಸಕ ಎಂ.ಶ್ರೀನಿವಾಸ್ ಅವರಿಗೆ 2013ರಲ್ಲಿ ಟಿಕೆಟ್ ನೀಡುವಾಗ ಮಾಜಿ ಸಚಿವ ಎಸ್.ಡಿ.ಜಯರಾಂ ಪುತ್ರ ಅಶೋಕ್ ಜಯರಾಂ ಬಂಡಾಯ ಸಾರಿದ್ದರು. ಆದರೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಅವರನ್ನು ಸಂಬಾಳಿಸಿ ಮುಂದೆ ಟಿಕೆಟ್ ನೀಡುವುದಾಗಿ ಭರವಸೆ ನೀಡಿದ್ದರು. ಆದರೆ ಆ ಚುನಾವಣೆಯಲ್ಲಿ ಎಂ.ಶ್ರೀನಿವಾಸ್‌ಗೆ ಸೋಲಾಗಿತ್ತು. ಬಳಿಕ 2018ರಲ್ಲಿ ಹಲವು ಮಂದಿ ಜೆಡಿಎಸ್ ಟಿಕೆಟ್‌ಗೆ ಪೈಪೋಟಿ ನಡೆಸಿದಾಗ ಮತ್ತೆ ದಳಪತಿಗಳು ಎಂ.ಶ್ರೀನಿವಾಸ್‌ಗೆ ಮಣೆ ಹಾಕಿದ್ದರು. ಕುಮಾರಸ್ವಾಮಿ ಅಲೆಯಲ್ಲಿ ಶ್ರೀನಿವಾಸ್ ಗೆದ್ದು ಬೀಗಿದ್ದರು. ಇದೀಗ ಅವರಿಗೆ ಮತ್ತೆ ಜೆಡಿಎಸ್ ಸತತ 5ನೇ ಬಾರಿಗೆ ಟಿಕೆಟ್ ಘೋಷಣೆ ಮಾಡಲಾಗಿದೆ. ಆದರೆ ಈ ಬಾರಿ ಜೆಡಿಎಸ್ ಪಕ್ಷಕ್ಕೆ ಮಂಡ್ಯ ವಿಧಾನಸಭಾ ಕ್ಷೇತ್ರ ಬಂಡಾಯದ ರಾಜಧಾನಿಯಾದಂತೆ ಗೋಚರವಾಗುತ್ತಿದೆ. ಟಿಕೆಟ್ ದೊರೆಯುವುದಿಲ್ಲ ಎಂಬ ಮಾಹಿತಿ ಅರಿತ ಮಾಜಿ ಸಚಿವ ಎಸ್.ಡಿ.ಜಯರಾಂ ಪುತ್ರ ಅಶೋಕ್ ಜಯರಾಂ ಬಿಜೆಪಿಗೆ ಸೇರ್ಪಡೆಯಾದರೆ, 2018ರ ವಿಧಾನಸಭಾ ಚುನಾವಣೆಯಲ್ಲಿ ಎಂ.ಶ್ರೀನಿವಾಸ್ ಗೆಲುವಿಗೆ ದೊಡ್ಡ ಶಕ್ತಿಯಾಗಿದ್ದ ಕೀಲಾರ ರಾಧಾಕೃಷ್ಣ ಪಕ್ಷ ತೊರೆದಿದ್ದಾರೆ. ಸದ್ಯ ಕಾಂಗ್ರೆಸ್‌ನಲ್ಲಿ ಟಿಕೆಟ್ ಆಕಾಂಕ್ಷಿಗಳಲ್ಲಿ ಅವರು ಮುಂಚೂಣಿಯಲ್ಲಿದ್ದಾರೆ. ಇನ್ನು ಕಳೆದ ವಿಧಾನಸಭೆ ಹಾಗೂ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದ ಡಾ.ಕೃಷ್ಣ ಜೆಡಿಎಸ್ ತೊರೆದು ಇದೀಗ ಕಾಂಗ್ರೆಸ್‌ನ ಪ್ರಚಾರ ಸಮಿತಿ ಅಧ್ಯಕ್ಷರಾಗಿದ್ದಾರೆ.

ಇವರ ಜೊತೆಗೆ ಈ ಬಾರಿ ಟಿಕೆಟ್ ಆಕಾಂಕ್ಷಿಗಳಾದ ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು, ಕಳೆದ 2 ವರ್ಷಗಳಿಂದ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರೆ, ಮತ್ತೋರ್ವ ಆಕಾಂಕ್ಷಿ ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ ಸಹ ಟಿಕೆಟ್‌ಗಾಗಿ ಭಾರೀ ಪ್ರಯತ್ನ ಮಾಡಿದ್ದರು. ಇದೀಗ ಎಂ.ಶ್ರೀನಿವಾಸ್ ಅವರಿಗೆ ಮತ್ತೆ ಟಿಕೆಟ್ ಘೋಷಿಸಿದ್ದು, ರಾಮಚಂದ್ರು, ವಿಜಯಾನಂದ ಬಹಿರಂಗವಾಗಿ ಅಸಮಾಧಾನ ಹೊರ ಹಾಕದಿದ್ದರೂ, ಒಳಗೊಳಗೆ ವರಿಷ್ಠರ ಮೇಲೆ ಮುನಿಸಿರುವುದು ಜೆಡಿಎಸ್ ನಾಯಕರ ತಲೆ ನೋವಿಗೆ ಕಾರಣವಾಗಿದೆ.

ನಾಗಮಂಗಲದಲ್ಲಿ ಸಕ್ರಿಯವಾಗುತ್ತಿರುವ ಶಿವರಾಮೇಗೌಡ: ಕಳೆದ 2018ರ ಲೋಕಸಭಾ ಉಪಚುನಾವಣೆಯಲ್ಲಿ ಜೆಡಿಎಸ್‌ನಿಂದ ಜಯಭೇರಿ ಬಾರಿಸಿದ್ದ ಎಲ್.ಆರ್.ಶಿವರಾಮೇಗೌಡಗೆ 2019ರ ಲೋಕಸಭಾ ಚುನಾವಣೆ ಟಿಕೆಟ್ ಮಿಸ್ ಆಗಿತ್ತು. 2023ಕ್ಕೆ ನಾನೇ ನಾಗಮಂಗಲ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಂದು ಸ್ವಯಂ ಘೋಷಿಸಿಕೊಂಡು ಪ್ರಚಾರಕ್ಕೆ ಇಳಿದಿದ್ದ ಶಿವರಾಮೇಗೌಡರನ್ನು ಜೆಡಿಎಸ್ ಪಕ್ಷ ಉಚ್ಛಾಟನೆ ಮಾಡಿತ್ತು. ಬಳಿಕ ಕ್ಷೇತ್ರದಲ್ಲಿ ಸಕ್ರಿಯವಾದ ಶಿವರಾಮೇಗೌಡ ಪಕ್ಷೇತರರಾಗಿ ಚುನಾವಣೆಗೆ ಸ್ಪರ್ಧಿಸುವುದಾಗಿ ಘೋಷಿಸಿ, ಓಡಾಡುತ್ತಿದ್ದಾರೆ. ಇದು ನಾಗಮಂಗಲದಲ್ಲಿ ಜೆಡಿಎಸ್‌ಗೆ ನುಂಗಲಾರದ ತುಪ್ಪದಂತೆ ಪರಿಣಮಿಸಿದ್ದು, ಕೇವಲ ಶಿವರಾಮೇಗೌಡರ ಓಡಾಟ ಮಾತ್ರವಲ್ಲದೇ, ವಿಧಾನಪರಿಷತ್ ಮಾಜಿ ಸದಸ್ಯ ಎನ್.ಅಪ್ಪಾಜಿಗೌಡ ಸಹ ಜೆಡಿಎಸ್ ವಿರುದ್ಧ ಅಸಮಾಧಾನಗೊಂಡು ಅನೇಕ ಬಾರಿ ತಮ್ಮ ಅಸಮಾಧಾನ ಹೊರ ಹಾಕಿದ್ದಾರೆ. ಮತ್ತೊಂದೆಡೆ 2018ರ ಚುನಾವಣೆಯಲ್ಲಿ ಜೆಡಿಎಸ್‌ನ ಸುರೇಶ್‌ಗೌಡ ಗೆಲುವಿಗೆ ಟೊಂಕ ಕಟ್ಟಿ ನಿಂತಿದ್ದ ಉದ್ಯಮಿ ಫೈಟರ್ ರವಿ ಸಹ ಇದೀಗ ಬಿಜೆಪಿ ಸೇರಿ ಅಭ್ಯರ್ಥಿಯಾಗುವ ಮುನ್ಸೂಚನೆ ನೀಡಿದ್ದಾರೆ. ಇದು ಜೆಡಿಎಸ್‌ಗೆ ನಾಗ ಮಂಗಲದಲ್ಲಿ ಇನ್ನಿಲದ ಬಂಡಾಯಕ್ಕೆ ಕಾರಣವಾಗಿದೆ.

ಶ್ರೀರಂಗಪಟ್ಟಣದಲ್ಲಿ ಪಕ್ಷೇತರ ಸ್ಪರ್ಧೆಗೆ ಮುಂದಾದ ತಗ್ಗಹಳ್ಳಿ ವೆಂಕಟೇಶ್: ಜೆಡಿಎಸ್ ಪಕ್ಷಕ್ಕೆ ಶ್ರೀರಂಗಪಟ್ಟಣದಲ್ಲೂ ಬಂಡಾಯದ ಬಿಸಿ ಗೋಚರವಾಗಿದ್ದು, ಜಿಪಂ ಮಾಜಿ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್ ಈ ಬಾರಿ ಪಕ್ಷೇತರವಾಗಿ ಕಣಕ್ಕಿಳಿಯುವುದಾಗಿ ಘೋಷಿಸಿದ್ದಾರೆ. ಜೆಡಿಎಸ್ ಹಿರಿಯ ನಾಯಕರಾಗಿರುವ ವೆಂಕಟೇಶ್ ಶ್ರೀರಂಗಪಟ್ಟಣ ದಿಂದ ಹಲವು ಬಾರಿ ಟಿಕೆಟ್‌ಗೆ ಪ್ರಯತ್ನಿಸಿ, ಸುಮ್ಮನಾಗಿದ್ದರು. ಆದರೆ ಈ ಬಾರಿ ನನ್ನ ಸ್ಪರ್ಧೆ ಖಚಿತ ಎಂದು ಘೋಷಿಸಿರುವ ಅವರು, ಈಗಾಗಲೇ ಪ್ರಚಾರ ಆರಂಭಿಸಿದ್ದಾರೆ. ಶ್ರೀರಂಗಪಟ್ಟಣ ಕ್ಷೇತ್ರದ ಕೊತ್ತತ್ತಿ 1 ಮತ್ತು 2ನೇ ಸರ್ಕಲ್‌ನಲ್ಲಿ ತಮ್ಮದೇ ಆದ ಬೆಂಬಲಿಗರನ್ನು ಹೊಂದಿರುವ ಅವರು, ಹಾಲಿ ಶಾಸಕ ರವೀಂದ್ರ ಶ್ರೀಕಂಠಯ್ಯ ವಿರುದ್ಧ ಬಂಡಾಯ ಸಾರಿದ್ದು, ಇದು ಜೆಡಿಎಸ್‌ಗೆ ನುಂಗಲಾರದ ತುತ್ತಾಗಿದೆ.

ಬಿಜೆಪಿ ಅಭ್ಯರ್ಥಿಯಾದ ಮದ್ದೂರಿನ ಪ್ರಭಾವಿ ಜೆಡಿಎಸ್ ಮುಖಂಡ: ಮದ್ದೂರಿನ ಹಾಲಿ ಜೆಡಿಎಸ್ ಶಾಸಕ ಡಿ.ಸಿ.ತಮ್ಮಣ್ಣ ಅವರ ಬಹುಕಾಲದ ಆಪ್ತ, ಮನ್‌ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ ಹಲವು ವರ್ಷಗಳ ಹಿಂದೆಯೇ ಜೆಡಿಎಸ್ ತೊರೆದಿದ್ದು, ಈ ಬಾರಿ ಚುನಾವಣೆಯಲ್ಲಿ ಮದ್ದೂರಿ ನಿಂದ ಬಿಜೆಪಿ ಅಭ್ಯರ್ಥಿಯಾಗುವುದು ಬಹುತೇಕ ಖಚಿತ ಎನ್ನಲಾಗುತ್ತಿದೆ. ಇದು ಜೆಡಿಎಸ್‌ಗೆ ದೊಡ್ಡ ನಷ್ಟ ಎಂದು ವಿಶ್ಲೇಷಿಸಲಾಗುತ್ತಿದೆ. ಸ್ವಾಮಿ ಪತ್ನಿ ನಾಗರತ್ನಸ್ವಾಮಿ ಅವರನ್ನು ಕ್ಷೇತ್ರದ ಶಾಸಕ ಡಿ.ಸಿ.ತಮ್ಮಣ್ಣ ಜಿಪಂ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವಲ್ಲಿ ಯಶಸ್ವಿಯಾಗಿದ್ದರು. ಇದೀಗ ತಮ್ಮ ರಾಜಕೀಯ ಗುರು ತಮ್ಮಣ್ಣ ವಿರುದ್ಧ ಬಂಡಾಯ ಸಾರಿ ಜೆಡಿಎಸ್ ತೊರೆದು ಬಿಜೆಪಿ ಸೇರಿರುವ ಸ್ವಾಮಿ ಜೆಡಿಎಸ್‌ಗೆ ಟಕ್ಕರ್ ಕೊಟ್ಟಿದ್ದು, ಇದು ಪಕ್ಷಕ್ಕೆ ಹಿನ್ನಡೆಯಾಗುವ ಸಾಧ್ಯತೆ ಇದೆ.

ಜೆಡಿಎಸ್‌ನಿಂದ ಅಂತರ ಕಾಯ್ದುಕೊಂಡ ಮರಿತಿಬ್ಬೇಗೌಡ: ವಿಧಾನ ಪರಿಷತ್ ಸದಸ್ಯ, ಮಳವಳ್ಳಿ ಭಾಗದ ಪ್ರಭಾವಿ ನಾಯಕ ಮರಿತಿಬ್ಬೇಗೌಡ ಜೆಡಿಎಸ್‌ನಿಂದ ಒಂದು ಕಾಲು ಹೊರ ಹಾಕಿದ್ದಾರೆ. ಪಕ್ಷದ ನಾಯಕರ ವಿರುದ್ಧ ಮುನಿಸಿಕೊಂಡಿರುವ ಅವರು ಕಳೆದ ಪರಿಷತ್ ಚುನಾವಣೆಯಲ್ಲಿ ಬಹಿರಂಗವಾಗಿ ಕಾಂಗ್ರೆಸ್ ಅಭ್ಯರ್ಥಿ ಬೆಂಬಲಿಸಿ, ಕಾಂಗ್ರೆಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಈಗಾಗಲೇ ಕಾಂಗ್ರೆಸ್ ಪರ ಮುಖ ಮಾಡಿರುವ ಅವರು, ಈ ಬಾರಿಯ ಚುನಾವಣೆಯಲ್ಲೂ ಜೆಡಿಎಸ್‌ಗೆ ಕೈಕೊಡುವ ಸಾಧ್ಯತೆ ಇದ್ದು, ಇದು ಮಳವಳ್ಳಿಯಲ್ಲಿ ಜೆಡಿಎಸ್‌ಗೆ ಅತಿದೊಡ್ಡ ನಷ್ಟವಾಗಲಿದೆ. ಹಿರಿಯ ನಾಯಕನ ಬಂಡಾಯದ ನಡುವೆ ಮಳವಳ್ಳಿಯಲ್ಲಿ ಜೆಡಿಎಸ್ ಯಾವ ರೀತಿ ಚುನಾವಣೆ ಎದುರಿಸುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

ಕೆ.ಆರ್.ಪೇಟೆಯಲ್ಲಿ ಮನೆಯೊಂದು 3 ಬಾಗಿಲು: ಮಂಡ್ಯದಂತೆ ಕೆ.ಆರ್.ಪೇಟೆಯಲ್ಲೂ ಬಂಡಾಯದ ಬಾವುಟ ಬೂದಿ ಮುಚ್ಚಿದ ಕೆಂಡದಂತಿತ್ತು. ಹೆಚ್.ಟಿ.ಮಂಜು ಅವರನ್ನು ಅಭ್ಯರ್ಥಿ ಎಂದು ಘೋಷಿಸಿದ ಬಳಿಕ ಬಂಡಾಯ ಹೆಚ್ಚಾಗಿದ್ದು, ಪ್ರಭಾವಿ ಮುಖಂಡರಾದ ಬಿ.ಎಲ್.ದೇವರಾಜು, ಬಸ್ ಸಂತೋಷ್ ಕುಮಾರ್ ವರಿಷ್ಠರ ತೀರ್ಮಾನದ ವಿರುದ್ಧ ತಿರುಗಿ ಬಿದ್ದಿದ್ದಾರೆ. ಜೊತೆಗೆ ಟಿಕೆಟ್ ಕೈ ತಪ್ಪಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿ, ಬಂಡಾಯದ ಸಭೆ ನಡೆಸಿ, ಪಕ್ಷದ ನಾಯಕರ ವಿರುದ್ಧವೇ ಆಕ್ರೋಶ ಹೊರ ಹಾಕಿದ್ದಾರೆ. ಸದ್ಯ ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಮಾತ್ರ ಜೆಡಿಎಸ್‌ಗೆ ಯಾವುದೇ ಬಂಡಾಯ ಕಾಣುತ್ತಿಲ್ಲ. ಆದರೆ ಈ ಬಂಡಾಯವನ್ನು ಹೆಚ್.ಡಿ.ಕುಮಾರಸ್ವಾಮಿ ಹೇಗೆ ಸರಿಪಡಿಸಿ, 2023ರ ಚುನಾವಣೆಗೆ ಪಕ್ಷವನ್ನು ಮಂಡ್ಯದಲ್ಲಿ ಸಜ್ಜುಗೊಳಿಸುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

ಜಾಯಿಂಟ್ ವ್ಹೀಲ್ ರೇಡ್‌ನಲ್ಲಿ ಸಿಲುಕಿ ಬಾಲಕಿ ತಲೆಗೆ ಗಾಯ

ಚರ್ಮದ ಸಮೇತ ತಲೆಗೂದಲು ಕಿತ್ತು ಬಂದ ಘಟನೆ, ಆಸ್ಪತ್ರೆಗೆ ದಾಖಲು

ಶ್ರೀರಂಗಪಟ್ಟಣ, ಜ.29– ರಥಸಪ್ತಮಿ ಅಂಗವಾಗಿ ಪಟ್ಟಣದ ಶ್ರೀರಂಗನಾಥ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಮಕ್ಕಳ ಮನರಂಜನೆಗಾಗಿ ಹಾಕಲಾಗಿದ್ದ ಜಾಯಿಂಟ್ ವ್ಹೀಲ್ ರೇಡ್‌ನಲ್ಲಿ ಭಾಗವಹಿಸಿದ್ದ 14 ವರ್ಷದ ಬಾಲಕಿಯೋರ್ವಳ ಕೂದಲು ಸಿಲುಕಿ ತಲೆ ಚರ್ಮದ ಸಮೇತ ಕೂದಲು ಕಿತ್ತು ಬಂದು ತೀವ್ರ ಸ್ವರೂಪದ ಗಾಯಗಳಾಗಿರುವ ಘಟನೆ ಶನಿವಾರ ರಾತ್ರಿ ಸಂಭವಿಸಿದೆ.

ಬೆಂಗಳೂರಿನ ಕೃಷ್ಣ, ಮಂಜುಳಾ ದಂಪತಿ ಪುತ್ರಿ ಶ್ರೀವಿದ್ಯಾ(14) ಎಂಬಾಕೆಯೇ ಅವಘಡದಲ್ಲಿ ಸಿಲುಕಿ ಗಾಯಗೊಂಡ ಬಾಲಕಿಯಾಗಿದ್ದು, ಈಕೆಯ ತಲೆ ಬೋಳಾಗಿದೆ. ಈಕೆ ಶ್ರೀರಂಗಪಟ್ಟಣದ ದೊಡ್ಡಮ್ಮನವರ ಕಾರ್ಯಕ್ಕೆ ಬಂದಿದ್ದಳು ಎನ್ನಲಾಗಿದೆ.

ಶನಿವಾರ ರಾತ್ರಿ ಶ್ರೀರಂಗನಾಥಸ್ವಾಮಿ ದರ್ಶನ ಪಡೆದು ಬರುವ ವೇಳೆ ಆಟದಲ್ಲಿ ಭಾಗಿಯಾಗಿದ್ದಾಗ ಈ ದುರಂತ ನಡೆದಿದೆ. ಶ್ರೀವಿದ್ಯಾ ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದು, ಮಣಿಪಾಲ್ (ಕೊಲಂಬಿಯಾ) ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ .

ಗುತ್ತಿಗೆದಾರರು ಜಾಯಿಂಟ್ ವ್ಹೀಲ್ ರೇಡ್ ಸ್ಥಳದಲ್ಲಿ ಯಾವುದೇ ಸುರಕ್ಷಿತ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸದೇ ಇರುವುದು ಮತ್ತು ಆಟದ ಸಂದರ್ಭ ನಿರ್ಲಕ್ಷ್ಯ ತೋರಿರುವುದೇ ಅವಘಡಕ್ಕೆ ಕಾರಣ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಈ ಸಂಬಂಧ ಶ್ರೀರಂಗಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

> ರಥಸಪ್ತಮಿಯಲ್ಲಿ ಈ ರೀತಿಯ ಅವಘಡ ಸಂಭವಿಸಿರುವುದು ದುಃಖದ ಸಂಗತಿ. ತಕ್ಷಣವೇ ಆ ಬಾಲಕಿ ದಾಖಲಾಗಿರುವ ಆಸ್ಪತ್ರೆಗೆ ಭೇಟಿ ನೀಡಿ ಸರ್ಕಾರದಿಂದ ಪರಿಹಾರ ನೀಡಲಾಗುವುದು. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.
> – ಗೋಪಾಲಕೃಷ್ಣ, ಜಿಲ್ಲಾಧಿಕಾರಿ.

> ಪಟ್ಟಣದಲ್ಲಿ ವರ್ಷಕ್ಕೊಮ್ಮೆ ನಡೆಯುವ ರಥಸಪ್ತಮಿಯಲ್ಲಿ ಸಾವಿರಾರು ಭಕ್ತರು ಸೇರುತ್ತಾರೆ. ಇಂತಹ ಸಂದರ್ಭ ದೇವಸ್ಥಾನದ ಆಡಳಿತಾಧಿಕಾರಿಗಳು ಎಲ್ಲಾ ಇಲಾಖೆ ಅಧಿಕಾರಿಗಳ ಜೊತೆ ಪೂರ್ವಭಾವಿಯಾಗಿ ಸಭೆ ನಡೆಸಿ ಕೆಇಬಿ, ಪೊಲೀಸ್, ಅಗ್ನಿಶಾಮಕ ದಳ ಸೇರಿದಂತೆ ಸುರಕ್ಷತೆಗೆ ಒತ್ತು ನೀಡಬೇಕಿತ್ತು. ಆದರೆ ರಥಸಪ್ತಮಿಯಲ್ಲಿ ಹಾಗೆ ಆಗಿಲ್ಲ. ಆದ್ದರಿಂದ ಈ ರೀತಿ ಅವಘಡ ಸಂಭವಿಸಿದೆ. ತಕ್ಷಣ ಅಪಘಾತಕ್ಕೀಡಾದ ಬಾಲಕಿ ಆರೋಗ್ಯ ವಿಚಾರಿಸಿ ಸಂಬಂಧಪಟ್ಟವರಿಗೆ ನೋಟೀಸ್ ನೀಡಲಾಗುವುದು.
> – ಶ್ವೇತಾ ಎನ್. ರವೀಂದ್ರ, ತಹಸೀಲ್ದಾರ್.

ಸಂಸದೆ ಸುಮಲತಾರನ್ನು ಕಾಂಗ್ರೆಸ್‌ಗೆ ಕರೆ ತರಲು ಒತ್ತಾಯ



ಮಂಡ್ಯ, ಜ.29– ಸಂಸದೆ ಸುಮಲತಾ ಅಂಬರೀಷ್ ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಕರೆ ತಂದರೆ ಜಿಲ್ಲೆಯಲ್ಲಿ ಪಕ್ಷ ಮತ್ತಷ್ಟು ಬಲವರ್ಧನೆಯಾಗಲಿದ್ದು, ಈ ನಿಟ್ಟಿನಲ್ಲಿ ಅವರನ್ನು ಕಾಂಗ್ರೆಸ್‌ಗೆ ಬರಮಾಡಿಕೊಳ್ಳಬೇಕೆಂದು ಕೆಪಿಸಿಸಿ ಸದಸ್ಯ ಎಲ್.ಡಿ.ರವಿ ಒತ್ತಾಯಿಸಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಜಿಲ್ಲೆಯಲ್ಲಿ ಕಾಂಗ್ರೆಸ್ ಬಲಿಷ್ಠವಾಗಲು ದಿ.ಅಂಬರೀಷ್ ಕೊಡುಗೆ ಸಾಕಷ್ಟಿದೆ ಅವರ ಪತ್ನಿ ಸುಮಲತಾ ಕಳೆದ ಲೋಕಸಭಾ ಚುನಾವಣೆಯಲ್ಲಿ ಪ್ರಬಲ ಅಭ್ಯರ್ಥಿ ವಿರುದ್ಧ ಪಕ್ಷೇತರವಾಗಿ ನಿಂತು ಗೆದ್ದು ತಮ್ಮ ವರ್ಚಸ್ಸನ್ನು ವೃದ್ಧಿಸಿಕೊಂಡಿದ್ದಾರೆ. ಜಿಲ್ಲೆಯ ಕಾಂಗ್ರೆಸ್ ಹಿತದೃಷ್ಟಿಯಿಂದ ಹಾಗೂ ರಾಜ್ಯ ಕಾಂಗ್ರೆಸ್‌ಗೆ ಲಾಭವಾಗುವ ನಿಟ್ಟಿನಲ್ಲಿ ಸುಮಲತಾ ಅವರನ್ನು ಕಾಂಗ್ರೆಸ್‌ಗೆ ಕರೆ ತರುವಂತೆ ಮನವಿ ಮಾಡಿದ್ದಾರೆ.

ರಥಸಪ್ತಮಿ: ಶ್ರೀವೆಂಕಟೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ

ಭಾರತೀನಗರ, ಜ.29– ಇಲ್ಲಿನ ಶ್ರೀವೆಂಕಟೇಶ್ವರಸ್ವಾಮಿ ದೇವಾಲಯದಲ್ಲಿ ರಥಸಪ್ತಮಿ ಪ್ರಯುಕ್ತ ವಿಶೇಷ ಪೂಜೆ ಜರುಗಿತು.

ನಂತರ ಶ್ರೀವೆಂಕಟೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ಭಕ್ತರು ಹೊತ್ತು ದೇವಸ್ಥಾನ ಸುತ್ತಲೂ 3 ಪ್ರದಕ್ಷಿಣೆಗೆ ಹಾಕಿ ಗೋವಿಂದನ ನಾಮ ಸ್ಮರಣೆ ಮಾಡಿದರು. ಶ್ರೀವೆಂಕಟೇಶ್ವರ ಮೂರ್ತಿಗೆ ವಿಶೇಷವಾಗಿ ಅಲಂಕರಿಸಲಾಗಿತ್ತು. ಭಕ್ತರು ಉತ್ಸವ ಮೂರ್ತಿ ಮೆರವಣಿಗೆ ಕಣ್ತುಂಬಿಕೊಂಡರು.



ಬೆಳಗ್ಗೆಯಿಂದ ಸಂಜೆವರೆಗೂ ಭಕ್ತರು ದೇವಾಲಯಕ್ಕೆ ಆಗಮಿಸಿ ಪೂಜೆ ಸಲ್ಲಿಸಿದರು. ಪ್ರಸಾದ ವಿತರಣೆ ಮಾಡಲಾಯಿತು. ಬೆಳಗ್ಗೆ 7 ಗಂಟೆಗೆ ಸೂರ್ಯ ನಮಸ್ಕಾರದ ಪೂಜೆ, ಸಂಜೆ 7 ಗಂಟೆಗೆ ಚಂದ್ರಮಂಡಲ ಪೂಜೆ ಜರುಗಿತು.

ಈ ವೇಳೆ ಶ್ರೀವೆಂಕಟೇಶ್ವರಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ ಪೂಜೂರಿ ವೆಂಕಟೇಗೌಡ, ಕಾರ್ಯಾಧ್ಯಕ್ಷ ವೆಂಕಟೇಶ್, ನಾಗಪ್ಪ ವಿಶ್ವ ಶುಂಠಿ ವೆಂಕಟೇಗೌಡ, ಕೆಂಚೇಗೌಡರ ಶ್ರೀನಿವಾಸ್, ಅಣ್ಣೂರು ಸತೀಶ್, ಪುಟ್ಟಣ್ಣ, ಬೋರೇಗೌಡ ಇತರರಿದ್ದರು.

ಇಂದು ಸ್ಪರ್ಶ್ ಕುಷ್ಠರೋಗ ಅರಿವು ಆಂದೋಲನ

ಮಂಡ್ಯ, ಜ.29– ಜಿಲ್ಲಾಡಳಿತ, ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ(ಕುಷ್ಠರೋಗ ನಿರ್ಮೂಲನಾ ವಿಭಾಗ), ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ವಾರ್ತಾ ಇಲಾಖೆ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಕುಷ್ಠ ರೋಗ ಬಾಧಿತರ ಸಂಘ ಸಂಯುಕ್ತಾಶ್ರಯದಲ್ಲಿ ಸ್ಪರ್ಶ್ ಕುಷ್ಠರೋಗ ಅರಿವು ಆಂದೋಲನ ಕಾರ್ಯಕ್ರಮ ಹಾಗೂ ಜಾಗೃತಿ ಜಾಥಾ ಜ.30 ಬೆಳಗ್ಗೆ 10.30ಕ್ಕೆ ನಗರದ ಸಂಜಯ ವೃತ್ತದಲ್ಲಿ ನಡೆಯಲಿದೆ.ಜಿಲ್ಲಾಧಿಕಾರಿ ಡಾ.ಹೆಚ್.ಎಲ್ ಗೋಪಾಲ ಕೃಷ್ಣ ಜಾಗೃತಿ ಜಾಥಾ ಉದ್ಘಾಟಿಸಲಿದ್ದಾರೆ. ಜಿಲ್ಲಾ ಮಟ್ಟದ ಸಭಾ ಕಾರ್ಯಕ್ರಮ ಬೆಳಗ್ಗೆ 11.30ಕ್ಕೆ ಡಾ.ಜಿ.ಎಲ್.ಜವರೇಗೌಡ ಸಭಾಂಗಣದಲ್ಲಿ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಜಿಪಂ ಸಿಇಓ ಶಾಂತ ಎಲ್.ಹುಲ್ಮನಿ, ಎಸ್‌ಪಿ ಯತೀಶ್.ಎನ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಟಿ.ಎಸ್. ಧನಂಜಯ್, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಕೆ.ಪಿ.ಅಶ್ವತ್ ಇತರರು ಭಾಗವಹಿಸಲಿದ್ದಾರೆ.

ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸಿ

ಬಿಜೆಪಿ ವಿಜಯ ಸಂಕಲ್ಪ ಅಭಿಯಾನದಲ್ಲಿ ಸಿಎಂ ಬೊಮ್ಮಾಯಿ ಮನವಿ

ನಂಜನಗೂಡು, ಜ.29– ನಗರದ ಮೇದರಗೇರಿ ಬಡಾವಣೆಯಲ್ಲಿ ಆಯೋಜಿಸಿದ್ದ ಬಿಜೆಪಿ ವಿಜಯ ಸಂಕಲ್ಪ ಅಭಿಯಾನದಲ್ಲಿ ಬುಟ್ಟಿ ಹೆಣೆಯುವ ಸ್ಥಳೀಯರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಾಧನೆಗಳ ಕರಪತ್ರ ವಿತರಿಸಿ ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನವಿ ಮಾಡಿದರು. ಈ ಸಂದರ್ಭ ಬುಟ್ಟಿ ಹೆಣೆಯುವ ಮಹಿಳೆಯರು ಮುಖ್ಯಮಂತ್ರಿ ಬಸವರಾಜ



ಬೊಮ್ಮಾಯಿ ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡು ಅವರಿಂದ ಕರಪತ್ರ ಸ್ವೀಕರಿಸಿ ಪ್ರತಿಯಾಗಿ ಅವರಿಗೆ ಇಡ್ಲಿ ತಯಾರಿಸುವ ಚಿಬ್ಲುಗಳನ್ನು ಉಡುಗೊರೆಯಾಗಿ ನೀಡಿದರು. ಈ ವೇಳೆ ಸ್ಥಳೀಯರು ನೀಡಿದ ಉಡುಗೊರೆ ಸ್ವೀಕರಿಸಿದ ಮುಖ್ಯಮಂತ್ರಿಗಳು ನಿಮ್ಮ ಪ್ರೀತಿಗೆ ಧನ್ಯವಾದ. ಮುಂಬರುವ ದಿನಗಳಲ್ಲಿ ಇದರಿಂದ ತಯಾರಿಸಿದ ಇಡ್ಲಿ ಕಳುಹಿಸಿ ಕೊಡುವಂತೆ ತಿಳಿಸಿದರು.

ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ಜ.29ರವರೆಗೆ ನಂಜನಗೂಡು ಕ್ಷೇತ್ರ ವ್ಯಾಪ್ತಿಯಲ್ಲಿ ವಿಜಯ ಸಂಕಲ್ಪ ಅಭಿಯಾನ ನಡೆಸಲಾಗಿದ್ದು, ಪಕ್ಷದ ಕಾರ್ಯಕರ್ತರು ಜನರ ಮನೆ ಬಾಗಿಲಿಗೆ ತೆರಳಿ ಮತದಾರರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಾಧನೆ ತಿಳಿಸಿಕೊಟ್ಟಿದ್ದಾರೆ ವಿಶೇಷವಾಗಿ ಅಭಿಯಾನದ ಕೊನೆ ದಿನ ಮುಖ್ಯಮಂತ್ರಿಯವರೇ ನಂಜನಗೂಡಿಗೆ ಆಗಮಿಸಿ ಮತದಾರರನ್ನು ಭೇಟಿ ಮಾಡಿ ಕರಪತ್ರ ಹಂಚಿರುವುದರಿಂದ ಪಕ್ಷದ ಕಾರ್ಯಕರ್ತರ ಉತ್ಸಾಹ ಹೆಚ್ಚಳವಾಗಿದೆ ಎಂದರು. ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ನಗರಸಭೆ ಅಧ್ಯಕ್ಷ ಮಹದೇವಸ್ವಾಮಿ, ತಾಲೂಕು ಬಿಜೆಪಿ ಅಧ್ಯಕ್ಷ ಮಹೇಶ್, ನಗರ ಘಟಕದ ಅಧ್ಯಕ್ಷ ಶ್ರೀನಿವಾಸರೆಡ್ಡಿ ಮತ್ತಿತರರಿದ್ದರು. ಇನ್ನು ಸಾಧನ ಸಲಕರಣೆ ವಿತರಣಾ ಸಮಾರಂಭಕ್ಕೂ ಮುನ್ನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು.

ಸೋಸಲೆ ಪಿಎಸಿಎಸ್‌ಗೆ ಪರಶಿವಮೂರ್ತಿ ಅಧ್ಯಕ್ಷ

ತಿ.ನರಸೀಪುರ, ಜ.29– ತಾಲೂಕಿನ ಸೋಸಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಂ.ಪರಶಿವಮೂರ್ತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರ ಆದೇಶ ಪಾಲನೆ ಮಾಡದ ಹಿನ್ನೆಲೆಯಲ್ಲಿ ನಿಕಟ ಪೂರ್ವ ಅಧ್ಯಕ್ಷ ಪ್ರಭುಸ್ವಾಮಿ ಅವರನ್ನು ಸಹಕಾರ ಸಂಘಗಳ ಕಾಯ್ದೆಯನ್ವಯ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಲಾಗಿತ್ತು. ಅವರಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಭಾನುವಾರ ಸಂಘದ ಕಚೇರಿಯಲ್ಲಿ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಎಂ.ಪರಶಿವಮೂರ್ತಿ ಅವರೊಬ್ಬರೇ ಉಮೇದುವಾರಿಕೆ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಅಭಿವೃದ್ಧಿ ಅಧಿಕಾರಿ ರಾಜಣ್ಣ ಘೋಷಿದರು. ನೂತನ ಅಧ್ಯಕ್ಷರ ಘೋಷಣೆಯಾಗುತ್ತಿದ್ದಂತೆ ಸಹಕಾರ ಸಂಘದ ಆವರಣದಲ್ಲಿ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಸಂಘದ ಒಟ್ಟು 10 ನಿರ್ದೇಶಕರ ಪೈಕಿ ಉಪಾಧ್ಯಕ್ಷ ಎಂ.ಸೋಮಣ್ಣ, ನಿರ್ದೇಶಕರಾದ ಎಸ್.ಕುಮಾರ್, ಹೊನ್ನನಾಯಕ, ಜಯಮ್ಮ, ನೀಲಮ್ಮ, ಎಂ.ನಾಗರಾಜು, ಸೈಯದ್ ಮುಸ್ತಾಕ್ ಚುನಾವಣೆಯಲ್ಲಿ ಹಾಜರಿದ್ದು, ಪರಶಿವಮೂರ್ತಿ ಆಯ್ಕೆಗೆ ಅನುಮೋದನೆ ನೀಡಿದರೇ ಮತ್ತಿಬ್ಬರು ಸದಸ್ಯರು ಗೈರಾಗಿದ್ದರು. ಈ ವೇಳೆ ನೂತನ ಅಧ್ಯಕ್ಷ ಪರಶಿವಮೂರ್ತಿ ತಮ್ಮ ಆಯ್ಕೆಗೆ ಸಹಕರಿಸಿದ ಸರ್ವ ಸದಸ್ಯರಿಗೂ ಅಭಿನಂದನೆ ಸಲ್ಲಿಸಿದರು.



ನಂತರ ಮಾತನಾಡಿದ ಪರಶಿವಮೂರ್ತಿ, ಸಂಘದ ಸರ್ವ ಸದಸ್ಯರಿಗೆ ಸಾಲ ಸೇರಿದಂತೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವ ಜೊತೆಗೆ, ಸಹಕಾರ ಸಂಘದಿಂದ ಪಡಿತರವನ್ನು ಸಮರ್ಪಕವಾಗಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದು. ಸಹಕಾರ ಸಂಘ ಈಗಾಗಲೇ ಲಾಭಾಂಶದಲ್ಲಿ ಮುಂದುವರೆದಿದ್ದು, ಸಂಘಕ್ಕೆ ಇನ್ನೂ ಹೆಚ್ಚಿನ ಷೇರುದಾರರನ್ನು ನೋಂದಣಿ ಮಾಡುವ ಕಾರ್ಯಕ್ಕೆ ಚಾಲನೆ ನೀಡಲಾಗುವುದು. ಸಂಘದ ಕಟ್ಟಡ ಅಭಿವೃದ್ಧಿ ಸೇರಿದಂತೆ ರೈತರ ಕೃಷಿ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸಲು ಯಂತ್ರೋಪಕರಣಗಳನ್ನು ಸಂಘದಿಂದಲೇ ಅಗತ್ಯ ಕ್ರಮವಹಿಸಲಾಗುತ್ತದೆ. ಆ ಮೂಲಕ ಸಂಘವನ್ನು ತಾಲೂಕಿನಲ್ಲಿಯೇ ಅತ್ಯುತ್ತಮ ಸಂಘ ಮಾಡಲು ಬೇಕಾದ ಎಲ್ಲಾ ರೀತಿಯ ಚಟುವಟಿಕೆ ಹಮ್ಮಿಕೊಳ್ಳಲಾಗುತ್ತದೆ ಎಂದರು.

ಈ ವೇಳೆ ಮೈಮುಲ್ ಮಾಜಿ ನಿರ್ದೇಶಕ ಸಿ.ಡಿ.ಜಗದೀಶ್, ಜಿಲ್ಲಾ ಸಂಘದ ಪ್ರತಿನಿಧಿ ರಾಜಪ್ಪ, ಸಂಘದ ಸಿಇಓ ಬಿ.ಎನ್.ಜಗದೀಶ್, ಗ್ರಾಪಂ ಮಾಜಿ ಪುಟ್ಟಸ್ವಾಮಿ, ಡೈರಿ ಕಾರ್ಯದರ್ಶಿ ನಿಂಗಯ್ಯ, ಮುಖಂಡರಾದ ಚುಂಚೇಗೌಡ, ಮಹೇಶ್, ಹರೀಶ್, ಸೋಮಣ್ಣ, ಮೂಗೂರು ಮೂರ್ತಿ ಇತರರಿದ್ದರು.



ಜಯಪುರದ ಜನಸೇವಾ ಸಂಘದಿಂದ ಆಯೋಜಿಸಿದ್ದ ಚುಟುಕು ಕ್ರಿಕೆಟ್ ಪಂದ್ಯಾವಳಿ ಫೈನಲ್‌ನಲ್ಲಿ ವಿಜೇತರಾದ ಹಳ್ಳದಮನುಗನಹಳ್ಳಿ ತಂಡಕ್ಕೆ ಶಾಸಕ ಜಿ.ಟಿ.ದೇವೇಗೌಡ ಬಹುಮಾನ ವಿತರಿಸಿದರು. ಈ ವೇಳೆ ಉದ್ಯಮಿ ಎಸ್.ಶ್ರೀಕಾಂತ್, ಮುಖಂಡರಾದ ಜೆ.ಎಂ.ಜವರನಾಯಕ, ರಂಗಸ್ವಾಮಿ, ರಾಜೇಶ್, ಜನಸೇವಾ ಸಂಘದ ಅಧ್ಯಕ್ಷ ಸಿದ್ದಪ್ಪಾಜಿ ಇದ್ದರು.

ಕೃಷಿಕರು ರೇಷ್ಮೆ ಬೇಸಾಯದಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳಿ

ತಿ.ನರಸೀಪುರ, ಜ.29– ಕೃಷಿಕರು ರೇಷ್ಮೆ ಬೇಸಾಯದಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡಲ್ಲಿ ಹೆಚ್ಚು ಲಾಭ ಪಡೆಯಬಹುದು ಎಂದು ರೇಷ್ಮೆ ಇಲಾಖೆ ಜಂಟಿ ನಿರ್ದೇಶಕಿ ಕೆ.ಮೇಘಲ ತಿಳಿಸಿದರು.

ತಾಲೂಕಿನ ಹಳೇಕೆಂಪಯ್ಯನಹುಂಡಿ ಗ್ರಾಮದಲ್ಲಿ ರೇಷ್ಮೆ ಇಲಾಖೆ ಸಂಶೋಧನಾ ಕೇಂದ್ರ ಮೈಸೂರು ಮತ್ತು ರೋಟರಿ ಶ್ರೀಗಂಧ ಸಂಸ್ಥೆ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ರೇಷ್ಮೆ ಕೃಷಿಕರ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ರೇಷ್ಮೆ ಕೃಷಿಯಲ್ಲಿ ನವೀನ ತಾಂತ್ರಿಕತೆ ಬಳಸುವುದು. ಹಿಪ್ಪುನೇರಳೆ ಸೊಪ್ಪಿನ ಬೇಸಾಯದಲ್ಲಿ ಹೆಚ್ಚು ಇಳುವರಿ ಪಡೆಯಲು 'ಮರಗಡ್ಡಿ' ಕ್ರಮವನ್ನು ರೈತರು ಕಡ್ಡಾಯವಾಗಿ ಅನುಸರಿಸಿದಲ್ಲಿ ಇಳುವರಿ ಹೆಚ್ಚಾಗಿ ರೈತರು ಹೆಚ್ಚು ಆರ್ಥಿಕ ಲಾಭ ಗಳಿಸಬಹುದು ಎಂದರು.

ರೇಷ್ಮೆ ಇಲಾಖೆ ಉಪ ನಿರ್ದೇಶಕಿ ಎಸ್.ಕೆ.ಮಂಜುಳಾ ಮಾತನಾಡಿ, ರೇಷ್ಮೆ ಕೃಷಿಕರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳ ಬಗ್ಗೆ ರೈತರಿಗೆ ಮಾಹಿತಿ ನೀಡಿದರು. ಹಿಪ್ಪುನೇರಳೆ ಬೇಸಾಯದಲ್ಲಿ ಅನುಸರಿಸಬೇಕಾದ ತಾಂತ್ರಿಕ ಕ್ರಮಗಳನ್ನು ರೈತರಿಗೆ ತಿಳಿಸಿದರು. ಮೈಸೂರಿನ ರೇಷ್ಮೆ ಸಂಶೋಧನಾ ಕೇಂದ್ರದ ಡಾ.ಮುತ್ತುಲಕ್ಷ್ಮಿ ರೇಷ್ಮೆ ಬೆಳೆಗೆ ರೋಗ, ಕೀಟಬಾಧೆ, ರೇಷ್ಮೆ ಹುಳುಗಳ ಸಾಕಾಣಿಕೆಯಲ್ಲಿ ಅನುಸರಿಸಬೇಕಾದ ಕ್ರಮದ ಬಗ್ಗೆ ರೈತರಿಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಸಿ.ಆರ್.ಕೃಷ್ಣ ಪ್ರಾಸ್ತಾವಿಕ ಭಾಷಣ ಮಾಡಿದರು. ಪ್ರತಿಪರ ರೈತ ಚನ್ನೇಗೌಡರನ್ನು ರೇಷ್ಮೆ ಇಲಾಖೆ ಮತ್ತು ರೋಟರಿ ಸಂಸ್ಥೆ ವತಿಯಿಂದ ಸನ್ಮಾನಿಸ ಲಾಯಿತು.

ಕಾರ್ಯಕ್ರಮದಲ್ಲಿ ನಿವೃತ್ತ ರೇಷ್ಮೆ ಉಪ ನಿರ್ದೇಶಕ ಹಾಗೂ ಶ್ರೀಗಂಧ ರೋಟರಿ ಸಂಸ್ಥೆ ಎನ್.ವೈಚಿಗುರಿ, ಅಧಿಕಾರಿಗಳಾದ ಕೆ.ಶಿವಣ್ಣ, ಕಾಸು ಲಮಾಣಿ, ನೇತ್ರಾವತಿ, ಆರ್.ರವಿ, ಎನ್.ಕೆ. ಕೆಂಪರಾಜು, ರೈತರಾದ ಮಹದೇವ ಸ್ವಾಮಿ, ನಾಗೇಶ್, ಸುರೇಶ, ಮಹೇಶ್, ರೇವಣ್ಣ, ಕೆ.ಸ್ವಾಮಿ, ಗವಿಗೌಡ ಇತರರಿದ್ದರು.

ಸಾಗರೆಯಲ್ಲಿ ನೂತನ ಅಂಬೇಡ್ಕರ್ ಪುತ್ಥಳಿ ಅನಾವರಣ

ಕೋಮುವಾದ ಅಳಿಯುವವರೆಗೂ ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲ: ಮಾಜಿ ಸಚಿವ ಹೆಚ್‌ಸಿಎಂ ಬೇಸರ

ಸರಗೂರು, ಜ.29– ದೇಶದಲ್ಲಿ ಧರ್ಮಗಳದ್ದೆ ಪಾರುಪತ್ಯ, ಕೋಮುವಾದ ಅಳಿಯುವವರೆಗೂ ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲ ಎಂದು ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಬೇಸರ ವ್ಯಕ್ತಪಡಿಸಿದರು.

ತಾಲೂಕಿನ ಸಾಗರೆ ಗ್ರಾಮದಲ್ಲಿ ಭಾನುವಾರ ನೂತನವಾಗಿ ನಿರ್ಮಾಣಗೊಂಡಿರುವ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ಅನಾವರಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮೊದಲು ಮನುಷ್ಯ ಹುಟ್ಟಿದ. ನಂತರ ಧರ್ಮ ಜನ್ಮ ತಾಳಿತು. ಧರ್ಮ ಮನುಷ್ಯನ ಅಭಿವೃದ್ಧಿಗೆ ಶ್ರಮಿಸಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಧರ್ಮದ ಹೆಸರಿನಲ್ಲಿ ದೇಶದೆಲ್ಲೆಡೆ ಕಟ್ಟುಪಾಡು ಜಾರಿಯಾಗು ತ್ತಿವೆ. ಅವುಗಳನ್ನು ಪಾಲಿಸಲೇಬೇಕು ಎಂಬುದು ಜಟಿಲವಾಗುತ್ತಿದೆ. ಶಾಲಾ–ಕಾಲೇಜು, ಸಾರ್ವಜನಿಕ ಸ್ಥಳಗಳಲ್ಲಿ ಧರ್ಮದ ಹೆಸರಿನಲ್ಲಿ ಅಧರ್ಮ ನಡೆಯು ತ್ತಿದೆ. ಮತಾಂತರ ಕಾಯಿದೆ ಇದಕ್ಕೆ ನೈಜ ಉದಾಹರಣೆ ಎಂದರು. ಸಂವಿಧಾನದ ಆಶಯಗಳು ಜಾರಿಯಾಗಿವೆಯೇ ಹೊರತು, ಸಂವಿಧಾನದ ಮೂಲಕ ಅಂಬೇಡ್ಕರ್ ಕಂಡ ಭವ್ಯ ಭಾರತದ ಕನಸು ಕನಸಾಗಿಯೇ ಉಳಿದಿದೆ.



ಅಸ್ಪೃಶ್ಯತೆ ಆಚರಣೆ ಇನ್ನೂ ಜೀವಂತವಾಗಿದೆ. ಸಮಾಜದಲ್ಲಿ ಸಮಾನತೆ ಇಲ್ಲದಾಗಿದೆ. ಮತದಾನದ ಹಕ್ಕು ನೀಡಿದ ಬಾಬಾ ಸಾಹೇಬರ ಆಶಯದಂತೆ ಸಮಾನತೆ ನೆಲೆಯೂರಬೇಕು ಎಂದರು.

ಅಂಬೇಡ್ಕರ್ ಅವರು ಶಾಲಾ ದಿನಗಳಲ್ಲಿ ಅನುಭವಿಸಿದ ನೋವನ್ನು ಸಮಾಜದ ನೋವೆಂದು ಪರಿಗಣಿಸಿ ಅದಕ್ಕೆ ಮುಕ್ತಿ ನೀಡಲು ಆಳವಾದ ಅಧ್ಯಯನ ನಡೆಸಿ ದೇಶಕ್ಕೆ ಬೃಹತ್ ಸಂವಿಧಾನ ನೀಡಿದರು. ದೇಶದ ಅಭಿವೃದ್ಧಿಗೆ ಪೂರಕವಾದ ಅಂಶಗಳನ್ನು ಸಂವಿಧಾನದಲ್ಲಿ ನೀಡಲಾಗಿದೆ. ಅದನ್ನು ಸದ್ಬಳಕೆ ಮಾಡಿಕೊಳ್ಳಲು ಮುಂದಾಗಬೇಕು ಎಂದರು.

ಅಂಬೇಡ್ಕರ್ ಪುತ್ಥಳಿ ಅನಾವರಣಗೊಳಿಸಿ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಅಂಬೇಡ್ಕರ್ ಅವರು ತಮ್ಮ ಜೀವಿತಾವಧಿಯಲ್ಲಿ ಸಮಾನತೆ, ಅಭಿವೃದ್ಧಿ, ಜ್ಞಾನ ಸಂಪಾದನೆ ಬಗ್ಗೆ ಆಲೋಚಿಸುತ್ತಿದ್ದರು. ಹೀಗಾಗಿಯೇ ವಿಶ್ವಜ್ಞಾನಿಯಾದರು. ಎಲ್ಲಾ ರಂಗದಲ್ಲಿಯೂ ಪಾಂಡಿತ್ಯ ಸಾಧಿಸಿದ್ದರು. ಇಂಥ ಮಹಾನ್ ನಾಯಕರನ್ನು ಜಾತಿಗೆ ಸೀಮಿತಗೊಳಿಸುವುದು ದುಃಖದ ಸಂಗತಿ ಎಂದರು.

ಅಂತರಸಂತೆ ಮಾತೇ ಗೌತಮಿ ಭಂತೇಜಿ ಸಾನ್ನಿಧ್ಯ ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿದರು. ಬಿಜೆಪಿ ಮುಖಂಡರಾದ ಎಂ.ಅಪ್ಪಣ್ಣ, ಡಾ.ಹೆಚ್.ವಿ.ಕೃಷ್ಣಸ್ವಾಮಿ, ನಲ್ಲೂರು ಶಂಕರೇಗೌಡ, ಕಾಂಗ್ರೆಸ್ ಮುಖಂಡರಾದ ಕೆ.ಚಿಕ್ಕವೀರನಾಯಕ, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಎಚ್.ಸಿ.ನರಸಿಂಹಮೂರ್ತಿ, ವೆಂಕಟಸ್ವಾಮಿ, ಸಮಾಜ ಸೇವಕ ದೇವದತ್ತ, ಆದಿ ಮಹಾಸಭಾ ಅಧ್ಯಕ್ಷ ಶಿವಣ್ಣ, ಜೆಡಿಎಸ್ ತಾಲೂಕು ಅಧ್ಯಕ್ಷ ಗೋಪಾಲಸ್ವಾಮಿ, ಮಹೇಂದ್ರ, ಗ್ರಾಪಂ ಅಧ್ಯಕ್ಷ ಮೃತ್ಯುಂಜಯ, ಉಪಾಧ್ಯಕ್ಷೆ ರೂಪ, ಯೂತ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜು, ಮುದ್ದುಮಲ್ಲಯ್ಯ, ರಾಜು, ಮುಖಂಡರಾದ ಸಿ.ಕೆ.ಗಿರೀಶ್, ನಂಜಯ್ಯ, ಭೀಮಣ್ಣ, ಮಲ್ಲೇಶ್, ಸೋಮಣ್ಣ, ದೊಡ್ಡ ಯಜಮಾನ ಎಸ್.ಪಿ.ಲೋಕೇಶ್ ಸೇರಿದಂತೆ ಅಂಬೇಡ್ಕರ್ ಯುವಕ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಶತಾಯುಷಿ ಜಯಲಕ್ಷ್ಮಮ್ಮಣಿ ನಿಧನ



ಮೈಸೂರು, ಜ.29– ಮೈಸೂರು ತಾಲೂಕಿನ ಧನಗಳ್ಳಿ ಗ್ರಾಮದ ನಿವಾಸಿ ಶತಾಯುಷಿ ಜಯಲಕ್ಷ್ಮಮ್ಮಣಿ (110) ಭಾನುವಾರ ಮಧ್ಯಾಹ್ನ ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಗ್ರಾಮದ ಯಜಮಾನರು, ಮುಖಂಡರು ಸಂತಾಪ ಸೂಚಿಸಿದ್ದಾರೆ.

ಮೈಸೂರು ಮಿತ್ರ ಸೋಮವಾರ 30 ಜನವರಿ 2023

ದೊಡ್ಡ ಹೊಳೆ ದಾಟುವ 15 ವರ್ಷಗಳ ಪರದಾಟಕ್ಕೆ ಮುಕ್ತಿ

ಕೋಪಟ್ಟಿ ಗ್ರಾಮದಲ್ಲಿ ಸೇತುವೆ ಉದ್ಘಾಟನೆ



ಮಡಿಕೇರಿ, ಜ.29– ಮಡಿಕೇರಿ ತಾಲೂಕು ಕುಂದಚೇರಿ ಗ್ರಾ.ಪಂ ವ್ಯಾಪ್ತಿಯ ಕೋಪಟ್ಟಿ ಗ್ರಾಮಸ್ಥರಿಗೆ ಕೊನೆಗೂ ಸೇತುವೆ ಭಾಗ್ಯ ದೊರೆತಿದೆ.

ಕಳೆದ 15 ವರ್ಷಗಳಿಂದ ದೊಡ್ಡ ಹೊಳೆಯನ್ನು ದಾಟಲು ಗ್ರಾಮಸ್ಥರು ಪಡುತ್ತಿದ್ದ ಸಂಕಷ್ಟಕ್ಕೆ ಮುಕ್ತಿ ದೊರಕಿದೆ. ಲೋಕೋಪಯೋಗಿ ಇಲಾಖೆ 35 ಲಕ್ಷ ರೂ. ವೆಚ್ಚದಲ್ಲಿ ಸೇತುವೆಯನ್ನು ನಿರ್ಮಾಣ ಮಾಡಿದ್ದು, ನೂತನ ಸೇತುವೆಯನ್ನು ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ ಅವರು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಶಾಸಕ ಕೆ.ಜಿ. ಬೋಪಯ್ಯ, ಗ್ರಾಮಸ್ಥರ ಅನುಕೂಲಕ್ಕಾಗಿ ಇದೀಗ ನೂತನ ಸೇತುವೆ ನಿರ್ಮಾಣದ ಮೂಲಕ ಹಲವು ವರ್ಷಗಳ ಸಮಸ್ಯೆ ಬಗೆಹರಿದಿದೆ. ಆದರೆ ಕೆಲವು ರಸ್ತೆಗಳು ಹದಗೆಟ್ಟಿದ್ದು, ಕಾಂಕ್ರೀಟ್ ರಸ್ತೆ ನಿರ್ಮಾಣದ ಅಗತ್ಯವಿದೆ ಎಂದು ಹೇಳಿದರು. ಇಲ್ಲಿನ ಮತ್ತೊಂದು ಸೇತುವೆ ಸಂಪೂರ್ಣವಾಗಿ ಶಿಥಿಲಗೊಂಡಿದ್ದು, ಮುಂದಿನ ದಿನಗಳಲ್ಲಿ ನೂತನ ಸೇತುವೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಸನ್ಮಾನ: ನೂತನ ಸೇತುವೆ ನಿರ್ಮಾಣಕ್ಕೆ ಕಾಳಜಿ ತೋರಿದ ಶಾಸಕ ಕೆ.ಜಿ.ಬೋಪಯ್ಯ ಅವರನ್ನು ಗ್ರಾಮಸ್ಥರು ಪೇಟ ತೊಡಿಸಿ, ಶಾಲು ಹೊದಿಸಿ ಸನ್ಮಾನಿಸಿದರು.

ಕುಂದಚೇರಿ ಗ್ರಾಪಂ ಅಧ್ಯಕ್ಷರಾದ ಸವಿತಾ ಉದಯಕುಮಾರ್, ಸದಸ್ಯರಾದ ಪಿ.ಬಿ. ದಿನೇಶ್, ಬೇಬಿ ಪೊನ್ನಪ್ಪ, ಅಯ್ಯಂಗೇರಿ ಗ್ರಾಪಂ ಅಧ್ಯಕ್ಷ ರಂಜು, ಭಾಗಮಂಡಲ ಗ್ರಾಪಂ ಉಪಾಧ್ಯಕ್ಷ ಹೊಸೂರು ಸತೀಶ್ ಕುಮಾರ್, ಪ್ರಮುಖರಾದ ಕಾಡಂಡ ಭೀಮಯ್ಯ, ಡಲೇಶ್ ಕುಮಾರ್, ದಾಯನ ಹರ್ಷವರ್ಧನ್, ಉತ್ತಪ್ಪ, ಶ್ರೀಧರ್ ಮತ್ತಿತರ ಜನಪ್ರತಿನಿಧಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಮೂರ್ನಾಡು ರಸ್ತೆಗೆ ಮಹಾವೀರ ಚಕ್ರ ಪ್ರಶಸ್ತಿ ಪುರಸ್ಕೃತ ಕರ್ನಲ್ ಪುಟ್ಟಿಚಂಡ ಗಣಪತಿ ಹೆಸರು ನಾಮಕರಣ



ವಿರಾಜಪೇಟೆ, ಜ.29– ಗಣರಾಜ್ಯೋತ್ಸವದ ಅಂಗವಾಗಿ ವಿರಾಜಪೇಟೆ ಲಯನ್ಸ್ ಕ್ಲಬ್ ಹಾಗೂ ಮಾಜಿ ಸೈನಿಕರ ಸಹಕಾರ ಸಂಘದ ಆಶ್ರಯದಲ್ಲಿ ವಿರಾಜಪೇಟೆ ಪುರಸಭೆ ವ್ಯಾಪ್ತಿಯ ಮೂರ್ನಾಡು ರಸ್ತೆಗೆ ಮಹಾವೀರ ಚಕ್ರ ಪ್ರಶಸ್ತಿ ಪುರಸ್ಕೃತ ಕರ್ನಲ್ ಪುಟ್ಟಿಚಂಡ ಗಣಪತಿ ಅವರ ಹೆಸರನ್ನು ನಾಮಕರಣ ಮಾಡುವ ಮೂಲಕ ಮೇಜರ್ ಜನರಲ್ ಬಾಚಮಂಡ ಎ.ಕಾರ್ಯಪ್ಪ ಅವರು ನಾಮಫಲಕ ಅನಾವರಣಗೊಳಿಸಿದರು.

ನಗರದ ದೊಡ್ಡಟ್ಟಿ ಚೌಕಿಯಿಂದ ಗಡಿಯಾರ ಕಂಬದವರೆಗೆ ಫೀಲ್ಡ್ ಮಾರ್ಷಲ್ ಕೊಡಂದೆರ ಎಂ. ಕಾರ್ಯಪ್ಪ ರಸ್ತೆ ಎಂದು ಹಾಗೂ ಗಡಿಯಾರ ಕಂಬದಿಂದ ಖಾಸಗಿ ಬಸ್ಸು ನಿಲ್ದಾಣದವರೆಗೆ ಜನರಲ್ ಕೊಡಂದೆರ ಎಸ್.ತಿಮ್ಮಯ್ಯ ರಸ್ತೆ ಎಂದು ನಾಮಕರಣಗೊಳಿಸಿ ಕರ್ನಲ್ ಪುಟ್ಟಿಚಂಡ ಗಣಪತಿ ಅವರು ನಾಮಫಲಕ ಅನಾ ವರಣಗೊಳಿಸಿದರು. ತಾಲೂಕು ಮೈದಾನದಲ್ಲಿ ನಡೆದ ಗಣರಾಜ್ಯೋತ್ಸವ ವೇದಿಕೆಯಲ್ಲಿ ತಹಶೀಲ್ದಾರ್ ಅರ್ಚನಾ ಭಟ್ ಅವರನ್ನು ಸನ್ಮಾನಿಸಿ ಗೌರವಿಸಿದರು.

1988ರಲ್ಲಿ ಶ್ರೀಲಂಕಾದಲ್ಲಿ ಎಲ್.ಟಿ.ಟಿ ಅವರ ಜತೆ ನಡೆದ ಸಂಘರ್ಷದಲ್ಲಿ ಶಾಂತಿ ಪಾಲನಾ ಪಡೆಯ ಭಾರತ ಸೇನೆಯ ನೇತೃತ್ವ ವಹಿಸಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ರಕ್ಷಣಾ ಸಚಿವಾಲಯ ಮಹಾವೀರ ಚಕ್ರ ನೀಡಿ ಗೌರವಿಸಿತ್ತು. ಕರ್ನಾಟಕದಲ್ಲಿ ಸ್ಕ್ವಾರ್ಡನ್ ಲೀಡರ್ ಅಜ್ಜಮಾಡ ದೇವಯ್ಯ ಅವರನ್ನು ಹೊರತು ಪಡಿಸಿದರೆ ಕರ್ನಲ್ ಪುಟ್ಟಿಚಂಡ ಗಣಪತಿ ಎರಡನೆಯವರಾಗಿದ್ದಾರೆ. ಇಂತಹ ಮಹಾನ್ ವ್ಯಕ್ತಿಯ ಹೆಸರನ್ನು ಮೂರ್ನಾಡು ರಸ್ತೆಗೆ ನಾಮಕರಣ ಮಾಡುವ ಸಂದರ್ಭ ಎಲ್ಲಾ ಮಾಜಿ ಸೈನಿಕರು ಹಾಗೂ ಅವರ ಕುಟುಂಬ ವರ್ಗದವರು ಹಾಜರಿದ್ದರು.

ರಸ್ತೆಗೆ ನಾಮಕರಣ ಸಂದರ್ಭ ಲಯನ್ಸ್ ಕ್ಲಬ್ ಅಧ್ಯಕ್ಷ ಪುಟ್ಟಿಚಂಡ ನರೇಂದ್ರ, ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್, ಮಾಜಿ ಅಧ್ಯಕ್ಷ ಗಣೇಶ್ ನಂಜಪ್ಪ, ಕಾರ್ಯದರ್ಶಿ ಪುಗ್ಗೆರ ನಂದಾ, ಖಜಾಂಚಿ ತೋರೇರ ಪೂವಯ್ಯ, ಮಾಜಿ ಉಪಾಧ್ಯಕ್ಷ ಪಟ್ರಪಂಡ ರಮೇಶ್ ಕರುಂಬಯ್ಯ, ಕೊಡವ ಸಮಾಜದ ಅಧ್ಯಕ್ಷ ಮನು ಕುಮಾರ್, ಪಿ.ಜಿ.ಅಯ್ಯಪ್ಪ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮೂಕೊಂಡ ಶಶಿ ಸುಬ್ರಮಣಿ, ಕೊಡಗು ಮುಸ್ಲಿಂ ಅಸೋಷಿಯೇಷನ್ ಅಧ್ಯಕ್ಷ ದುದ್ದಿಯಂಡ ಸೂಫಿ, ಪುರಸಭೆ ಅಧ್ಯಕ್ಷೆ ಸುಶ್ಮಿತಾ, ಮುಖ್ಯಾಧಿಕಾರಿ ಚಂದ್ರಕುಮಾರ್, ಪುರಸಭೆ ಸದಸ್ಯರುಗಳು, ಲಯನ್ಸ್ ಕ್ಲಬ್ ಹಾಗೂ ಮಾಜಿ ಸೈನಿಕರ ಸಂಘದ ಸದಸ್ಯರುಗಳು ಉಪಸ್ಥಿತರಿದ್ದರು.

ಇಂದು ಹುತಾತ್ಮರ ದಿನ ಆಚರಣೆ

ಮಡಿಕೇರಿ, ಜ.29– ಕೊಡಗು ಜಿಲ್ಲಾಡಳಿತ ಹಾಗೂ ಸರ್ವೋದಯ ಸಮಿತಿ ವತಿಯಿಂದ ನಾಳೆ (ಜ.30) ಹುತಾತ್ಮರ ದಿನ ಆಚರಿಸಲಾಗುತ್ತಿದೆ. ಈ ಪ್ರಯುಕ್ತ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಚಿತಾಭಸ್ಮವನ್ನು ಬೆಳಗ್ಗೆ 10 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಜಿಲ್ಲಾ ಖಜಾನೆ ಕಚೇರಿಯಿಂದ ಮೆರವಣಿಗೆಯಲ್ಲಿ ಪೊಲೀಸ್ ಗೌರವ ರಕ್ಷೆಯೊಂದಿಗೆ ತೆಗೆದುಕೊಂಡು ಹೋಗಿ ಗಾಂಧಿ ಮಂಟಪದಲ್ಲಿರಿಸಿ ಬೆಳಗ್ಗೆ 10.30 ಗಂಟೆಗೆ ಸರ್ವಧರ್ಮ ಪ್ರಾರ್ಥನೆ ಸಲ್ಲಿಸಲಾಗುತ್ತದೆ. ನಂತರ 11 ಗಂಟೆಗೆ 2 ನಿಮಿಷ ಮೌನ ಆಚರಣೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕೊಡಗು ಮುಸ್ಲಿಂ ಕ್ರಿಕೆಟ್ ಕಪ್ ಲೋಗೋ ಬಿಡುಗಡೆ



ಮಡಿಕೇರಿ, ಜ.29– ಓಯಸಿಸ್ ಆರ್ಟ್ಸ್ ಅಂಡ್ ಸ್ಪೋರ್ಟ್ಸ್ ಕ್ಲಬ್ ಹೊದ ವಾಡ ಕೊಟ್ಟಮುಡಿ ವತಿಯಿಂದ ಮಾ.4 ರಿಂದ 12ರವರೆಗೆ ನಡೆಯುವ ಕೊಡಗು ಮುಸ್ಲಿಂ ಕ್ರಿಕೆಟ್ ಕಪ್ –2023 ಪಂದ್ಯಾವಳಿಯ ಲೋಗೋವನ್ನು ಚಾಮರಾಜಪೇಟೆ ಕ್ಷೇತ್ರದ ಶಾಸಕ ಜಮೀರ್ ಅಹಮದ್ ಖಾನ್ ಅನಾವರಣಗೊಳಿಸಿದರು.

ಚಾಮರಾಜಪೇಟೆಯ ಶಾಸಕರ ಕಚೇರಿಯಲ್ಲಿ ಲೋಗೋ ಬಿಡುಗಡೆಗೊಳಿಸಿದ ಅವರು ಆಯೋಜಕರಿಗೆ ಹಾಗೂ ಕ್ರೀಡಾಕೂಟಕ್ಕೆ ಶುಭ ಹಾರೈಸಿದರು. ಕೊಡಗು ಮುಸ್ಲಿಂ ಕ್ರಿಕೆಟ್ ಕಪ್ ಪಂದ್ಯಾವಳಿ ನಾಪೋಕ್ಲುವಿನ ಚೆರಿಯಪರಂಬು ಜನರಲ್ ಕೆ.ಎಸ್. ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಶಾಫಿ ಕೊಟ್ಟಮುಡಿ ತಿಳಿಸಿದರು.

ಈ ಸಂದರ್ಭ ಪ್ರಮುಖರಾದ ಅಯುಬ್ ಖಾನ್, ಓಯಸಿಸ್ ಆರ್ಟ್ಸ್ ಅಂಡ್ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಶಾಫಿ ಕೊಟ್ಟಮುಡಿ, ಕಾರ್ಯದರ್ಶಿ ಶಿಯಾಬುದ್ದೀನ್ ಕೆಯು, ಪದಾಧಿಕಾರಿಗಳಾದ ಅಶ್ರಫ್ ಟಿ.ಎಚ್ ತಕ್ಕ ಪಳ್ಳಿ, ರೆಹಮಾನ್ ಅಂದಾಯಿ, ಸುಹೈಲ್ ಎಂ.ಎ ಮತ್ತಿತರರು ಉಪಸ್ಥಿತರಿದ್ದರು.

ಗೋಣಿಕೊಪ್ಪಲಿನಲ್ಲಿ ಕಸಾಪದಿಂದ 16ನೇ ಜಿಲ್ಲಾ ಸಮ್ಮೇಳನ

ಫೆ.1, ಪೂರ್ವಭಾವಿ ಸಭೆಯಲ್ಲಿ ಚರ್ಚೆ

ಗೋಣಿಕೊಪ್ಪಲು, ಜ.29– ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ 16ನೇ ಜಿಲ್ಲಾ ಸಮ್ಮೇಳನವನ್ನು ಪೊನ್ನಂಪೇಟೆ ತಾಲೂಕಿನ ಗೋಣಿಕೊಪ್ಪಲಿನಲ್ಲಿ ಆಯೋಜಿಸುವ ಕುರಿತು ಫೆ.1ರಂದು ಪೂರ್ವಭಾವಿ ಸಭೆ ಕರೆಯಲಾಗಿದೆ.

ಪೊನ್ನಂಪೇಟೆ ತಾಲೂಕಿನ ಪ್ರಮುಖರು, ಸಾರ್ವಜನಿಕರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸರಕಾರಿ ಇಲಾಖೆಗಳು, ಗ್ರಾಮ ಪಂಚಾಯಿತಿಯ, ಸಹಕಾರಿ ಸಂಸ್ಥೆಗಳ, ಸ್ತ್ರೀಶಕ್ತಿ, ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಂಜೀವಿನಿ ಒಕ್ಕೂಟ, ಯುವಕ ಮಂಡಳಿ, ಯುವತಿ ಮಂಡಳಿಗಳ ಸಹಕಾರದೊಂದಿಗೆ ಸಮ್ಮೇಳನವನ್ನು ಆಚರಿಸುವಂತೆ ಕೋರುವ ಸಲುವಾಗಿ ಗೋಣಿಕೊಪ್ಪಲಿನ ಕಾಮತ್ ನವಮಿ ಸಭಾಂಗಣದಲ್ಲಿ ಬುಧವಾರ ಮಧ್ಯಾಹ್ನ 3 ಗಂಟೆಗೆ ಪೂರ್ವಭಾವಿ ಸಭೆ ಕರೆಯಲಾಗಿದೆ.

ವಿರಾಜಪೇಟೆ ಶಾಸಕ ಕೆ.ಜಿ. ಬೋಪಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಸಭೆಯಲ್ಲಿ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್, ಮಾಜಿ ಅಧ್ಯಕ್ಷ ಟಿ.ಪಿ. ರಮೇಶ್ ಅವರುಗಳು ಉಪಸ್ಥಿತರಿರುತ್ತಾರೆ.

ಈ ಸಭೆಗೆ ಜಿಲ್ಲೆಯ ಎಲ್ಲ ಕನ್ನಡಾಭಿಮಾನಿಗಳು, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರು ಉಪಸ್ಥಿತರಿದ್ದು ಸಲಹೆ ಸೂಚನೆಗಳನ್ನು ನೀಡುವ ಮೂಲಕ ಕನ್ನಡ ಸಾಹಿತ್ಯ ಸಮ್ಮೇಳನದ ಯಶಸ್ಸಿಗೆ ಸಹಕಾರ ನೀಡಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಗೌರವ ಕಾರ್ಯದರ್ಶಿ ಎಸ್.ಐ. ಮುನೀರ್ ಅಹಮದ್ ಪತ್ರಿಕಾ ಹೇಳಿಕೆಯ ಮೂಲಕ ಮನವಿ ಮಾಡಿದ್ದಾರೆ.

3,14,296 ಮಂದಿ ಬೂಸ್ಟರ್ ಡೋಸ್ ಲಸಿಕೆ ಪಡೆಯಲು ಮನವಿ



ಮಡಿಕೇರಿ, ಜ.29– 18 ವರ್ಷ ಮೇಲ್ಪಟ್ಟ ಎಲ್ಲಾ ಸಾರ್ವಜನಿಕರಿಗೆ ಉಚಿತವಾಗಿ ಎರಡನೆಯ ವರಸೆಯ ಹಾಗೂ ಮುಂಜಾಗ್ರತಾ ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕೊಡಗು ಜಿಲ್ಲೆಯಲ್ಲಿ ಎಲ್ಲಾ ಆರೋಗ್ಯ ಕೇಂದ್ರಗಳ ಲಸಿಕಾ ವಿಭಾಗದಲ್ಲಿ ಕೋವಿಡ್ ಲಸಿಕೆಯನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ. ಜಿಲ್ಲೆಯಲ್ಲಿ ಎರಡನೇ ವರಸೆಯ ಒಟ್ಟು 10,707 ಫಲಾನುಭವಿಗಳು ಹಾಗೂ ಎರಡನೇ ವರಸೆಯ ಕೋವಿಡ್ ಲಸಿಕೆಯನ್ನು ಪಡೆದು 6 ತಿಂಗಳು ಪೂರೈಸಿರುವ 18 ವರ್ಷ ಮೇಲ್ಪಟ್ಟ ಒಟ್ಟು 3,14,296 ಫಲಾನುಭವಿಗಳು ಮುಂಜಾಗ್ರತಾ ಕೋವಿಡ್ ಲಸಿಕಾಕರಣಕ್ಕೆ ಬಾಕಿ ಇದ್ದು, ಈ ಎಲ್ಲಾ ಅರ್ಹರು ತಮ್ಮ ಸಮೀಪದ ಆರೋಗ್ಯ ಕೇಂದ್ರದಲ್ಲಿ ಪ್ರತಿ ದಿನ ನಡೆಯುವ ಲಸಿಕಾ ಶಿಬಿರದಲ್ಲಿ ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆ ಪಡೆಯುವಂತೆ ಕೊಡಗು ಜಿಲ್ಲಾಡಳಿತ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಂಟಿ ಹೇಳಿಕೆಯಲ್ಲಿ ತಿಳಿಸಿದೆ.

ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ಸಾರ್ವಜನಿಕ ಆಸ್ಪತ್ರೆಯಲ್ಲಿ ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಗಳು ಲಭ್ಯವಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಆರ್.ವೆಂಕಟೇಶ್ ಅವರು ಕೋರಿದ್ದಾರೆ.

ಸ್ವಚ್ಛತೆಗೆ ಮುಂದಾದ ಗ್ರಾಪಂ ಉಪಾಧ್ಯಕ್ಷ; ಜನರಿಂದ ಮೆಚ್ಚುಗೆ

ಟ್ರಾಕ್ಟರ್ ಮೂಲಕ ಊರು ಸುತ್ತಿ ಕಸ ಸಂಗ್ರಹ



ಸಿದ್ದಾಪುರ, ಜ.29– ನಾಪೋಕ್ಲು ಪಟ್ಟಣದಲ್ಲಿ ತ್ಯಾಜ್ಯ ವಿಲೇವಾರಿ ಸಮಸ್ಯೆ ನಿವಾರಣೆಗಾಗಿ ಗ್ರಾಪಂ ಉಪಾಧ್ಯಕ್ಷರೇ ಪಟ್ಟಣ ಸುತ್ತ–ಮುತ್ತ ಟ್ರ್ಯಾಕ್ಟರ್ ಮೂಲಕ ಸಂಚರಿಸಿ ತ್ಯಾಜ್ಯ ಸಂಗ್ರಹಿಸುವ ಮೂಲಕ ಸ್ವಚ್ಛತೆಗೆ ಆದ್ಯತೆ ನೀಡಿ ಮಾದರಿಯಾಗಿದ್ದಾರೆ.

ಇತ್ತೀಚೆಗೆ ನಾಪೋಕ್ಲು ಗ್ರಾಪಂ ಪೌರಕಾರ್ಮಿಕನಾಗಿ ಕಾರ್ಯನಿರ್ವಹಿಸುತ್ತಿದ್ದ ವಿಶ್ವನಾಥ್ ಕಳೆದ ಕೆಲ ದಿನಗಳ ಹಿಂದೆ ವಾಹನ ಅಪಘಾತದಲ್ಲಿ ಗಂಭೀರ ಗಾಯಗೊಂಡು ಆಸ್ಪತ್ರೆ ದಾಖಲಾದ ಹಿನ್ನೆಲೆಯಲ್ಲಿ ನಗರ ಮತ್ತು ಸುತ್ತಮುತ್ತಲಿನ ಮನೆಗಳ ಕಸವಿಲೇವಾರಿ ಸಮಸ್ಯೆ ಎದುರಾಗಿತ್ತು.

ವಿಷಯ ತಿಳಿದ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಟಿ.ಎ.ಮಹಮ್ಮದ್ ಪಂಚಾಯಿತಿಯ ಟ್ರ್ಯಾಕ್ಟರ್ ಅನ್ನು ಸ್ವತಃ ತಾವೇ ಚಲಾಯಿಸುವ ಮೂಲಕ ಓರ್ವ ಕೂಲಿ ಕಾರ್ಮಿಕರನ್ನು ಕರೆದುಕೊಂಡು ಕಸವನ್ನು ಸಂಗ್ರಹಿಸುವ ಮೂಲಕ ನಗರ ಸ್ವಚ್ಛತೆಗೆ ಮುಂದಾಗಿದ್ದಾರೆ. ಪಂಚಾಯತಿಯಲ್ಲಿ ಸ್ವಚ್ಛತೆಗೆ ಕಾರ್ಮಿಕರ ಕೊರತೆ ಇದ್ದು ನಗರ ಮತ್ತು ಸುತ್ತಮುತ್ತಲು ಪ್ರತಿದಿನ ತ್ಯಾಜ್ಯ ಸಂಗ್ರಹಣೆ ವಾಹನ ಬರಲು ವಿಳಂಬವಾಗಬಹುದು. ಅದ್ದರಿಂದ ಮನೆ ಮತ್ತು ಅಂಗಡಿಗಳ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಬಿಸಾಡದೆ ಸ್ವಚ್ಛತೆಯನ್ನು ಕಾಪಾಡಲು ಗ್ರಾಮ ಪಂಚಾಯಿತಿಯೊಂದಿಗೆ ಸಾರ್ವಜನಿಕರು ಸಹಕರಿಸಬೇಕೆಂದು ಉಪಾಧ್ಯಕ್ಷ ಮಹಮ್ಮದ್ ಮನವಿ ಮಾಡಿದ್ದಾರೆ.

ಚಾ.ನಗರದಲ್ಲಿ ಭೀಮ ಯುವ ಪ್ರಶಸ್ತಿ ಪ್ರದಾನ

ಅಂಬೇಡ್ಕರ್ ಸಿದ್ಧಾಂತದ ದಲಿತರ ಹಿತ ಕಾಪಾಡುವವರನ್ನು ಗೌರವಿಸಿ: ಡಿ.ಚಂದ್ರಶೇಖರಯ್ಯ



ಚಾಮರಾಜನಗರ, ಜ.29– ಅಂಬೇಡ್ಕರ್ ಸಿದ್ಧಾಂತದ ದಲಿತರ ಹಿತ ಕಾಪಾಡುವ ವ್ಯಕ್ತಿಗಳನ್ನು ಗುರುತಿಸಬೇಕಾಗಿದೆ ಎಂದು ಬೆಂಗಳೂರು ಪ್ರದೇಶ ಅಭಿವೃದ್ಧಿ ಮಂಡಳಿ ಯೋಜನಾ ಇಲಾಖೆ ನಿರ್ದೇಶಕ ಡಿ.ಚಂದ್ರಶೇಖರಯ್ಯ ತಿಳಿಸಿದರು.

ರಂಗವಾಹಿನಿ ಸರ್ವೋದಯ ಡಾ. ಬಿ.ಆರ್. ಅಂಬೇಡ್ಕರ್ ಯುವಕರ ಸಂಘ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಅಂಬೇಡ್ಕರ್ ಬಡಾವಣೆಯಲ್ಲಿ ನಡೆದ ಅಂಬೇಡ್ಕರ್ ಹಬ್ಬದ ಸಮಾರೋಪ ಮತ್ತು ಭೀಮ ಯುವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಬಾಬಾ ಸಾಹೇಬರ ಜೀವನ ಚರಿತ್ರೆಯನ್ನು ಓದಿದರೆ ಬಹು ದೊಡ್ಡ ಘನತೆ ಮತ್ತು ಮಹಾ ಮಾನವತವಾದಗಳನ್ನು ಕಲಿಸಿಕೊಡುತ್ತದೆ. ಅಂಬೇಡ್ಕರ್ ಸಿದ್ಧಾಂತವನ್ನು ಅಳವಡಿಸಿಕೊಂಡು ಸಾಂಸ್ಕೃತಿಕವಾಗಿ ಗಟ್ಟಿಯಾಗಬೇಕು. ದಲಿತರ ಪೈಕಿ ಶೇ.2 ರಷ್ಟು ಜನ ಮಾತ್ರ ಮೇಲೆ ಬಂದಿದ್ದಾರೆ. ಅವರನ್ನು ನಿರ್ನಾಮ ಮಾಡುವ ಕೆಲಸ ನಡೆಯುತ್ತಿದೆ ಎಂದು ಹೇಳಿದರು. ಜಿಲ್ಲೆಯು ಜಾನಪದ ಕಲೆಗಳ ತವರೂರು. ಆದ್ದರಿಂದ ಅದರ ಅಭಿವೃದ್ಧಿಗೆ ಸರ್ಕಾರ ಒಂದು ಕೋಟಿ ಅನುದಾನ ನೀಡಿ ಪ್ರತಿ ವರ್ಷ ಚಾಮರಾಜನಗರ ಜಿಲ್ಲಾ ಉತ್ಸವವನ್ನು ನಡೆಸಬೇಕು ಎಂದು ತಿಳಿಸಿದರು.

ನಗರಸಭಾ ಮಾಜಿ ಅಧ್ಯಕ್ಷ ನಂಜುಂಡಸ್ವಾಮಿ, ರಂಗವಾಹಿನಿ ಅಧ್ಯಕ್ಷ ಸಿಎಂ ನರಸಿಂಹಮೂರ್ತಿ, ಕಾರ್ಯದರ್ಶಿ ಸಿ.ಎಂ. ರಾಘವೇಂದ್ರ, ನಗರಸಭಾ ಸದಸ್ಯರಾದ ಚಿನ್ನಮ್ಮ, ಸಿದ್ದರಾಮಯ್ಯ, ಕಲಾವತಿ, ರವಿಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಗುರುಲಿಂಗಯ್ಯ, ಪ್ರಗತಿಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಎಂ. ಕೃಷ್ಣಮೂರ್ತಿ, ಜಿಲ್ಲಾ ಎಸ್‌ಸಿ, ಎಸ್‌ಟಿ ಶಿಕ್ಷಕರ ಸಂಘದ ಅಧ್ಯಕ್ಷ ಸಿ.ಕೆ. ರಾಮಸ್ವಾಮಿ, ಯಜಮಾನರುಗಳಾದ ಮಾತು ರಾಜಣ್ಣ, ನಂಜುಂಡಯ್ಯ, ಶಿವಣ್ಣ ಗುರುಸ್ವಾಮಿ, ಮಹದೇವಯ್ಯ, ಬಂಗಾರು ಮಲ್ಲಿಕಾರ್ಜುನ ಸೇರಿದಂತೆ ಸರ್ವೋದಯ ಡಾ. ಬಿ.ಆರ್.ಅಂಬೇಡ್ಕರ್ ಯುವಕ ಸಂಘದ ಪದಾಧಿಕಾರಿಗಳು ಮತ್ತು ಬಡಾವಣೆಯ ನಿವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಇದಕ್ಕೂ ಮೊದಲು ಬಾಬಾ ಸಾಹೇಬರ ಭಾವಚಿತ್ರದೊಂದಿಗೆ ಗೊರವರ ಕುಣಿತ ಸುಗ್ಗಿ ಕುಣಿತ ಕಂಸಾಳೆ ನೃತ್ಯ ತಮಟೆ ವಾದನ ಮಂಗಳವಾದ್ಯಗಳ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆಯನ್ನು ದಲಿತ ಮಹಾಸಭಾದ ವೆಂಕಟರಮಣ ಸ್ವಾಮಿ ಪಾಪು ಉದ್ಘಾಟಿಸಿದರು.

ರಾತ್ರಿ ತುಮಕೂರಿನ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಾ.ಲಕ್ಷ್ಮಣದಾಸ್ ಅವರು ನಡೆಸಿಕೊಟ್ಟ ಅಂಬೇಡ್ಕರ್ ಜನ ಕಥಾ ಕೀರ್ತನೆ ಜನರನ್ನು ರಂಜಿಸಿತು.

ಭೀಮ ಯುವ ಪ್ರಶಸ್ತಿ ಪ್ರದಾನ: ಇದೇ ಸಂದರ್ಭದಲ್ಲಿ ಅಂಬೇಡ್ಕರ್ ಬಡಾವಣೆಯ ಉಮೇಶ್ ಕುದರ್ ಮಹದೇವಸ್ವಾಮಿ ಸಿಎಂ ಮುರುಗೇಶ್ ಕುಮಾರ್ ರವಿಚಂದ್ರನ್ ಪ್ರಸಾದ್ ಮುರುಳಿ ಕೃಷ್ಣಸ್ವಾಮಿ ಅವರನ್ನು ಇದೇ ಸಂದರ್ಭದಲ್ಲಿ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು.

ಮೈಸೂರು ಅರಮನೆಗೂ ಬಿಆರ್‌ಟಿ ಅರಣ್ಯಕ್ಕೂ ಅವಿನಾಭಾವ ಸಂಬಂಧವಿದೆ

ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್



ಚಾಮರಾಜನಗರ, ಜ.29– ಮೈಸೂರು ಅರಮನೆಗೂ ಬಿಆರ್‌ಟಿ ಅರಣ್ಯಕ್ಕೂ ಅವಿನಾಭಾವ ಸಂಬಂಧವಿದೆ ಎಂದು ಮೈಸೂರು ಸಂಸ್ಥಾನದ ಮಹಾರಾಜ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಕೆ.ಗುಡಿಯಲ್ಲಿ ಆಯೋಜಿಸಿದ್ದ ಪಕ್ಷಿ ಸಮೀಕ್ಷೆ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಅಮೇಜಾನ್ ಅರಣ್ಯ ಬಿಟ್ಟರೆ ಪಶ್ಚಿಮ ಘಟ್ಟದಲ್ಲಿ ಬರುವ ಬಿಆರ್‌ಟಿ ಅರಣ್ಯ 2ನೇ ಸ್ಥಾನದಲ್ಲಿದೆ. ಪಕ್ಷಿ ಸಮೀಕ್ಷೆ ಉತ್ತಮ ಕೆಲಸ. ಮೈಸೂರು ಸಂಸ್ಥಾನದ ವಂಶಸ್ಥರು ಬಿಳಿಗಿರಿರಂಗನಾಥ ಸ್ವಾಮಿ ದೇವಸ್ಥಾನ, ಬೂದಿಪಡಗ ಸೇರಿದಂತೆ ಅರಣ್ಯದ ಇತರೆ ಕಡೆಗಳಿಗೆ ಬರುವ ಪದ್ಧತಿ ಇತ್ತು ಅದು ಈಗಲೂ ಮುಂದುವರಿಯುತ್ತಿದೆ. 25 ವರ್ಷಗಳ ಹಿಂದೆ ಈ ಕಡೆ ಬಂದಿದ್ದೆ. ಅರಣ್ಯ ಕಡೆ ಬಂದಾಗ ತುಂಬಾ ಖುಷಿ ಆಗುತ್ತದೆ ಎಂದರು.

ಚಾಮರಾಜನಗರ ಜಿಲ್ಲೆ ಆರಣ್ಯದಿಂದ ಕೂಡಿದೆ. ಇಂತಹ ಪ್ರದೇಶಗಳಿಗೆ ಬರುವುದರಿಂದ ಸಂತೋಷವಾಗುತ್ತದೆ. ಪಕ್ಷಿಗಳ ಸಮೀಕ್ಷೆ ಎರಡು ದಿನಗಳು ಭಾಗವಹಿಸಿರುವ ಪ್ರತಿಯೊಬ್ಬರು ಸಂತೋಷ ವ್ಯಕ್ತಪಡಿಸಿದ್ದಾರೆ. ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರೆ ಅನುಭವ ಹೆಚ್ಚಾಗುತ್ತದೆ. ಎಂದು ಹೇಳಿದರು.

ಬಿಆರ್‌ಟಿ ಹುಲಿ ಯೋಜನೆ ನಿರ್ದೇಶಕಿ ದೀಪ್ ಜೆ.ಕಂಟ್ರಾಕ್ಟರ್ ಮಾತನಾಡಿ, 2012 ರಲ್ಲಿ ನಡೆದ ಪಕ್ಷಿ ಸಮೀಕ್ಷೆಯಲ್ಲಿ 272 ಪಕ್ಷಿಗಳು ಕಂಡುಬಂದಿದ್ದವು. ಈಗ 274 ಪಕ್ಷಿಗಳು ಸಮೀಕ್ಷೆಯಲ್ಲಿ ಕಾಣಿಸಿಕೊಂಡಿವೆ.

ಈ ಬಾರಿ 274 ಪಕ್ಷಿ ಪ್ರಭೇದಗಳ ಪತ್ತೆ

ಈ ಬಾರಿ 4 ದಿನ ಮಾತ್ರ ನೋಂದಣಿಗೆ ಅವಕಾಶ ಕಲ್ಪಿಸಲಾಗಿತ್ತು. 300 ಕ್ಕೂ ಹೆಚ್ಚು ಜನರು ನೋಂದಣಿ ಮಾಡಿಕೊಂಡಿದ್ದರು ಎಂದು ತಿಳಿಸಿದರು.

ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಮಲ್ಲೇಶಪ್ಪ ಮಾತನಾಡಿ, 1939 ರಲ್ಲಿ ಪಕ್ಷಿ ಪ್ರೇಮಿ ಸಲೀಂ ಅಲಿ ಅವರು ಬಿಆರ್‌ಟಿ ಅರಣ್ಯಕ್ಕೆ ಆಗಮಿಸಿ ಸಮೀಕ್ಷೆ ನಡೆಸಿದ್ದರು. ಆಗ ಇಲ್ಲಿ 139 ಪಕ್ಷಿಗಳು ಕಂಡುಬಂದಿದ್ದವು. ಆ ನಂತರ ಅರಣ್ಯ ಇಲಾಖೆ ನಡೆಸಿದ ಸಮೀಕ್ಷೆಯಲ್ಲಿ 139 ಪಕ್ಷಿಗಳು ಕಾಣಿಸಿದ್ದವು. ಈ ಬಾರಿ 50 ಸ್ವಯಂ ಸೇವಕರಿಗೆ ಅವಕಾಶ ಕಲ್ಪಿಸಲಾಗಿತ್ತು. 25 ತಂಡ ಗಳಾಗಿ ಮಾಡಲಾಗಿತ್ತು. ಗೇಮ್ ರಸ್ತೆ ಹಾಗೂ ಮುಖ್ಯ ರಸ್ತೆಗಳಲ್ಲಿ ಸಮೀಕ್ಷೆ ಮಾಡಲಾಗಿತ್ತು. ಅಲ್ಲದೇ ನೀರು ಇರುವ ಕಡೆಗಳಲ್ಲಿ ಸಮೀಕ್ಷೆ ನಡೆಸಲಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸ್ವಯಂ ಸೇವಕರಿಗೆ ಪ್ರಮಾಣಪತ್ರ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಮೈಸೂರು ಕಾರ್ಯಯೋಜನೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಮಹೇಶ್ ಕುಮಾರ್, ಎಸಿಎಫ್ ಗಳಾದ ಮಹದೇವಯ್ಯ, ಸುರೇಶ್ ಇತರರಿದ್ದರು.

ಮಹಿಳೆಯೊಂದಿಗೆ ಅನುಚಿತ ವರ್ತನೆ ಪೊಲೀಸ್ ಪೇದೆ ಅಮಾನತು

ಚಾಮರಾಜನಗರ, ಜ.29– ಮಹಿಳೆಯೊಂದಿಗೆ ಅನುಚಿತವಾಗಿ ವರ್ತಿಸಿದ ಆರೋಪದ ಮೇರೆಗೆ ಪೊಲೀಸ್ ಪೇದೆಯೊಬ್ಬರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಚಾಮರಾಜನಗರ ಪೂರ್ವ ಪೊಲೀಸ್ ಠಾಣೆಯ ಪೇದೆಯಾದ ಮುನಿಯಪ್ಪ ಅಮಾನತುಗೊಂಡವರು.

ಎರಡು ದಿನಗಳ ಹಿಂದೆ ಸಿಮ್ಸ್ ಆಸ್ಪತ್ರೆಗೆ ಬಂದಿದ್ದ ಹನೂರು ತಾಲೂಕಿನ ಮಹಿಳೆಯೊಬ್ಬರನ್ನು ಮುನಿಯಪ್ಪ ತಮ್ಮ ವಸತಿ ಗೃಹಕ್ಕೆ ಕರೆದುಕೊಂಡು ಹೋಗಿ ಅವರೊಂದಿಗೆ ಅನುಚಿತವಾಗಿ ವರ್ತಿಸಿದ್ದರು ಎಂದು ಆರೋಪಿಸಲಾಗಿದೆ.

ಆ ಬಳಿಕ ಅಸ್ವಸ್ಥಗೊಂಡ ಮಹಿಳೆಯನ್ನು ಸಿಮ್ಸ್ ಆಸ್ಪತ್ರೆಯಲ್ಲಿ ಬಿಟ್ಟು ಹೋಗಿದ್ದರು. ಮಹಿಳೆಗೆ ಚಿಕಿತ್ಸೆ ನೀಡಿದ್ದ ವೈದ್ಯರು ಪೊಲೀಸರಿಗೆ ಮಾಹಿತಿ ನೀಡಿದ್ದರು.

ಈ ಸಂಬಂಧ ಮಹಿಳೆ ದೂರು ನೀಡಿಲ್ಲ. ಆದರೆ, ಆಸ್ಪತ್ರೆಯಿಂದ ಠಾಣೆಗೆ ಬಂದ ಎಂಎಲ್‌ಸಿ (ಮೆಡಿಕಲ್ ಲೀಗಲ್ ಕೇಸ್) ಆಧಾರದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್ ಅವರು ಮುನಿಯಪ್ಪ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

ಪ್ರಕರಣದ ಬಗ್ಗೆ ಆಸ್ಪತ್ರೆಯ ವೈದ್ಯಾಧಿಕಾರಿಗಳನ್ನು ವಿಚಾರಿಸಿದಾಗ, ಮಹಿಳೆ ಅಸ್ವಸ್ಥಗೊಂಡು ಬಂದಿರುವುದು ನಿಜ. ನಾವು ಚಿಕಿತ್ಸೆಯನ್ನೂ ನೀಡಿದ್ದೇವೆ. ತಾನು ಬಿದ್ದು ಅಸ್ವಸ್ಥಗೊಂಡೆ ಎಂದು ಹೇಳಿಕೆ ನೀಡಿದ್ದಾರೆ ಎಂದರು.

ಮಹಿಳೆ ನಮಗೆ ದೂರು ಕೊಟ್ಟಿಲ್ಲ. ಆದರೆ ನಮ್ಮ ಸಿಬ್ಬಂದಿಯೊಬ್ಬರು ಆಕೆಯೊಂದಿಗೆ ಅಸಭ್ಯವಾಗಿ ನಡೆದುಕೊಂಡಿರುವ ಮಾಹಿತಿ, ಅದಕ್ಕೆ ಪೂರಕ ದಾಖಲೆ ನಮಗೆ ಸಿಕ್ಕಿದೆ. ಹಾಗಾಗಿ, ಸ್ವಯಂ ಪ್ರೇರಿತವಾಗಿ ಈ ಕ್ರಮ ತೆಗೆದುಕೊಂಡಿದ್ದೇವೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ್ ತಿಳಿಸಿದರು.

ಚನ್ನಪ್ಪನಪುರದ ಬಳಿ ಜಮೀನಿಗೆ ಆನೆಗಳ ದಾಳಿ; ಶಾಸಕರ ಭೇಟಿ, ಪರಿಶೀಲನೆ



ಚಾಮರಾಜನಗರ ಜ.29– ತಾಲೂಕಿನ ಚನ್ನಪ್ಪನಪುರ ಗ್ರಾಮದಲ್ಲಿನ ರೈತರ ಜಮೀನಿಗೆ ಕಾಡಾನೆಗಳು ದಾಳಿಯಿಟ್ಟು ಫಸಲು ನಾಶ ಮಾಡಿದ ಹಿನ್ನೆಲೆಯಲ್ಲಿ ಕ್ಷೇತ್ರದ ಶಾಸಕ ಸಿ.ಪುಟ್ಟರಂಗಶೆಟ್ಟಿ ಗ್ರಾಮದ ರೈತ ಮಹದೇವಸ್ವಾಮಿ ಅವರ ಜಮೀನಿಗೆ ಭೇಟಿ ನೀಡಿ ಬೆಳೆಹಾನಿ ಪರಿಶೀಲಿಸಿದರು.

ಇದೇ ವೇಳೆ ರೈತ ಮಹದೇವಸ್ವಾಮಿ ಕಳೆದ ವರ್ಷ 25 ಸಸಿಗಳನ್ನು ಕಾಡಾನೆಗಳು ತುಳಿದು ನಾಶ ಮಾಡಿದ್ದವು. ಈ ವರ್ಷವೂ ಅದು ಮುಂದುವರೆದಿದ್ದು, ಫಲ ಬಿಡುವ ತೆಂಗಿನಮರಗಳನ್ನು ಬುಡಸಮೇತ ನೆಲಕ್ಕುರುಳಿಸಿವೆ. ಇದರಿಂದ ಸಾಲಸೋಲ ಮಾಡಿದ ಬೆಳೆಗಳು ಕೈಗೆಟುಕದಂತಾಗಿವೆ. ಕೂಡಲೇ ಸಂಬಂಧಪಟ್ಟ ಅರಣ್ಯಇಲಾಖೆ ಅಧಿಕಾರಿಗಳು ಕಾಡಾನೆಗಳು ರೈತರ ಜಮೀನಿಗೆ ಬಾರದಂತೆ ತಡೆಗಟ್ಟಬೇಕು. ನಮ್ಮ ಜಮೀನಿನ ಮೇಲೆ ವಿದ್ಯುತ್ ತಂತಿ ಹಾದು ಹೋಗಿದ್ದು ಅದು ನೆಲಕ್ಕೆ ಬಾಗಿ ಜೋತು ಬಿದ್ದಿದೆ. ಕಾಡುಪ್ರಾಣಿಗಳು ಜಮೀನಿಗೆ ಲಗ್ಗೆ ಇಟ್ಟಲ್ಲಿ ತಂತಿ ತಗುಲಿ ಅವು ಸಾವಿಗೀಡಾಗಬಹುದು, ಇದರಿಂದ ನಮಗೆ ತೊಂದರೆಯಾಗುವ ಸಾಧ್ಯತೆ ಹೆಚ್ಚು, ಜೋತು ಬಿದ್ದಿರುವ ತಂತಿಯನ್ನು ಸರಿಪಡಿಸಲು ಸೆಸ್ಕ್ ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದು ಶಾಸಕರಿಗೆ ಮನವಿ ಮಾಡಿದರು.

ಶಾಸಕರು ಪ್ರತಿಕ್ರಿಯಿಸಿ ಕಳೆದ ಒಂದುವಾರದ ಹಿಂದೆ ಹೊನ್ನಹಳ್ಳಿ, ವಡ್ಗಲ್‌ಪುರದ ಬಳಿ ಕಾಡಾನೆಗಳ ಹಿಂಡು ದಾಳಿಮಾಡಿ, ರೈತರ ಬೆಳೆ ನಾಶ ಮಾಡಿದ್ದವು. ಇದೇ ಸಂದರ್ಭದಲ್ಲಿ ಕಾಡಾನೆಗಳನ್ನು ಓಡಿಸುವಾಗ ವಾಚರ್ ಕಾಡಾನೆ ದಾಳಿಗೆ ಮೃತಪಟ್ಟಿದ್ದ, ಕಾಡಾನೆ ಹಾವಳಿ ನಿಯಂತ್ರಣ ಸಂಬಂಧ ಹಿಂದೆ ವಿಧಾನಸಭೆ ಅಧಿವೇಶನದಲ್ಲಿ ಸರಕಾರದ ಗಮನಸೆಳೆದಿದ್ದೆ, ಕೂಡಲೇ ಅರಣ್ಯ ಇಲಾಖೆಯವರು ಕಾರ್ಯಪ್ರವೃತ್ತರಾಗಿ ರೈತರ ಜಮೀನಿಗೆ ಕಾಡಾನೆ ನುಗ್ಗದಂತೆ ಕ್ರಮವಹಿಸಬೇಕು ಎಂದು ಸ್ಥಳದಲ್ಲಿ ಹಾಜರಿದ್ದ ಅರಣ್ಯಾಧಿಕಾರಿಗಳಿಗೆ ಸೂಚನೆ ನೀಡಿದರು.

ಇದೇವೇಳೆ ಶಾಸಕರು ರೈತಮಹದೇವಸ್ವಾಮಿಗೆ ವೈಯಕ್ತಿಕ ಪರಿಹಾರ ವಿತರಿಸಿದರು. ಎಸಿಎಫ್ ಸುರೇಶ್, ಗ್ರಾಪಂ ಮಾಜಿ ಸದಸ್ಯ ಪ್ರಸಾದ್ ಹಾಜರಿದ್ದರು.

ಇಂದು ಓಂಕಾರ ಸಿದ್ದೇಶ್ವರಸ್ವಾಮಿ ಜಾತ್ರೆ

ಬೇಗೂರು, ಜ.29– ಸಮೀಪದ ಹೊಣಕನಪುರ ಗ್ರಾಮದ ಓಂಕಾರ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಸೋಮವಾರ (ಜ.30) ವಿಜೃಂಭಣೆಯಿಂದ ನಡೆಯಲಿದ್ದು, ಜಾತ್ರೆಗೆ ನಂಜನಗೂಡು ಮತ್ತು ಗುಂಡ್ಲುಪೇಟೆ ತಾಲೂಕಿನ 33ಕ್ಕೂ ಹೆಚ್ಚು ಗ್ರಾಮಗಳ ಸಾವಿರಾರು ಜನ ಪಾಲ್ಗೊಳ್ಳಲಿದ್ದಾರೆ. ಗ್ರಾಮಗಳು ಈಗಾಗಲೇ ಜಾತ್ರೆಗೆ ಸಜ್ಜುಗೊಳ್ಳುತ್ತಿದ್ದು, ಜಾತ್ರೆಗೆ ಬರುವ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಜಾತ್ರಾ ಸಮಿತಿ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ.

ಶೃಂಗಾರಗೊಂಡ ದೇವಾಲಯ: ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಹೊಣಕನಪುರ ಗ್ರಾಮದ ಹೊರವಲಯದಲ್ಲಿರುವ ಓಂಕಾರ ಸಿದ್ದೇಶ್ವರ ಸ್ವಾಮಿ ದೇವಾಲಯ ಮತ್ತು ಹೊಣಕನಪುರ, ಯಡವನಹಳ್ಳಿ, ಹೊರೆಯಾಲ ಗ್ರಾಮಗಳೂ ನವವಧುವಿನಂತೆ ಸಿಂಗಾರಗೊಳ್ಳುತ್ತಿದ್ದು ದೇವಾಲಯ ಸುಣ್ಣಬಣ್ಣದಿಂದ ಕಂಗೊಳಿಸುತ್ತಿದೆ. ಜಾತ್ರೆಗೆ ಸುತ್ತಮುತ್ತಲ ಗ್ರಾಮಸ್ಥರನ್ನು ಮತ್ತು ಭಕ್ತರನ್ನು ಆಕರ್ಷಿಸುತ್ತಿದೆ.

ಮಹದೇಶ್ವರ ಸ್ನೇಹ ಬಳಗದ ವಾರ್ಷಿಕೋತ್ಸವ



ಕೊಳ್ಳೇಗಾಲ, ಜ.29– ಕೊಳ್ಳೇಗಾಲದ ಶ್ರೀ ಮಹದೇಶ್ವರ ಸ್ನೇಹ ಬಳಗದ ಮೂರನೇ ವರ್ಷದ ವಾರ್ಷಿಕ ಮಹಾಸಭೆಯು ಮಧುವನಹಳ್ಳಿಯ ಮಂಜುಳಾ ಫಾರ್ಮ್‌ನಲ್ಲಿ ಭಾನುವಾರ ಮಧ್ಯಾಹ್ನ ಜರುಗಿತು.

ಹಿಂದಿನ ಪದಾಧಿಕಾರಿಗಳಾಗಿದ್ದ ಅಧ್ಯಕ್ಷ ಶಾಂತರಾಜು, ಪ್ರಧಾನ ಕಾರ್ಯದರ್ಶಿ ಉಮೇಶ್, ಖಜಾಂಚಿ ಮಲ್ಲರಾಜು, ಸತೀಶ್ ಇನ್ನಿತರರನ್ನು ಮುಂದುವರೆಸಲು ಒಮ್ಮತದ ನಿರ್ಣಯ ಕೈಗೊಳ್ಳಲಾಯಿತು. ಪ್ರಾರಂಭದಲ್ಲಿ ಕೇಕ್ ಕತ್ತರಿಸಿ 3ನೇ ವರ್ಷದ ವಾರ್ಷಿಕೋತ್ಸವ ಆಚರಿಸಿದ ಬಳಿಕ ಕಾರ್ಯದರ್ಶಿ ಉಮೇಶ್ ಮಾತನಾಡಿ, ಈ ಬಾರಿ ಸಂಘಕ್ಕೆ 74 ಸಾವಿರಕ್ಕೂ ಅಧಿಕ ಲಾಭ ದೊರೆತಿದ್ದು ಸಂಘದಲ್ಲಿ 6.46 ಲಕ್ಷ ಷೇರು ಹಣ ಉಳಿತಾಯ ಮಾಡಲಾಗಿದೆ ಎಂದರು.

ಸಂಘದ ಬಲವರ್ಧನೆಗೆ ಎಲ್ಲರೂ ಶ್ರಮಿಸಬೇಕು ಎಂದರು. ಈ ಸಂದರ್ಭದಲ್ಲಿ ಗುರುಸ್ವಾಮಿ, ಶಿವಮೂರ್ತಿ, ಬಾಲಕೃಷ್ಣೇಗೌಡ, ಕಾಮಗೆರೆ ರಾಜು, ನಂಜುಂಡೇಗೌಡ, ಆಲಹಳ್ಳಿ ನಂಜುಂಡಸ್ವಾಮಿ, ಕುಣಗಳ್ಳಿ ಮಂಜುನಾಥ್, ಕೆಂಡಗಣ್ಣಸ್ವಾಮಿ, ಶ್ರೀಕಂಠಸ್ವಾಮಿ, ನಾಗೇಶ್, ರಂಗಸ್ವಾಮಿ, ಪಾಳ್ಯ ಸೀಗನಾಯಕ, ಶಿವಕುಮಾರ್, ಬಸ್ತಿಪುರ ರೇವಣ್ಣ ಮೂರ್ತಿ, ಸತೀಶ್, ವೆಂಕಟರಾಜು, ಮಲ್ಲು, ಚಾಮರಾಜು, ತುಳಸಿಯನ್, ಚಾ.ನಗರ ಶಂಕರ್, ಸೋಮಣ್ಣ, ಕೆಪಿ ಬಾಲು, ಶ್ರೀಕಂಠು, ನಾಗೇಂದ್ರಸ್ವಾಮಿ ಇನ್ನಿತರರು ಇದ್ದರು

ಒಂದನೇ ಪುಟದಿಂದ

ವಿಷ್ಣುವರ್ಧನ್ ಸ್ಮಾರಕ ಲೋಕಾರ್ಪಣೆ

ನಟರಾಗಿ ಕನ್ನಡಗರ ಜನಮನ ಗೆದ್ದ ವಿಷ್ಣುವರ್ಧನ್, ಅನೇಕ ಪೌರಾಣಿಕ, ಸಾಮಾಜಿಕ, ಸಾಹಸಮಯ ಚಿತ್ರಗಳಲ್ಲಿ ನಟಿಸಿ 'ಸಾಹಸಸಿಂಹ'ರಾಗಿ ನಾಲ್ಕು ದಶಕಗಳ ಕಾಲ ಕನ್ನಡಿಗರ, ಮನೆ ಮನದಲ್ಲಿ ನೆಲೆಸಿದ್ದಾರೆ. ಹಲವು ಭಾಷೆಗಳಲ್ಲಿ ನಟಿಸಿ, ರಾಜ್ಯದ ಧ್ವಜವನ್ನು ಎತ್ತಿ ಹಿಡಿದವರು. ಯಾವುದೇ ಪಾತ್ರ ನೀಡಿದರೂ ನೈಜವಾಗಿ ಅಭಿನಯಿಸಿದವರು. ಅವರ ಪ್ರತಿಯೊಂದು ನಟನೆ, ಸಂಭಾಷಣೆಗಳು ಇಂದಿಗೂ ಅಭಿಮಾನಿಗಳ ಮನದಲ್ಲಿ ಜೀವಂತವಾಗಿದೆ ಎಂದು ನುಡಿದರು. ಹಿರಿಯ ನಟಿ ಭಾರತಿ ಅವರನ್ನು ಬಾಳ ಸಂಗಾತಿಯಾದ ಬಳಿಕ ವಿಷ್ಣುವರ್ಧನ್ ಬಹಳ ದೊಡ್ಡ ಸಾಧನೆ ಮಾಡಿದರು. ವಿಷ್ಣು ಭಾವುಕ ಜೀವಿ. ಮಾನವೀಯತೆ ಮೆರೆದವರು. ವಿಷ್ಣು ಸ್ಮಾರಕದ ಸ್ಥಳದ ವಿಚಾರ ದೊಡ್ಡ ವಿವಾದವಾಗಿತ್ತು. ಆಗ ವಿಷ್ಣು ಸ್ಮಾರಕ ಮೈಸೂರಿನಲ್ಲೇ ಆಗಬೇಕೆಂದು ಭಾರತಿ ದಿಟ್ಟ ನಿಲುವು ಹೊಂದಿದ್ದರು. ನಂತರ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ 11 ಕೋಟಿ ರೂ. ನೀಡಿ, ಸ್ಮಾರಕ ನಿರ್ಮಾಣವಾಗಿದೆ. ಇದಕ್ಕಾಗಿ ಯಡಿಯರೂಪ್ಪ ಅವರಿಗೆ ಮತ್ತು ಬಿಜೆಪಿ ಸರ್ಕಾರಕ್ಕೆ ಅಭಿನಂದಿಸುವುದಾಗಿ ತಿಳಿಸಿದರು.

ಅಪ್ಪಾವ್ರ ಆಸೆ ಈಡೇರಿದೆ: ಅನಿರುದ್ಧ ಹರ್ಷ: ಕೊನೆಗೂ ಅಪ್ಪಾವ್ರ (ಡಾ.ವಿಷ್ಣುವರ್ಧನ್) ಆಶಯ ನಿಜವಾಯಿತು. ಇದು 13 ವರ್ಷಗಳ ನಿರಂತರ ಹೋರಾಟದ ಫಲ. ಸುಂದರ ಜಗತ್ತಿಗೆ ಮಾದರಿಯಾಗಬಹುದಾದಂತಹ ಸ್ಮಾರಕವಾಗಿದೆ ಎಂದು ವಿಷ್ಣುವರ್ಧನರ ಅಳಿಯ ಅನಿರುದ್ಧ್ ಹರ್ಷ ವ್ಯಕ್ತಪಡಿಸಿದರು.

ಮುಖ್ಯಮಂತ್ರಿಗಳಿಂದ ಸ್ಮಾರಕ ಲೋಕಾರ್ಪಣೆಗೂ ಮುನ್ನ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೂರು ಎಕರೆ ಜಾಗದಲ್ಲಿ ಸ್ಮಾರಕ ನಿರ್ಮಾಣ ಮಾಡಲಾಗಿದ್ದು, ಇನ್ನುಳಿದ ಎರಡು ಎಕರೆ ಜಾಗವನ್ನು ಮುಂದಿನ ದಿನಗಳಲ್ಲಿ ಅಭಿವೃದ್ಧಿಪಡಿಸಲಾಗುವುದು. ಸಾಹಸ ಸಿಂಹ ಸಭಾಂಗಣದಲ್ಲಿ ಚಲನಚಿತ್ರೋತ್ಸವಗಳ ಜೊತೆಗೆ ಅವರ ಜನ್ಮ ವಾರ್ಷಿಕೋತ್ಸವನ್ನು ಆಯೋಜಿಸಲಾಗುವುದು. ಎಲ್ಲಾ ಮೂಲಭೂತ ಸೌಕರ್ಯಗಳೊಂದಿಗೆ ಕಲಾ ಶಿಬಿರವನ್ನು ನಡೆಸಲು ತರಗತಿ ಕೊಠಡಿಗಳನ್ನು ನಿರ್ಮಿಸಲಾಗಿದೆ ಎಂದರು. ಸಾಹಸಸಿಂಹ ಸಭಾಂಗಣದಲ್ಲಿ ಕೇವಲ ಚಲನಚಿತ್ರೋತ್ಸವಗಳನ್ನು ಆಯೋಜಿಸುವುದಷ್ಟೇ ಅಲ್ಲ, ಅಪ್ಪಾಜಿಯವರ ಜನ್ಮ ವಾರ್ಷಿಕೋತ್ಸವವನ್ನೂ ಆಯೋಜಿಸಲಾಗುತ್ತದೆ. ಎಲ್ಲಾ ಮೂಲಭೂತ ಸೌಕರ್ಯಗಳೊಂದಿಗೆ ಕಲಾ ಶಿಬಿರಗಳನ್ನು ನಡೆಸಲು ಎರಡು ತರಗತಿ ಕೊಠಡಿಗಳನ್ನು ನಿರ್ಮಿಸಲಾಗಿದೆ. ಮುಂದಿನ ದಿನಗಳಲ್ಲಿ ವಿಷ್ಣುವರ್ಧನ್ ಅವರ ಆಶಯದಂತೆ ಕಲಾ ತರಬೇತಿಗಳನ್ನು ಆಯೋಜಿಸುವ ಉದ್ದೇಶ ಹೊಂದಲಾಗಿದೆ ಎಂದರು. ಅಪ್ಪಾವ್ರ (ವಿಷ್ಣುವರ್ಧನ್) ಕನಸುಗಳನ್ನು ಮೆಲುಕು ಹಾಕುವ ಮೂಲಕ ನಾವು ಕಲ್ಪಿಸಿಕೊಂಡಂತೆ ಸ್ಮಾರಕ ಬಂದಿದೆ. ಉದ್ಘಾಟನಾ ಕಾರ್ಯಕ್ರಮಕ್ಕೆ ಒತ್ತಡದಿಂದಾಗಿ ನಾವು ಚಲನಚಿತ್ರ ತಾರೆಯರನ್ನು ಇಲ್ಲಿಗೆ ಕರೆಸಲು ಸಾಧ್ಯವಾಗಲಿಲ್ಲ. ಮುಂದಿನ ದಿನಗಳಲ್ಲಿ ಚಲನಚಿತ್ರೋತ್ಸವ, ವಿಷ್ಣು ಜನ್ಮೋತ್ಸವದ ಸಂದರ್ಭದಲ್ಲಿ ಆಯೋಜಿಸುವ ಕಾರ್ಯಕ್ರಮಗಳಿಗೆ ಎಲ್ಲಾ ಕಲಾವಿದರನ್ನು ಆಹ್ವಾನಿಸಲಾಗುವುದು ಎಂದು ನಟ ಅನಿರುದ್ಧ ಹೇಳಿದರು.

ಅಭಿಮಾನಿಗಳಿಂದ ಭಾರೀ ಸಂಭ್ರಮ

ಕಾರ್ಯಕ್ರಮವನ್ನು ವೀಕ್ಷಿಸಿತು. ನಡು ನಡುವೆ ವಿಷ್ಣು ಪರ ಘೋಷಣೆಗಳನ್ನು ಕೂಗಿ ಅಭಿಮಾನ ಪ್ರದರ್ಶಿಸಿದರು. ಅಭಿಮಾನಿಗಳು ಬೈಕ್, ಕಾರ್ ರ್‍ಯಾಲಿಗಳ ಮೂಲಕ ಕಾರ್ಯಕ್ರಮ ಸ್ಥಳಕ್ಕೆ ಆಗಮಿಸಿದರು. ಪ್ರತಿಯೊಬ್ಬರ ಕೈಯ್ಯಲ್ಲೂ ಅಭಿಮಾನಿ ನಟದ ಭಾವಚಿತ್ರ ಇದ್ದರೆ, ನೂರಾರು ಮಂದಿ ವಿಷ್ಣು ಭಾವಚಿತ್ರ ಇರುವ ಟೀ ಶರ್ಟ್ ಧರಿಸಿದ್ದರು. ತಮ್ಮ ಅಭಿಮಾನಿ ನಟನ ಸ್ಮಾರಕದ ಕನಸು ನನಸಾಗರಲು 13 ವರ್ಷಗಳು ಬೇಕಾಯಿತು. ಕೊನೆಗೂ ಸ್ಮಾರಕ ನಿರ್ಮಾಣವಾಗಿದ್ದಕ್ಕೆ ಹರ್ಷ ವ್ಯಕ್ತಪಡಿಸಿದರು.

ಸ್ಮಾರಕದ ಲೋಕಾರ್ಪಣೆಯನ್ನು ಅಭಿಮಾನಿಗಳು ತಮ್ಮದೇ ಶೈಲಿಯಲ್ಲಿ ಆಚರಿಸಿದ್ದರಿಂದ ಸ್ಮಾರಕ ಪ್ರದೇಶದ ಸುತ್ತ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಕೆಲವರು ಕನ್ನಡ ಧ್ವಜ ಮತ್ತು ನಟನ ಭಾವಚಿತ್ರ ಮುದ್ರಿಸಿದ ಬಿಳಿ ಬಾವುಟಗಳನ್ನು ಬೀಸುತ್ತಿದ್ದರು. ಇನ್ನೂ ಅನೇಕರು ವಿಷ್ಣುವಿನ ತದ್ರೂಪು ವೇಷ ಧರಿಸಿ, ಅಭಿಮಾನ ಮೆರೆದರು. ನಟನ ಬೃಹತ್ ಗಾತ್ರದ ಕಟೌಟ್‌ಗಳನ್ನು ಹಾಕಿ, ಅದಕ್ಕೆ ಹೂವಿನ ಹಾರಗಳಿಂದ ಅಲಂಕರಿಸಲಾಗಿತ್ತು. ಸ್ಮಾರಕದ ಹಿಂಬದಿಯಲ್ಲಿರುವ ಸಾಹಸಸಿಂಹ ಸಭಾಂಗಣದಲ್ಲಿ ವಿಷ್ಣುವರ್ಧನ್ ಅವರ ಚಲನಚಿತ್ರದ ಹಿಟ್ ಹಾಡುಗಳು ಮತ್ತು ಸಂಭಾಷಣೆಯ ದೃಶ್ಯಗಳ ಪ್ರದರ್ಶನ ಅಭಿಮಾನಿಗಳಲ್ಲಿ ಮತ್ತಷ್ಟು ಸಂಭ್ರಮಿಸುವಂತೆ ಮಾಡಿತು.

ಪ್ರತಿಮೆಯ ಪ್ರಮುಖ ಆಕರ್ಷಣೆ: 7 ಅಡಿ ಎತ್ತರದ ನಟನ ಪ್ರತಿಮೆಯನ್ನು ರಾಜನ 'ಆಪ್ತಮಿತ್ರ' ಚಿತ್ರದ ರಾಜನ ಉಡುಗೆಯಲ್ಲಿದ್ದ ಪ್ರತಿಮೆ ಕಪ್ಪು ಕಲ್ಲಿನಿಂದ ಕೆತ್ತಲಾಗಿದೆ. ಸ್ಮಾರಕದ ಪ್ರತಿಮೆ ತಳಭಾಗದಲ್ಲಿ ವಿಷ್ಣುವರ್ಧನ್‌ರ ಚಿತಾಭಸ್ಮದದ ಮೇಲೆ ಪೀಠ ನಿರ್ಮಿಸಿ, ಅದರ ಮೇಲೆ ಆಕರ್ಷಕ ಪ್ರತಿಮೆ ನಿರ್ಮಿಸಲಾಗಿದೆ. ಸ್ಮಾರಕದ ಸುತ್ತ 600ಕ್ಕೂ ಹೆಚ್ಚು ವಿಷ್ಣುವರ್ಧನ್ ನಟಿಸಿದ ಚಿತ್ರಗಳ ಫೋಟೋ ಗ್ಯಾಲರಿ ಒಳಗೊಂಡಿದೆ. ವಿಷ್ಣು ಅವರ ಜೀವನ ಚರಿತ್ರೆಯನ್ನು ಚಿತ್ರಿಸುವಂತಿದೆ. ವಿಷ್ಣು ಪ್ರತಿಮೆಯ ಹಿಂಬದಿಯಲ್ಲಿ ನಿರ್ಮಿಸಿರುವ ಕಟ್ಟಡದಲ್ಲಿ ಸಾಹಸಸಿಂಹ ಸಭಾಂಗಣ, ಎರಡು ತರಗತಿ ಕೊಠಡಿ, ಸುಸಜ್ಜಿತ ಶೌಚಾಲಯವಿದೆ. ಸ್ಮಾರಕದ ಸುತ್ತಲೂ ಉದ್ಯಾನವನ್ನೂ ನಿರ್ಮಿಸಲಾಗಿದೆ. ಕಾರ್ಯಕ್ರಮದಲ್ಲಿ ವಿಷ್ಣುವರ್ಧನ್ ಅವರ ಪತ್ನಿ ಭಾರತಿ ವಿಷ್ಣುವರ್ಧನ್, ಹಲವು ಚಿತ್ರಗಳಲ್ಲಿ ನಟರೊಂದಿಗೆ ತೆರೆ ಹಂಚಿಕೊಂಡಿರುವ ಜನಪ್ರಿಯ ನಟ ರಮೇಶ್ ಭಟ್, ಕಿರುತೆರೆ ಧಾರಾವಾಹಿ ನಟಿ, ನಿರ್ಮಾಪಕಿ ಮತ್ತು ನಿರ್ದೇಶಕಿ ಶ್ರುತಿ ನಾಯ್ಡು, ನಿರ್ಮಾಪಕ, ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಬಾಬು ಇನ್ನಿತರರು ಉಪಸ್ಥಿತರಿದ್ದರು.

ಮುಂದಿನ ಚುನಾವಣೆಗೆ ಸ್ಪರ್ಧಿಸುವುದಿಲ್ಲ

ತಿರುಕನ ಕನಸು ಕಾಣುತ್ತಿದ್ದಾರೆ. ಅದು ಎಂದಿಗೂ ನನಸಾಗದು. ಸೂರ್ಯಚಂದ್ರ ಇರುವುದು ಎಷ್ಟು ಸತ್ಯವೋ, ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ಅಷ್ಟೇ ಸತ್ಯ ಎಂದ ಅವರು, ಪಕ್ಷದ ವರಿಷ್ಠರೆಲ್ಲ ಚರ್ಚಿಸಿ ಯೋಗ್ಯ ಅಭ್ಯರ್ಥಿಗಳಿಗೆ ಟಿಕೆಟ್ ನೀಡಲಾಗುವುದು. ಇದಕ್ಕಾಗಿ ಎರಡು ಸಮೀಕ್ಷೆ ನಡೆಸಲಾಗುವುದು. ಟಿಕೆಟ್ ನೀಡುವ ವಿಚಾರದಲ್ಲಿ ರಾಜಿ ಇಲ್ಲ. ಗೆಲ್ಲುವ ಅಭ್ಯರ್ಥಿಗೆ ಮಣೆ ಹಾಕಲಾಗುವುದು ಎಂದರು.

ಮೈಸೂರಿನ ಪಾರ್ಕ್‌ಗಳಲ್ಲಿ ಸತ್ಯಾಗ್ರಹ

ಡಾ.ಭಾಮಿ ಶೆಣೈ ಅವರಂತಹ ಹಿರಿಯರು ಹೋರಾಟ ಮಾಡುತ್ತಿದ್ದಾರೆ. ಇಂತಹ ಹೋರಾಟದಲ್ಲಿ ಯುವ ಜನತೆ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಮುಂದಿನ ಪೀಳಿಗೆಗೆ ಉತ್ತಮ ಪರಿಸರ ಕೊಡುಗೆ ನೀಡಲು ರಚನಾತ್ಮಕ ಹೋರಾಟ ನಡೆಸಬೇಕು ಎಂದು ಸಲಹೆ ನೀಡಿದರು.

ಮೈಸೂರಿನ ಬಹುತೇಕ ಎಲ್ಲಾ ಉದ್ಯಾನವನಗಳಲ್ಲಿ ಕರ್ನಾಟಕ ಉದ್ಯಾನವನಗಳು, ಆಟದ ಮೈದಾನ ಮತ್ತು ಬಯಲು ಪ್ರದೇಶಗಳ (ಸಂರಕ್ಷಣೆ ಮತ್ತು ನಿಯಂತ್ರಣ) ನಿಯಮ 1985ನ್ನು ಉಲ್ಲಂಘಿಸಲಾಗುತ್ತದೆ. ಈ ನಿಯಮ ಗಾಳಿಗೆ ತೂರಿ ಕಾಂಕ್ರಿಟ್ ಕಟ್ಟಡ ನಿರ್ಮಿಸಲು ಮುಂದಾಗಿರುವುದು ವಿಷಾದನೀಯ. ಈ ಹಿಂದೆ ಯಾದವಗಿರಿ, ಗೋಕುಲಂ ಸೇರಿದಂತೆ ಎಲ್ಲಾ ಬಡಾವಣೆಗಳು ಕಿರು ಅರಣ್ಯದಂತೆ ಇದ್ದವು. ಆದರೆ ಈಗಾಗಲೇ ಎಲ್ಲವನ್ನೂ ನುಂಗಿಕೊಂಡಿದ್ದೇವೆ. ಎಲ್ಲೆಲ್ಲೂ ಕಟ್ಟಡಗಳು ನಿರ್ಮಾಣವಾಗಿದೆ. ಮುಂದಿನ 20 ವರ್ಷದಲ್ಲಿ ಬಹುಮಹಡಿ ಕಟ್ಟಡಗಳು ತಲೆ ಎತ್ತಲಿವೆ. ಹೀಗೆ ಸುಮ್ಮನಿದ್ದರೆ ಚಾಮುಂಡಿಬೆಟ್ಟವೂ ಕಣ್ಮರೆಯಾಗಲಿದೆ ಎಂದು ವಿಷಾದಿಸಿದರು.

ಎಂಜಿಪಿ ಮುಖ್ಯಸ್ಥ ಡಾ.ಭಾಮಿ ಶೆಣೈ ಮಾತನಾಡಿ, ಉತ್ತಮ ಆಡಳಿತಕ್ಕಾಗಿ ಒತ್ತಾಯಿಸಿ ನಡೆಸಿದ ಸತ್ಯಾಗ್ರಹಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ನಮ್ಮ ಹೋರಾಟ ಆರಂಭವಾಗಿದೆ. ಇದರಲ್ಲಿ ಸಾಕಷ್ಟು ಮಂದಿ ಪಾಲ್ಗೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಹೋರಾಟ ಸಧೃಡಗೊಳ್ಳಲಿದೆ. ಇಂದು ನಡೆದ ಸತ್ಯಾಗ್ರಹದಲ್ಲಿ ಕೋ.ಸು ನರಸಿಂಹ ಮೂರ್ತಿ, ಮೇಜರ್ ಜನರಲ್ (ನಿವೃತ್ತ) ಎಸ್.ಜಿ.ಒಂಬತ್ಕೆರೆ, ವೆಂಕಟೇಶರಾವ್, ಡಾ.ಜಯರಾಂ, ಸೀತೆ ರಾವ್, ಉಷಾ ಮತ್ತು ನಂಜಾಪುರ ಯದುರಾಜ್, ಡಾ.ವಿ. ಪ್ರಕಾಶ್, ರವಿಚಂದ್ರ ಬೇಕಲ್, ನೀಲಾಂಬಿಕಾ ಹಾಗೂ ಇನ್ನಿತರರು ಭಾಗವಹಿಸಿ ಮೈಸೂರಿಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಿದ್ದಾರೆ ಎಂದರು.

ಭ್ರಷ್ಟಾಚಾರ ತಾಂಡವಾಡುತ್ತಿರುವುದರಿಂದ ಉತ್ತಮ ಆಡಳಿತ ನಿರೀಕ್ಷೆ ಸಾಧ್ಯವಾಗುತ್ತಿಲ್ಲ. ಮುಡಾ, ಪಾಲಿಕೆ ಹಾಗೂ ಆರ್‌ಟಿಒಗಳಲ್ಲಿ ಮಿತಿ ಮೀರಿ ಭ್ರಷ್ಟಾಚಾರ ನಡೆಯುತ್ತಿರುವುದು ಈಗಾಗಲೇ ಸಾಬೀತಾಗಿದೆ. ಇದರಿಂದ ಅವೈಜ್ಞಾನಿಕ, ಪರಿಸರ ಮಾರಕ ಯೋಜನೆಗಳ ಅನುಷ್ಠಾನಕ್ಕೆ ಉತ್ತೇಜನ ನೀಡಲಾಗುತ್ತಿದೆ ಎಂದು ಕಿಡಿಕಾರಿದರು.

ನೇತಾಜಿನಗರದಲ್ಲಿ ಧರಣಿ: ಮೈಸೂರು–ತಿ.ನರಸೀಪುರ ರಸ್ತೆಯಲ್ಲಿರುವ ನೇತಾಜಿ ನಗರದ ಗಣಪತಿ ದೇವಾಲಯದ ಆವರಣದಲ್ಲಿ ಪರಿಸರ ಬಳಗದ ಸದಸ್ಯರು ಮತ್ತು ನೇತಾಜಿ ನಗರದ ನಿವಾಸಿಗಳು ಉತ್ತಮ ಆಡಳಿತಕ್ಕಾಗಿ ಸತ್ಯಾಗ್ರಹ ನಡೆಸಿದರು.

ಈ ವೇಳೆ ಪರಿಸರ ಬಳಗದ ಸಂಸ್ಥಾಪಕ ಸದಸ್ಯ ಪರಶುರಾಮೇಗೌಡ ಮಾತನಾಡಿ, ಹದಗೆಟ್ಟ ಆಡಳಿತಕ್ಕೆ ಚುರುಕು ಮುಟ್ಟಿಸಲು ಈ ಸತ್ಯಾಗ್ರಹ ನಡೆಸಲಾಗಿದೆ. ಪರಿಸರ ಸಂರಕ್ಷಣೆಗಾಗಿ ಉತ್ತಮ ಆಡಳಿತದ ಅವಶ್ಯಕತೆ ಇದೆ. ಅದಕ್ಕಾಗಿ ಹೋರಾಟ ನಿರಂತರವಾಗಿ ನಡೆಲಾಗುತ್ತದೆ. ಇಂದಿನ ಸತ್ಯಾಗ್ರಹಕ್ಕೆ ಉತ್ತಮ ಬೆಂಬಲ ದೊರೆತಿದೆ ಎಂದರು.

ನೇತಾಜಿನಗರದ ನಿವಾಸಿ ಶಿವಬಸಪ್ಪ ಮಾತನಾಡಿ, ನೇತಾಜಿನಗರ ಹಾಗೂ ಸುತ್ತಮುತ್ತಲಿನ ಬಹುತೇಕ ಎಲ್ಲಾ ಬಡಾವಣೆಗಳ ರಸ್ತೆಗಳು ಹಾಳಾಗಿವೆ. ಇದರಿಂದ ಸ್ಥಳೀಯರು ತೊಂದರೆಗೀಡಾಗುವಂತಾಗಿದೆ. ರಸ್ತೆಗಳನ್ನು ದುರಸ್ತಿ ಮಾಡದಿದ್ದರೆ ಮುಂಬರುವ ವಿಧಾನಸಭಾ ಚುನಾವಣೆಯನ್ನು ಬಹಿಷ್ಕರಿಸುವ ಸಂಕಲ್ಪ ಮಾಡಬೇಕು ಸಲಹೆ ನೀಡಿದರು.

ಪರಿಸರ ಬಳಗದ ಸದಸ್ಯೆ ಲೀಲಾ ಶಿವಕುಮಾರ್ ಮಾತನಾಡಿ, ಯಾವುದೇ ಹೋರಾಟ ಮಾಡಿದರೂ ಒಗ್ಗಟ್ಟು ಮುಖ್ಯ. ಒಗ್ಗಟ್ಟಿನಿಂದ ಪ್ರಯತ್ನ ಮಾಡಿದರೆ ಏನು ಬೇಕಾದರೂ ಸಾಧಿಸಬಹುದು. ಇದಕ್ಕೆ ಪರಿಸರ ಬಳಗ ಮಾಡಿರುವ ಕೆಲಸಗಳು ಸಾಕ್ಷಿ. ಮುಂದಿನ ದಿನಗಳಲ್ಲೂ ಒಗ್ಗಟ್ಟು ಅಗತ್ಯ ಎಂದರು. ಪ್ರತಿಭಟನೆಯಲ್ಲಿ ಪರಿಸರ ಬಳಗದ ಸದಸ್ಯರಾದ ರಾಜಗೋಪಾಲ್, ಸವಿತಾಗೌಡ, ಜವರೇಶ್, ಜವರಪ್ಪ, ಸುಶೀಲಾ, ಶ್ರೀಲಕ್ಷ್ಮಿ, ಸುಮಲತಾ, ಗಂಟಯ್ಯ, ಡಾ.ಕೃಷ್ಣಮೂರ್ತಿ, ನೇತಾಜಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಉಮೇಶ್, ನೇತಾಜಿನಗರ ನಿವಾಸಿಗಳಾದ ಕೃಷ್ಣ, ಗುರುಸ್ವಾಮಿ, ಲೋಲ ಕುಮಾರ್, ಶಿವಪ್ಪ, ಚಂದ್ರಶೇಖರ್, ಜನಾರ್ದನ, ಬಸಪ್ಪ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಪೊಲೀಸರಿಂದ ಆಯೋಜಿಸಿದ್ದ 'ಅಪೂರ್ವ ಸಮ್ಮಿಲನ'ದಲ್ಲಿ ಕೆಂಪಯ್ಯರಿಗೆ ಆತ್ಮೀಯ ಅಭಿನಂದನೆ

ಪ್ರಾಮಾಣಿಕತೆ ಇದ್ದರೆ ಮಾತ್ರವೇ ಮಾನವೀಯ ಗುಣ ಬೆಳೆಯಲು ಸಾಧ್ಯ

ನಿವೃತ್ತ ಎಡಿಜಿಪಿ ಕೆಂಪಯ್ಯ ಅಭಿಮತ





ಮೈಸೂರಿನ ಪೊಲೀಸ್ ಭವನದಲ್ಲಿ ಭಾನುವಾರ ನಿವೃತ್ತ ಐಪಿಎಸ್ ಅಧಿಕಾರಿ ಕೆಂಪಯ್ಯ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಮತ್ತೊಂದು ಚಿತ್ರದಲ್ಲಿ ಸಭಿಕರನ್ನು ಉದ್ದೇಶಿಸಿ ಕೆಂಪಯ್ಯನವರು ಮಾತನಾಡುತ್ತಿರುವುದನ್ನು ಕಾಣಬಹುದು.

ಮೈಸೂರು,ಜ.29(ಪಿಎಂ)– ಪ್ರಾಮಾಣಿಕತೆ ಇದ್ದರೆ ಮಾತ್ರವೇ ನಮ್ಮಲ್ಲಿ ಮಾನವೀಯ ಗುಣ ಬೆಳೆಯಲು ಸಾಧ್ಯ. ನನ್ನ ಸೇವಾವಧಿಯಲ್ಲಿ ಪೊಲೀಸ್ ಇಲಾಖೆಗೆ ಸುಮಾರು 4 ಸಾವಿರ ಮಂದಿ ನೇಮಕಾತಿ ನಡೆಸಿದ್ದು, ಯಾವುದೇ ಪ್ರಭಾವಕ್ಕೆ ಒಳಗಾಗದೇ ಅತ್ಯಂತ ಪ್ರಾಮಾಣಿಕವಾಗಿ ನೇಮಕಾತಿ ಮಾಡಿದ್ದೇನೆ ಎಂದು ನಿವೃತ್ತ ಎಡಿಜಿಪಿ ಕೆಂಪಯ್ಯ ಹೇಳಿದರು.

ಮೈಸೂರಿನ ಪೊಲೀಸ್ ಭವನದಲ್ಲಿ 1996ನೇ ಸಾಲಿನಲ್ಲಿ ಪೊಲೀಸ್ ಇಲಾಖೆಗೆ ನೇಮಕಗೊಂಡ ಪೊಲೀಸರು (ಕೆಂಪಯ್ಯನವರು ಮೈಸೂರು ನಗರ ಪೊಲೀಸ್ ಆಯುಕ್ತರಾಗಿದ್ದ ಅವಧಿಯಲ್ಲಿ ಅವರಿಂದ ಆಯ್ಕೆಯಾದವರು) ಮತ್ತು ಅವರ ಕುಟುಂಬದವರ ವತಿಯಿಂದ 'ಅಪೂರ್ವ ಸಮ್ಮಿಲನ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಪ್ರಾಮಾಣಿಕತೆ ಇಲ್ಲವಾದರೆ ಮನುಷ್ಯನು ಮನುಷ್ಯನಾಗದೇ ಮೃಗವಾಗುತ್ತಾನೆ. ಅಪ್ರಾಮಾಣಿಕರಾಗಿ ಶ್ರೀಮಂತಿಕೆ ಗಳಿಸಿದರೆ ಆತ್ಮವಿಶ್ವಾಸ, ಆತ್ಮಗೌರವ, ಆತ್ಮಬಲ ಬರುವುದಿಲ್ಲ. ಇಂತಹ ವ್ಯಕ್ತಿತ್ವ ಬೆಳೆಸಿಕೊಳ್ಳುವುದರಲ್ಲಿ ಅರ್ಥವೇ ಇಲ್ಲ. ರೈತ ತಾನು ಬೆಳೆದ ಬೆಳೆಯಲ್ಲಿ ಉತ್ತಮವಾದದ್ದನ್ನು ಬಿತ್ತನೆ ಬೀಜವಾಗಿ ಆಯ್ಕೆ ಮಾಡಿಕೊಳ್ಳುವಂತೆ ನನ್ನ ಸೇವಾವಧಿಯಲ್ಲಿ ಯಾವುದೇ ಪ್ರಭಾವಕ್ಕೆ ಒಳಗಾಗದೇ ಅರ್ಹರನ್ನು ಆಯ್ಕೆ ಮಾಡಿದ ತೃಪ್ತಿಯಿದೆ. 25 ವರ್ಷಗಳ ಬಳಿಕ ಅಂದು ನನ್ನಿಂದ ಕೆಲಸ ವಾಯಿತೆಂದು ನೀವು ನೆನೆಸಿಕೊಳ್ಳುವುದು ನೋಡಿದರೆ ಕಣ್ಣೀರು ಬರದೇ ಮತ್ತೇನು? ಎಂದು ಭಾವುಕರಾದರು.

ನಾನು ನೇಮಕಾತಿ ಮಾಡುವಾಗ ಯಾವುದೇ ಸಿಇಟಿ ವ್ಯವಸ್ಥೆ ಇರಲಿಲ್ಲ. ಯೂನಿಟ್ ಆಫಿಸರ್ಸ್ ತಾವೇ ನೇಮಕಾತಿ ಮಾಡಿಕೊಳ್ಳುತ್ತಿದ್ದರು. ನಾನು ಸುಮಾರು 4 ಸಾವಿರ ಮಂದಿ ನೇಮಕಾತಿ ಮಾಡಿದ್ದೇನೆ. ಬೆಂಗಳೂರು ಸಿಎಆರ್‌ನಲ್ಲಿ ಡಿಸಿಪಿ ಆಗಿದ್ದಾಗ, 957 ಮಂದಿ ನೇಮಕಾತಿ ಮಾಡಿದೆ. ಧಾರವಾಡದಲ್ಲಿ ಎಸ್‌ಪಿ ಆಗಿದ್ದಾಗ 750 ಮಂದಿ ನೇಮಕಾತಿ ಮಾಡಿದೆ ಅಂತೆಯೇ ಮೈಸೂರು ನಗರ ಪೊಲೀಸ್ ಆಯುಕ್ತಾಗಿದ್ದ ಅವಧಿಯಲ್ಲಿ 750 ನೇಮಕಾತಿ ಮಾಡಿದ್ದೇನೆ ಎಂದು ಕೆಲವನ್ನು ವಿವರಿಸಿದರು.

ಈ ನೇಮಕಾತಿ ಪ್ರಕ್ರಿಯೆ ನಡೆಸುವಾಗ ಉದ್ಯೋಗ ವಿನಿಮಯ ಕಚೇರಿಯದ್ದೇ ಮಹತ್ವದ ಪಾತ್ರವಿತ್ತು. ಆದರೆ ಅಲ್ಲಿಂದ ಇಲಾಖೆಗೆ ದೈಹಿಕವಾಗಿ ಅರ್ಹರಾಗಿರುವವರನ್ನು ಕಳುಹಿಸುವುದು ಕಡಿಮೆ ಇತ್ತು. ಹೀಗಾಗಿ ನನಗೆ ಹೆಚ್ಚಿನ ಆಯ್ಕೆಗೆ ಅವಕಾಶವಿರಲಿಲ್ಲ ಇದನ್ನು ಸರಿಪಡಿಸಲು ಒಂದು ಹುದ್ದೆಗೆ 100 ಮಂದಿಯನ್ನು ಸಂದರ್ಶನಕ್ಕೆ ಕಳುಹಿಸಿಕೊಂಡುವಂತೆ ವ್ಯವಸ್ಥೆ ಮಾಡಲಾಯಿತು. ಮೈಸೂರು ಮತ್ತು ಧಾರವಾಡದಲ್ಲಿ ಇದ್ದಾಗ ಈ ರೀತಿಯಲ್ಲಿ ಸಂದರ್ಶನ ನಡೆಸಿದೆ. 1 ಹುದ್ದೆಗೆ 100ರಲ್ಲಿ ಒಬ್ಬರೇ ಆಯ್ಕೆಯಾಗುವುದರಿಂದ ಉಳಿದ 99 ಮಂದಿಯಲ್ಲಿ ಬಹುತೇಕರು ರಾಜಕಾರಣಗಳಿಂದ ಶಿಫಾರಸ್ಸು ಮಾಡಿಸುವುದೂ ಸೇರಿದಂತೆ ಅನೇಕ ರೀತಿಯಲ್ಲಿ ಒತ್ತಡ ತರುತ್ತಿದ್ದರು. ನಾನು ನೇಮಕಾತಿ ನಡೆಸಿದ ಒಂದೇ ಒಂದು ಹುದ್ದೆಯಲ್ಲಿಯೂ ಯಾವುದೇ ಪ್ರಭಾವಕ್ಕೆ ಒಳಗಾಗಿಲ್ಲ ಎಂದು ತಿಳಿಸಿದರು.

ಸಂದರ್ಶನದ ಸಂದರ್ಭದಲ್ಲಿ ನಾನು ನಿಮ್ಮನ್ನು ಆಯ್ಕೆ ಮಾಡುತ್ತಿಲ್ಲ ನಿಮ್ಮ ಯೋಗ್ಯತೆ ಅರ್ಹತೆಗೆ ಅನುಗುಣವಾಗಿ ನಿಮ್ಮನ್ನು ನೀವೇ ಆಯ್ಕೆ ಮಾಡಿಕೊಳ್ಳುತ್ತೀರಿ ಎಂದು ಮೈಕ್‌ನಲ್ಲಿ ಘೋಷಣೆ ಮಾಡುತ್ತಿದ್ದೆ. ಬದುಕು ಅರ್ಥವಾಗಿರುವವರು ಆಡಳಿತ ಕ್ಷೇತ್ರದಲ್ಲಿರುವ ಹುದ್ದೆಗಳಿಗೆ ಬರಬೇಕು ಎಂದರು.

ಬಂಧುತ್ವದ ಬುನಾದಿ ಪ್ರಾಮಾಣಿಕತೆ. ಅದನ್ನು ಬೆಳೆಸಿಕೊಳ್ಳಬೇಕು. ಮಕ್ಕಳಲ್ಲಿಯೂ ಪ್ರಾಮಾಣಿಕತೆಯ ಬೀಜ ಬಿತ್ತನೆ ಮಾಡಿ. ಮಕ್ಕಳಿಗೆ ಪ್ರಾಮಾಣಿಕತೆ ಕಲಿಸಿದರೆ ಉಳಿದದ್ದನ್ನು ಸಮಾಜ ಕಲಿಸುತ್ತದೆ. ನಿಮ್ಮ ಇಂದಿನ ಆತ್ಮೀಯ ಅಭಿನಂದನೆಯಿಂದ ನನ್ನದು ಸಾರ್ಥಕತೆ ಬದುಕು ಎನ್ನಿಸಿತು. ಬಂಧು–ಬಾಂಧವರು ತೋರಿಸದಂತಹ ಪ್ರೀತಿ ತೋರಿದ್ದೀರಿ. ನಿಮ್ಮ ಪ್ರೀತಿಗೆ ಎಂದೆಂದೂ ಚಿರಋಣಿ. ಪ್ರಾಮಾಣಿಕ ವಿಚಾರಗಳಿದ್ದಲ್ಲಿ ನಿಮಗೆ ಸ್ಪಂದಿಸಲು ಸದಾ ಸಿದ್ಧ ಎಂದು ನುಡಿದರು.

ನಿಮ್ಮ ಪ್ರೀತಿ–ಗೌರವ ಮರೆಯಲಾರೆ: ಇಂದಿನ ಕಾಲದಲ್ಲಿ ಸ್ವಂತ ಸಂಬಂಧಿಗಳು ಎಷ್ಟು ಸಹಾಯ ಮಾಡಿದರೂ ಅದಕ್ಕಿಂತಲೂ ಹೆಚ್ಚು ಬಯಸಿ, ಮಾಡಿದ ಸಹಾಯ ಮರೆಯುವುದೇ ಹೆಚ್ಚು. ಇಂತಹ ಅನುಭವ ಸ್ವತಃ ನನಗೆ ಆಗಿದೆ ಅಂತಹ ಸಂದರ್ಭದಲ್ಲಿ ನೀವೆಲ್ಲರೂ ನನಗೆ ಇಂತಹ ಪ್ರೀತಿ ಗೌರವ ತೋರಿರುವುದನ್ನು ಮರೆಯಲಾರೆ ಎಂದು ಕೆಂಪಯ್ಯ ಭಾವುಕರಾದರು.

ಹಲವು ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗೂ ಇದೇ ವೇಳೆ ಸನ್ಮಾನಿಸಲಾಯಿತು. ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಸಮಾರಂಭ ಉದ್ಘಾಟಿಸಿದರು. ಕಾನೂನು ಮಾಪನ ಇಲಾಖೆ ಸಹಾಯಕ ನಿಯಂತ್ರಕ ಎಂ.ಎಸ್.ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಡಿಸಿಪಿಗಳಾದ ಎಂ.ಎಸ್.ಗೀತಾ ಪ್ರಸನ್ನ, ಎ.ಮಾರುತಿ (ಕೆಎಸ್‌ಪಿಎಸ್), ಪೊಲೀಸ್ ತರಬೇತಿ ಶಾಲೆ ಪ್ರಾಂಶುಪಾಲ ಹೆಚ್.ಕೆ.ಶೇಖರ್ ಮತ್ತಿತರರು ಹಾಜರಿದ್ದರು.

ಪೊಲೀಸರ ಮನಸ್ಸು ಬೆಸೆಯುವ ಭವನ

ಪೊಲೀಸ್ ಭವನದ ನಿರ್ಮಾಣದ ಹಿಂದಿನ ಉದ್ದೇಶ ಕೇವಲ ಸಿಮೆಂಟ್ ಕಟ್ಟಡ ಕಟ್ಟುವುದು ಆಗಿಲಿಲ್ಲ. ಜೊತೆಗೆ ಪೊಲೀಸರ ಮನಸ್ಸು ಕಟ್ಟುವಂತಹ ಸದುದ್ದೇಶದಿಂದ ಈ ಭವನ ನಿರ್ಮಿಸಲಾಗಿದೆ. ಮದುವೆಯಂತಹ ಸಮಾರಂಭಕ್ಕೆ ಮಾತ್ರವಲ್ಲದೆ, ನಗರ ಪೊಲೀಸರು ಸೌಹಾರ್ದಯುತವಾಗಿ ಇಲ್ಲಿ ಸೇರಬೇಕು. ಹಾಗಾಗಿ ಧ್ವನಿ ವ್ಯವಸ್ಥೆಯಲ್ಲಿ ಇಲ್ಲಿ ಉಂಟಾಗಿರುವ ಪ್ರತಿಧ್ವನಿ (ಎಕೋ) ದೋಷಗಳನ್ನು ನಿವಾರಿಸಲು ಪೂರಕ ವ್ಯವಸ್ಥೆಗಳಿಗೆ ಕ್ರಮ ಕೈಗೊಳ್ಳುವುದಾಗಿ ಪೊಲೀಸ್ ಆಯುಕ್ತರು ಈಗಷ್ಟೇ ಹೇಳಿದರು. ಪೊಲೀಸ್ ಭವನದ ನಿಧಿಯಲ್ಲಿಯೇ ನಾಲ್ಕೈದು ಕೋಟಿ ಹಣವಿದ್ದು, ಅದನ್ನು ಇದಕ್ಕೆ ಬಳಸಿಕೊಳ್ಳಲು ಅವಕಾಶವಿದೆ.

-ನಿವೃತ್ತ ಎಡಿಜಿಪಿ ಕೆಂಪಯ್ಯ

ಪೊಲೀಸರು, ಜನತೆಯ ಶ್ರೇಯೋಭಿವೃದ್ಧಿಗೆ ಕೆಂಪಯ್ಯರಿಂದ ಮಹತ್ತರ ಕೊಡುಗೆ

ಬೇರೆ ರಾಜ್ಯದಿಂದ ಬಂದು ಕರ್ನಾಟಕದಲ್ಲಿ ಸೇವೆ ಸಲ್ಲಿಸುತ್ತಿರುವ ನನಗೆ ಕೆಂಪಯ್ಯನವರು ಮಾರ್ಗದರ್ಶನ ನೀಡಿದ್ದಾರೆ. ಪೊಲೀಸರು ಮತ್ತು ಜನತೆಯ ಶ್ರೇಯೋಭಿವೃದ್ಧಿಗೆ ಅವರು ಮಹತ್ತರ ಕೊಡುಗೆ ನೀಡಿದ್ದಾರೆ. ಅದರಿಂದಾಗಿಯೇ ಅವರು ಅಪಾರ ಪ್ರೀತಿ ಸಂಪಾದಿಸಿದ್ದಾರೆ. ಅವರಷ್ಟು ನನ್ನಿಂದ ಮಾಡಲಾಗದಿರಬಹುದು. ಆದರೂ ಸಾಹೇಬರನ್ನೇ (ಕೆಂಪಯ್ಯ) ನಾನು ಅನುಸರಿಸಿ ಕರ್ತವ್ಯ ನಿರ್ವಹಿಸುತ್ತೇನೆ. ಸಾಹೇಬರ ಮಾರ್ಗದರ್ಶನ ಮತ್ತು ಸಲಹೆ ಪಡೆದು ಮೈಸೂರು ನಗರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತೇನೆ.

-ರಮೇಶ್ ಬಾನೋತ್, ಮೈಸೂರು ನಗರ ಪೊಲೀಸ್ ಆಯುಕ್ತರು.

ನಾಗರಿಕ ಸಮೀಕ್ಷೆ ಕಾರ್ಯಕ್ಕೆ ಸಹಕರಿಸಿ

ಮೈಸೂರು, ಜ.29– ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಗೆ ಕಾವೇರಿ ನದಿ ಮೂಲದಿಂದ ಕೈಗೊಂಡಿರುವ ಮೇಳಾಪುರ ಯೋಜನೆಯಡಿ ನೀರು ಸರಬರಾಜು ಯೋಜನೆಯನ್ನು ಕಲ್ಪಿಸಲು ಉದ್ದೇಶಿಸಲಾಗಿದ್ದು ಹಾಗೂ ಸದರಿ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ವತಿಯಿಂದ ಅನುಷ್ಠಾನಗೊಳಿಸಬೇಕಾಗಿದೆ.

ಸದರಿ ಯೋಜನೆಯಡಿ ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ನೀರು ಸರಬರಾಜು ವ್ಯವಸ್ಥೆಯನ್ನು ಕಲ್ಪಿಸಲು ವಿತರಣಾ ಕೊಳವೆ ಮಾರ್ಗ ಮತ್ತು ಗೃಹ ಸಂಪರ್ಕಗಳ ವಿನ್ಯಾಸವನ್ನು ಮಾಡುವ ಸಲುವಾಗಿ ಪಟ್ಟಣ ಪಂಚಾಯ್ತಿ ವ್ಯಾಪ್ತಿ ಗೃಹಬಳಕೆ, ಗೃಹೇತರ ಬಳಕೆ ಮತ್ತು ವಾಣಿಜ್ಯ ಬಳಕೆಗೆ ಅವಶ್ಯಕವಿರುವ ದತ್ತಾಂಶಗಳನ್ನು ಸಂಗ್ರಹಿಸಲು, ನಗರದ ಸರಸ್ವತಿಪುರಂನ ಗುತ್ತಿಗೆದಾರರಾದ ಇ–ರಚನಾ ಟೆಕ್ನಾಲಜಿಸ್‌ರವರು ನಾಗರಿಕ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳುತ್ತಿದ್ದು, ಸಾರ್ವಜನಿಕರು ಅವಶ್ಯಕ ಮಾಹಿತಿಯನ್ನು ನೀಡುವುದರ ಮೂಲಕ ಪಟ್ಟಣ ಪಂಚಾಯ್ತಿ ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯೊಂದಿಗೆ ಸಹಕರಿಸಿ, ನೀರು ಸರಬರಾಜು ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಬೇಕೆಂದು ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿಯ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

ಬಹಿರಂಗ ಹರಾಜು

ಮೈಸೂರು,ಜ.29– ಆಡಳಿತ ತರಬೇತಿ ಸಂಸ್ಥೆಯ ಮಾಲೀಕತ್ವದಲ್ಲಿ (Condemn) ಮಹಿಂದ್ರ ಬೊಲೆರೋ ವಾಹನವನ್ನು ಟೆಂಡರ್ ಕಂ ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲು ಟೆಂಡರ್ ಆಹ್ವಾನಿಸಲಾಗಿದೆ.

ವಾಹನ ಅಂದಾಜು ಮೊತ್ತ 60 ಸಾವಿರ ರೂ.ಗಳಾಗಿದ್ದು, ಇ.ಎಮ್.ಡಿ 1,500 ರೂ. ಗಳಾಗಿವೆ. ಟೆಂಡರ್‌ಗಳನ್ನು ಜ.30ರ ಸಂಜೆ 5:30ರೊಳಗೆ ಸಲ್ಲಿಸಬೇಕಾಗಿದ್ದು, ಜ.31 ರಂದು ಮಧ್ಯಾಹ್ನ 12 ಗಂಟೆಗೆ ಆಡಳಿತ ತರಬೇತಿ ಸಂಸ್ಥೆ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು ಎಂದು ಆಡಳಿತ ತರಬೇತಿ ಸಂಸ್ಥೆಯ ಜಂಟಿ ನಿರ್ದೇಶಕರು (ಆಡಳಿತ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಜಿಲ್ಲೆಯ 1.62 ಲಕ್ಷ ಶಾಲಾ ಮಕ್ಕಳು ಕೇಂದ್ರದ ಪೋಷಣ್ ಫಲಾನುಭವಿಗಳು



ತಾಲೂಕುವಾರು ಅಂಕಿ ಅಂಶಗಳು

ತಾಲೂಕು	ಮೊಟ್ಟೆ	ಬಾಳೆ ಹಣ್ಣು	ಚಿಕ್ಕಿ
ಹೆಚ್.ಡಿ.ಕೋಟೆ	18,454	1598	451
ಹುಣಸೂರು	17897	1385	641
ಕೆ.ಆರ್.ನಗರ	12912	901	476
ಮೈಸೂರು.ಉ	15671	1085	650
ಮೈಸೂರು.ದ	4611	2144	1789
ಮೈಸೂರು.ತಾ	18975	2412	1086
ನಂಜನಗೂಡು	22698	1924	1003
ಪಿರಿಯಾಪಟ್ಟಣ	14752	996	611
ತಿ.ನರಸೀಪುರ	15545	1065	685
ಒಟ್ಟು	141515	13510	7392

ಮೈಸೂರು, ಜ.29(ಜಿಎ)–'ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ' ಯೋಜನೆಯಡಿ ಮೈಸೂರು ಜಿಲ್ಲೆಯಲ್ಲಿ 1.62 ಲಕ್ಷ ಶಾಲಾ ವಿದ್ಯಾರ್ಥಿಗಳು ಪೌಷ್ಟಿಕ ಆಹಾರ ಪಡೆದುಕೊಳ್ಳುತ್ತಿದ್ದಾರೆ.

ಶಾಲಾ ಮಕ್ಕಳಲ್ಲಿರುವ ಅಪೌಷ್ಟಿಕತೆ ನಿವಾರಣೆಗಾಗಿ 2022–23ನೇ ಸಾಲಿನ 'ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ' ಯೋಜನೆಯಡಿ ಪೂರಕ ಪೌಷ್ಟಿಕ ಆಹಾರ ವಿತರಿಸುವ ಕಾರ್ಯಕ್ರಮವನ್ನು ಕಳೆದ ಜುಲೈನಲ್ಲಿ ಅನುಷ್ಠಾನಗೊಳಿಸಿ, ಈ ಯೋಜನೆಯಡಿ ಸರ್ಕಾರಿ ಅನುದಾನಿತ ಶಾಲೆಯ 1 ರಿಂದ 8ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೊಟ್ಟೆ, ಬಾಳೆಹಣ್ಣು, ಚಿಕ್ಕಿ ವಿತರಣೆ ಮಾಡಲಾಗುತ್ತಿದೆ.

ಹಲವಾರು ವರ್ಷಗಳಿಂದ ಶಾಲೆಗಳಲ್ಲಿ ಮೊಟ್ಟೆ ವಿತರಣೆ ಮಾಡುವ ಬಗ್ಗೆ ಅನೇಕ ಪರ–ವಿರೋಧ ಚರ್ಚೆಗಳು ನಡೆಯುತ್ತಿದ್ದವು. ಆದರೆ, ಈ ಎಲ್ಲಾ ಚರ್ಚೆಗಳನ್ನು ದಾಟಿ ಈಗ ರಾಜ್ಯದಾದ್ಯಂತ ಎಲ್ಲಾ ಮಕ್ಕಳು ಪ್ರೋಟಿನ್, ಫೈಬರ್, ಕಾರ್ಬೋಹೈಡ್ರೇಟ್, ವಿಟಮಿನ್, ಕ್ಯಾಲೋರಿ ಒಳಗೊಂಡಿರುವ ಮೊಟ್ಟೆ ಬಾಳೆಹಣ್ಣು ಮತ್ತು ಶೇಂಗಾ ಚಿಕ್ಕಿ ನೀಡಲಾಗುತ್ತಿದೆ

ಮಕ್ಕಳಿಗೆ ಪೌಷ್ಟಿಕಾಂಶ ನೀಡುವ ಮುನ್ನ ವಿದ್ಯಾರ್ಥಿ ಮತ್ತು ಪೋಷಕರಿಂದ ಒಪ್ಪಿಗೆ ಪತ್ರ ಪಡೆದುಕೊಳ್ಳಲಾಗಿದೆ. ಮೊಟ್ಟೆ ಆಯ್ಕೆ ಮಾಡಿಕೊಂಡಿರುವ ವಿದ್ಯಾರ್ಥಿಗೆ 1 ಮೊಟ್ಟೆ ಮೊಟ್ಟೆ ತಿನ್ನಲು ಬಯಸದ ವಿದ್ಯಾರ್ಥಿಗೆ ಎರಡು ಬಾಳೆಹಣ್ಣು ಅಥವಾ ಒಂದು ಚಿಕ್ಕಿಯನ್ನು ಪಡೆಯ ಬಹುದಾಗಿದೆ. ಪ್ರತಿ ತಿಂಗಳು ಶಾಲೆಯ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡಿರುವ ಪಟ್ಟಿಯನ್ನು ಅಕ್ಷರ ದಾಸೋಹ ಇಲಾಖೆಗೆ ಕಳುಹಿಸಿದ ನಂತರ ಅಲ್ಲಿಂದ ಶಾಲೆಗೆ ಪಟ್ಟಿಯ ಅನುಗುಣವಾಗಿ ಅನುದಾನ ನೀಡಲಾಗುತ್ತದೆ ಅದರಂತೆ ಒಬ್ಬ ವಿದ್ಯಾರ್ಥಿಗೆ ಈ ಯೋಜನೆ ಅಡಿ 6 ರೂ.ಗಳನ್ನು ವ್ಯಯಿಸಲಾಗುತ್ತಿದೆ. ಮೊಟ್ಟೆ ಬೇಯಿಸಲು ಬೇಕಾದ ಪಾತ್ರೆಯನ್ನು ಶಾಲೆಯ ಮುಖ್ಯಶಿಕ್ಷಕರು ಹಾಗೂ ಎಸ್‌ಡಿಎಂಸಿ ಸದಸ್ಯರು ಜೊತೆಗೂಡಿ ಪಡೆದುಕೊಂಡಿದ್ದಾರೆ. ಮೈಸೂರು ಜಿಲ್ಲೆಯಲ್ಲಿ 1,62,417 ವಿದ್ಯಾರ್ಥಿಗಳು 1 ರಿಂದ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಅದರಲ್ಲಿ 1,41,515 ವಿದ್ಯಾರ್ಥಿಗಳು ಮೊಟ್ಟೆ ಆಯ್ಕೆ ಮಾಡಿಕೊಂಡರೆ, 13,510 ಬಾಳೆ ಹಣ್ಣು ಹಾಗೂ 7392 ವಿದ್ಯಾರ್ಥಿಗಳು ಚಿಕ್ಕಿಯನ್ನು ಆಯ್ಕೆ ಮಾಡಿಕೊಂಡು ಪೌಷ್ಟಿಕಾಂಶದ ಲಾಭ ಪಡೆದುಕೊಳ್ಳುತ್ತಿದ್ದಾರೆ ಎಂದು ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಶ್ರೀ ರಾಜರಾಜೇಶ್ವರಿ ದೇವತಾ ಉತ್ಸವಮೂರ್ತಿ ಪ್ರತಿಷ್ಠಾಪನೆ, ಕುಂಭಾಭಿಷೇಕ ಕಾರ್ಯಕ್ರಮ



ಮೈಸೂರು, ಜ.29–ಮೈಸೂರಿನ ರಾಜರಾಜೇಶ್ವರಿ ನಗರದಲ್ಲಿ ಶ್ರೀ ಮಹಾಗಣಪತಿ ಮತ್ತು ಶ್ರೀ ಸುಬ್ರಹ್ಮಣ್ಯಸ್ವಾಮಿ ಸಹಿತ ಪ್ರತಿಷ್ಠಾಪನೆಗೊಂಡಿರುವ ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಫೆ.4 ಮತ್ತು 5ರಂದು ತ್ರಿಗುಣಾತ್ಮಿಕ ಶ್ರೀ ರಾಜರಾಜೇಶ್ವರಿ ದೇವತಾ ಉತ್ಸವಮೂರ್ತಿ ಚರ ಪ್ರತಿಷ್ಠಾಪನಾ ಮತ್ತು ಕುಂಭಾಭಿಷೇಕ ಮಹೋತ್ಸವವನ್ನು ಏರ್ಪಡಿಸಲಾಗಿದೆ. ಫೆ.4ರಂದು ಬೆಳಗ್ಗೆ 6.30ಕ್ಕೆ ಬೋಗಾದಿ ರಿಂಗ್ ರಸ್ತೆಯ ಶಿವನ ದೇವಸ್ಥಾನದಿಂದ 108 ಕಳಸಗಳನ್ನು ಹೊತ್ತ ಮಹಿಳೆಯರು ಮೆರವಣಿಗೆಯಲ್ಲಿ ಸಾಗಿ ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸುವರು.

ಶ್ರೀ ಗಣಪತಿ ಪೂಜೆ, ಗಂಗಾ ಪೂಜೆ, ಸ್ವಸ್ತಿ ಪುಣ್ಯಾಹ, ಋತ್ವಿಗ್ವರಣ ವಿಹಿತ ಕಳಸ ಸ್ಥಾಪನೆ, ಗ್ರಹ ಯಜ್ಞ ಅಧಿವಾಸಗಳು, ಮಹಾಮಂಗಳಾರತಿ ನಡೆಯಲಿದೆ. ಅಂದು ಸಂಜೆ 6.30ಕ್ಕೆ ಸ್ಥಾಪಿತ ದೇವತಾ ಪೂಜೆ, ವಿಹಿತ ಹೋಮ ಸೇರಿದಂತೆ ವಿವಿಧ ಹೋಮ–ಹವನಗಳು ನಡೆಯಲಿದೆ.

ಫೆ.5ರಂದು ಮುಂಜಾನೆಯಿಂದ ವಿವಿಧ ಹೋಮ–ಹವನ ಮತ್ತು ಧಾರ್ಮಿಕ ಕಾರ್ಯಕ್ರಮಗಳ ಮೂಲಕ ತ್ರಿಗುಣಾತ್ಮಿಕ ಶ್ರೀ ರಾಜರಾಜೇಶ್ವರಿ ದೇವತಾ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುವುದು. ನಂತರ ಉತ್ಸವಮೂರ್ತಿ ಹಾಗೂ ಈಗಾಗಲೇ ಪ್ರತಿಷ್ಠಾಪಿತಗೊಂಡಿರುವ ರಾಜರಾಜೇಶ್ವರಿ ದೇವಿಗೆ ಕುಂಭಾಭಿಷೇಕ ಕಾರ್ಯಕ್ರಮ ನಡೆಯಲಿದೆ.

ಮಧ್ಯಾಹ್ನ 12 ಗಂಟೆಗೆ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ತಲಕಾಡು ಗಜಾರಣ್ಯ ಕ್ಷೇತ್ರ ಶ್ರೀ ಬಾಲಕೃಷ್ಣಾನಂದ ಮಹಾಸಂಸ್ಥಾನಂನ ಶ್ರೀ ಗೋವಿಂದಾನಂದ ಸರಸ್ವತಿ ಮಹಾಸ್ವಾಮಿಗಳು ಸಾನಿಧ್ಯ ವಹಿಸಿ, ಆಶೀರ್ವಚನ ನೀಡುವರು. ಶಾಸಕ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸುವರು. ಬೆಮೆಲ್ ಮೈಸೂರು ವಿಭಾಗದ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ವಿ.ವೆಂಕಟಸುಬ್ಬರಾವ್, ಬೆಮೆಲ್ ಕಾರ್ಮಿಕ ಸಂಘದ ಅಧ್ಯಕ್ಷ ಗೋವಿಂದ ರೆಡ್ಡಿ, ಬಿಇಎಂಎಲ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ರಾಜೇಶ್ ರಾಜೇ ಅರಸ್, ಬೆಮೆಲ್ ಅಧಿಕಾರಿಗಳ ಒಕ್ಕೂಟದ ಜಂಟಿ ಕಾರ್ಯದರ್ಶಿ ಜಿ.ಮಾದೇಗೌಡ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಕೆ.ಆರ್.ಕ್ಷೇತ್ರದಲ್ಲಿ ಬಿಜೆಪಿ ಗೋಡೆಬರಹ ಅಭಿಯಾನ



ಮೈಸೂರು, ಜ.29– ಮೈಸೂರು ನಗರಬಿಜೆಪಿ ಯುವ ಮೋರ್ಚಾ ಹಾಗೂ ಕೃಷ್ಣರಾಜ ಯುವ ಮೋರ್ಚಾ ವತಿಯಿಂದ ವಿಜಯ ಸಂಕಲ್ಪ ಅಭಿಯಾನದ ಅಂಗವಾಗಿ ಕೃಷ್ಣರಾಜ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮನ್ ಕಿ ಬಾತ್ ಕಾರ್ಯಕ್ರಮವನ್ನು ವೀಕ್ಷಿಸಿ, ನಂತರ ಬಿಜೆಪಿ ಸದ್ಯಸತ್ವವನ್ನು ಮಿಸ್ ಕಾಲ್ ಕೊಡಿಸುವ ಮೂಲಕ ನೊಂದಣಿ ಮಾಡಿಸಿ ಹಾಗೂ ಜೋಡಿ ಬಸವೇಶ್ವರ ದೇವಸ್ಥಾನದ ಬಳಿ ಗೋಡೆ ಬರಹ ಅಭಿಯಾನಕ್ಕೆ ರಾಜ್ಯ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸಂದೀಪ್ ಕುಮಾರ್ ಚಾಲನೆ ನೀಡಿದರು.

ಈ ಸಂದರ್ಭ ಮಾತನಾಡಿದ ಅವರು ಬಿಜೆಪಿಯ ಯುವಮೋರ್ಚಾ ಮೈಸೂರು ನಗರ ಕರ್ನಾಟಕದಲ್ಲಿ ಅತ್ಯಂತ ಚುರುಕಿನ ಕೆಲಸ ಮಾಡುತ್ತಿದೆ,ಯುವ ಮತದಾರರು ನರೇಂದ್ರ ಮೋದಿಯವರ ಕಾರ್ಯಕ್ರಮಗಳಿಗೆ ಮತ ನೀಡಲಿದ್ದಾರೆ. ಯುವಮೋರ್ಚಾ ಸುಮಾರು 10ಲಕ್ಷ ಮತದಾರರ ನೋಂದಣಿ ಮಾಡಿಸಲಿದೆ. ಗೋಡೆಬರಹ ಅಭಿಯಾನ ಒಂದು ಮಾದರಿ ಅಭಿಯಾನ. ಈ ವರ್ಷದ ಮೊದಲನೆ ಮನ್ ಕಿ ಬಾತ್ ಕಾರ್ಯಕ್ರಮ ನಡೆದಿದೆ ಎಂದರು.

ನಂತರ ಮಾತನಾಡಿದ ನಗರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಎಂ.ಜೆ. ಕಿರಣ್‌ಗೌಡ, ಪಕ್ಷದ ಯುವಕರು ಕೇಂದ್ರದಲ್ಲಿ ನರೇಂದ್ರ ಮೋದಿ ಅವರ ಆಡಳಿತ ಕರ್ನಾಟಕದಲ್ಲಿ ಬಸವರಾಜ ಬೊಮ್ಮಾಯಿ ಅವರ ಆಡಳಿತ ನೋಡಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಬಿಜೆಪಿ ಯುವಮೋರ್ಚಾ ಸೇರ್ಪಡೆಗೊಳ್ಳುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಹಲವು ವಿಧಾನಸಭಾ ಕ್ಷೇತ್ರಗಳು ಯುವ ಮೋರ್ಚಾದ ಹಲವು ಪದಾಧಿಕಾರಿಗಳ ಪಾಲಾಗಲಿದೆ. ಯುವಕರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ವಿಧಾನಸಭೆ ಪ್ರವೇಶಿಸುವ ಅವಕಾಶವನ್ನು ಬಿಜೆಪಿ ಯುವ ಮೋರ್ಚಾ ಕಲ್ಪಿಸಿಕೊಡುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷರಾದ ಜಯಶಂಕರ್ ಮತ್ತು ಹರ್ಷಿತ್, ನಗರ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಎಸ್ ಭರತ್ ಮತ್ತು ಸಂತೋಷ್ ಕುಮಾರ್, ಯುವ ಮೋರ್ಚಾ ನಗರ ಉಪಾಧ್ಯಕ್ಷರಾದ ನಿಶಾಂತ್, ಕಾರ್ತಿಕ್ ಮರಿಯಪ್ಪ ಮತ್ತು ಸಚಿನ್, ನಗರ ಕಾರ್ಯದರ್ಶಿಗಳಾದ ಹರ್ಷಿತ್ ಮತ್ತು ಮಧು, ಕೃಷ್ಣರಾಜ ಯುವ ಮೋರ್ಚಾ ಮಂಡಲ ಅಧ್ಯಕ್ಷ ಮನು, ಪ್ರಧಾನ ಕಾರ್ಯದರ್ಶಿಗಳಾದ ಅಕ್ಷಯ್ ಮತ್ತು ರವಿ ಮುಂತಾದವರು ಉಪಸ್ಥಿತರಿದ್ದರು.

ರಿಯಾಯಿತಿ ದರದಲ್ಲಿ ಉಡುಪು ಮಾರಾಟ



ಮೈಸೂರು, ಜ.29–ಮೈಸೂರಿನ ವಿನೋಬಾ ರಸ್ತೆಯಲ್ಲಿರುವ ಹೋಟೆಲ್ ಸದರ್ನ್ ಸ್ಟಾರ್‌ನಲ್ಲಿ ಜ.27ರಿಂದ ನಡೆಯುತ್ತಿರುವ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಗುಣಮಟ್ಟದ ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್‌ಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಈ ಸೇಲ್ ಸೋಮವಾರ ಕೊನೆಯ ದಿನ. ಮಹಿಳೆಯರ, ಪುರುಷರ, ಮಕ್ಕಳ ರೇಡಿಮೇಡ್ ಗಾರ್ಮೆಂಟ್ಸ್‌ಗಳಿಗೆ ಭಾರಿ ರಿಯಾಯಿತಿ ದರದಲ್ಲಿ 10,000ಕ್ಕಿಂತಲೂ ಮಿಗಿಲಾದ ವಿವಿಧ ಪ್ರಕಾರದ ಜೆಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್, ಟೀಶರ್ಟ್ಸ್, ಲೋವರ್, ಟಾಪ್, ಬರ್ಮುಡಾ, ಕ್ಯಾಪ್ರಿ, ಪ್ಲಾಜೋ, ಲೇಡಿಸ್ ಪೈಜಾಮ ಕಿಡ್ಸ್–ಡ್ರೆಸ್, ಶರ್ಟ್, ಕುರ್ತಿಸ್, ನೈಟಿ, ಕೇವಲ 150 ರೂ.ರಿಂದ 350 ರೂ.ಗಳವರೆಗೆ ಮಾತ್ರ ಲಭ್ಯವಿದೆ. ಬ್ರಾಂಡೆಡ್ ಲೇಡಿಸ್ ಮಲ್ಟಿ ಗ್ರೀನ್ ಕಾಟನ್ ಕುರ್ತಿಸ್, ವಿವಿಧ ಬಣ್ಣಗಳ ಕುರ್ತಿಸ್, ಎಕ್ಸಲೆಂಟ್ ಪಾರ್ಟಿವೇರ್ ಕುರ್ತಿಸ್, ಎಂಬ್ರಾಯಿಡರಿ ರಯಾನ್ ಕುರ್ತಿಸ್, ಪ್ರಿಂಟೆಡ್ ಕಾಟನ್ ಲಾಂಗ್ ಶರ್ಟ್ ಮತ್ತು ಶಾರ್ಟ್ ಕುರ್ತಿಸ್‌ಗಳು ಇವೆ ಕಿಡ್ಸ್ ಕೌಂಟರ್‌ನಲ್ಲಿ ಹುಡುಗಿಯರ ಟಾಪ್ ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಶರ್ಟ್ಸ್, ಟೀ–ಶರ್ಟ್ಸ್, ಫ್ಲ ಲೋವರ್, ಫ್ಯಾನ್ಸಿ ಡ್ರೆಸ್, ಜ್ಯಾಕೆಟ್ಸ್ ಲಭ್ಯವಿರುವುದು. ಗರ್ಲ್ ಆ್ಯಂಡ್ ಲೇಡಿಸ್ ರೆಡಿಮೇಡ್ ಗಾರ್ಮೆಂಟ್ಸ್ ರೂ. 150 ರಿಂದ 250ರವರೆಗೆ ಲೇಡಿಸ್ ಆ್ಯಂಡ್ ಜೆಂಟ್ಸ್ ಬ್ರಾಂಡೆಡ್ ಅಂಡರ್ ಗಾರ್ಮೆಂಟ್ಸ್ ರೂ. 60 ರಿಂದ 125ರವರೆಗೆ ಇರುತ್ತದೆ. ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ ಎಂದು ವ್ಯವಸ್ಥಾಪಕ ಗಜೇಂದ್ರರವರು ಜಾಜಿ ತಿಳಿಸಿದರು.

ವಿಶೇಷಚೇತನರು ಆತ್ಮವಿಶ್ವಾಸದಿಂದ ಮುನ್ನಡೆಯಿರಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ



ನಂಜನಗೂಡು, ಜ.29– ವಿಶೇಷ ಚೇತನರು ಬದುಕಿನಲ್ಲಿ ಆತ್ಮವಿಶ್ವಾಸದಿಂದ ಮುನ್ನಡೆಯಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನಗರದ ಶ್ರೀಕಂಠೇಶ್ವರ ದೇವಾಲಯದ ಆವರಣದಲ್ಲಿ ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಿಂದ ಏರ್ಪಡಿಸಿದ್ದ ವಿಶೇಷಚೇತನರಿಗೆ ಉಚಿತ ಸಾಧನ ಸಲಕರಣೆ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಧಾನಿ ಮೋದಿ ವಿಶೇಷಚೇತನರು ಕೂಡ ಸಾಮಾನ್ಯ ಜನರಂತೆ ಕೆಲಸ ಮಾಡಬೇಕೆಂಬ ಹಂಬಲದೊಂದಿಗೆ ವಿಶೇಷ ಕಾರ್ಯಕ್ರಮ ರೂಪಿಸಿ, ಈ ಯೋಜನೆಗೆ ಯಾವುದೇ ಮಿತಿ ವಿಧಿಸದೆ ಎಲ್ಲಾ ವಿಶೇಷಚೇತನರಿಗೆ ಬೇಕಾಗಿರುವ ಸಾಧನ ಸಲಕರಣೆ ನೀಡುವ ಮೂಲಕ ಆಸರೆಯಾಗಿದ್ದಾರೆ. ನಾವು ಇನ್ನಷ್ಟು ಶಿಬಿರ ನಡೆಸಿ ವಿಶೇಷಚೇತನರನ್ನು ಗುರ್ತಿಸಿ ಅವರಿಗೆ ಅವಶ್ಯಕವಿರುವ ಸಾಧನ ಸಲಕರಣೆ ವಿತರಿಸಲಾಗುವುದು. ಇದು ಕೇಂದ್ರ ಸರ್ಕಾರದ ಯೋಜನೆಯಾದರೂ ಜನರಿಗೆ ಸೇವೆ ನೀಡುವುದರಲ್ಲಿ ಕೇಂದ್ರ, ರಾಜ್ಯ ಸರ್ಕಾರವೆಂಬ ತಾರತಮ್ಯ ಬೇಡ. ಸರ್ಕಾರದ ಕಾರ್ಯಕ್ರಮ ಎನ್ನುವುದಕ್ಕಿಂತ ವಿಶೇಷಚೇತನರಿಗೆ ನೆರವು ನೀಡಿ ಪುಣ್ಯ ಪಡೆದುಕೊಳ್ಳುವ ಕಾರ್ಯಕ್ರಮವಾಗಿದ್ದು, ಶಾಸಕರೂ ಕೂಡ ಆಸಕ್ತಿವಹಿಸಿ ವಿಕಲ ಚೇತನರನ್ನು ಗುರ್ತಿಸಿ ಸಲಕರಣೆ ವಿತರಣೆಗೆ ಕ್ರಮ ವಹಿಸಬೇಕು ಎಂದರು.

ರಾಜ್ಯ ಸರ್ಕಾರದಿಂದಲೂ ಕೂಡ ವಿಶೇಷ ಚೇತನರಿಗೆ ನೆರವಾಗುವ ಹಲವು ಕಾರ್ಯಕ್ರಮ ರೂಪಿಸಲಾಗಿದೆ. ನಾನು ಮುಖ್ಯಮಂತ್ರಿಯಾದ ನಂತರ ಅಂಗವಿಕಲರಿಗೆ ಮಾಸಾಶನ ಹೆಚ್ಚಿಸಲಾಗಿದೆ. ರಾಜ್ಯ ಸರ್ಕಾರ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಶಿಬಿರ ನಡೆಸಿ ವಿಶೇಷ ಚೇತನರನ್ನು ಗುರ್ತಿಸಿ ಸಲಕರಣೆ ವಿತರಿಸಲಾಗುವುದು. ಜೊತೆಗೆ ವಿಶೇಷಚೇತನರಿಗೆ ಬಜೆಟ್‌ನಲ್ಲಿ ವಿಶೇಷ ಕಾರ್ಯಕ್ರಮ ರೂಪಿಸಲಾಗುವುದು. ಕಿವಿ ಕೇಳಿಸದವರಿಗೆ ಕಿವಿ ಸಾಧನ ಸಲಕರಣೆ ವಿತರಿಸಲು 5 ಕೋಟಿ ಮೀಸಲಿಡಲಾಗಿದೆ. ಅಂಗವಿಕಲರಿಗೆ 3 ಚಕ್ರದ ಸ್ಕೂಟರ್, ಸೈಕಲ್ ವಿತರಿಸಲಾಗುವುದು. ಹಿರಿಯ ನಾಗರಿಕರಿಗೆ ಕಣ್ಣಿನ ತಪಾಸಣೆ ನಡೆಸಿ ಸರ್ಕಾರದಿಂದಲೇ ಸರ್ಜರಿ ನಡೆಸಿ ಕನ್ನಡಕ ವಿತರಿಸಲಾಗುವುದು. ಎಲ್ಲಾ ತಾಲೂಕುಗಳಲ್ಲಿ 100 ಜನರಿಗೆ ಸ್ವಯಂ ಉದ್ಯೋಗ ನೀಡುವುದರಲ್ಲಿ ಅಂಗವಿಕಲರಿಗೂ ಮೀಸಲಾತಿ ನೀಡಿ ವ್ಯಾಪಾರ ಮಾಡಲು ಅನುದಾನ ನೀಡಲಾಗುವುದು. ಎಲ್ಲಾ ವರ್ಗದ ಜನರು ಅಭಿವೃದ್ಧಿಯಾದಾಗ ಅಭಿವೃದ್ಧಿಗೆ ಅರ್ಥ ಬರುತ್ತದೆ. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳಿವೆ. ಆದರೆ ಆ ಹಕ್ಕುಗಳನ್ನು ಪಡೆಯಲು ಸಾಧ್ಯವಾಗದವರಿಗೆ ಕೊಡಿಸುವ ಶಕ್ತಿಯನ್ನು ಸರ್ಕಾರ, ಅಧಿಕಾರಿಗಳು ಜನಪ್ರತಿನಿಧಿಗಳು ಸೇರಿ ಮಾಡಬೇಕಿದೆ ಕಿಸಾನ್ ಸಮ್ಮಾನ್, ಕೂಲಿ ಕಾರ್ಮಿಕರ ನಿಧಿ ಸೇರಿದಂತೆ ಹಲವು ಯೋಜನೆಗಳು ಮುಂದಿನ ತಿಂಗಳು ಜಾರಿಯಾಗಲಿದ್ದು, ಆಗ ಪ್ರತಿ ಕ್ಷೇತ್ರದಲ್ಲಿ 50 ಸಾವಿರ ಜನರು ಫಲಾನುಭವಿಗಳಾಗಲಿದ್ದಾರೆ. ಹುಟ್ಟು ಸಾವು ಎಲ್ಲರಿಗೂ ಸಮಾನ ಈ ಮಧ್ಯೆ ಬದುಕಿನಲ್ಲಿ ಏನು ಸಾಧನೆ ಮಾಡಿದ್ದೇವೆ ಎನ್ನುವುದೇ ಸಾಧನೆ ಎಂದರು.

ಸಾಮಾಜಿಕ ಸಮುಚ್ಛಯ ನಿರ್ಮಾಣಕ್ಕೆ ಕ್ರಮ: ವಿ.ಶ್ರೀನಿವಾಸಪ್ರಸಾದ್ ಅವರಿಗೆ ಎಲ್ಲಾ ಸಮುದಾಯದವರಿಗೂ ಸಾಮಾಜಿಕ ಸಮುಚ್ಛಯ ಕಟ್ಟಿಕೊಡಬೇಕೆಂಬ ಕನಸಿದೆ. ಹಿರಿಯರ ಕನಸನ್ನು ನೆರವೇರಿಸಲು ಕ್ರಮವಹಿಸುವಂತೆ ಸೂಚಿಸಲಾಗಿದೆ. ಪ್ರಸಾದ್ ಅವರು 3 ಸಾವಿರ ಅಂಗವಿಕಲರನ್ನು ಗುರ್ತಿಸಿ ಅವರಿಗೆ ಅವಶ್ಯಕವಾಗಿರುವ ಸಾಧನ ಸಲಕರಣೆ ವಿತರಿಸುವ ಪುಣ್ಯ ಕೆಲಸದಲ್ಲಿ ನಿರತರಾಗಿದ್ದಾರೆ. ಇದರಿಂದ ಅವರ ಹೃದಯ ವೈಶಾಲ್ಯತೆ ಎಷ್ಟು ದೊಡ್ಡದು ಎಂಬುದು ಗೊತ್ತಾಗುತ್ತದೆ ಎಂದು ಶ್ಲಾಘಿಸಿದರು.

ಹರ್ಷವರ್ಧನ್‌ರನ್ನು ಮತ್ತೊಮ್ಮೆ ಆಶೀರ್ವದಿಸಿ: ಹರ್ಷವರ್ಧನ್ ಕ್ರಿಯಾಶೀಲ ಶಾಸಕ ಮತ್ತು ಒಬ್ಬ ಕಾಯಕ ಯೋಗಿ. ನಾನು ಸಿಎಂ ಆದ ಮೇಲೆ ನನ್ನಿಂದ 500 ಕೋಟಿವರೆಗೂ ಅನುದಾನ ಬಿಡುಗಡೆ ಮಾಡಿಸಿ ಕ್ಷೇತ್ರದ ಅಭಿವೃದ್ಧಿಗೆ ಮುಂದಾಗಿದ್ದಾರೆ. ತಪ್ಪು ಕಂಡು ಹಿಡಿಯುವವರ ಹಾಗೂ ತಮ್ಮ ಬಗ್ಗೆ ಮಾತನಾಡುವವರ ಮಧ್ಯೆ ಇದ್ದು, ತಾವು ಅಂದುಕೊಂಡಂತೆ ಗುರಿ ಮುಟ್ಟಲು ಹರ್ಷವರ್ಧನ್ ಪ್ರಾಮಾಣಿಕವಾಗಿ ಜನಸೇವೆಯಲ್ಲಿ ತೊಡಗಿದ್ದಾರೆ. ಇಂತವರ ಮೇಲೆ ನಿಮ್ಮೆಲ್ಲರ ಆಶೀರ್ವಾದ ಮುಂದೆಯೂ ಇರಲಿ ಎಂದರು.

ಸಂಸದ ಶ್ರೀನಿವಾಸ ಪ್ರಸಾದ್ ಮಾತನಾಡಿ, ಪ್ರಧಾನಿ ಮೋದಿ ವಿಶೇಷಚೇತನರಿಗೆ ಆಸರೆ ನೀಡುವ ಸಲುವಾಗಿ ವಿಶೇಷ ಕಾರ್ಯಕ್ರಮ ರೂಪಿಸಿ 68 ಲೋಕಸಭಾ ಕ್ಷೇತ್ರದಲ್ಲಿ ವರ್ಚುವಲ್ ಮೂಲಕ ಚಾಲನೆ ನೀಡಿದ್ದಾರೆ. ಕನಾಟಕದ 28 ಲೋಕಸಭಾ ಕ್ಷೇತ್ರದಲ್ಲಿ ಚಾಮರಾಜನಗರ ಕ್ಷೇತ್ರ ಮಾತ್ರ ಆಯ್ಕೆ ಮಾಡಿ ಈ ಕಾರ್ಯಕ್ರಮ ರೂಪಿಸಲಾಗಿದೆ ಈಗಾಗಲೇ ಪಂಚಾಯ್ತಿ ಮಟ್ಟದಲ್ಲೂ ಪ್ರಚಾರ ನಡೆಸಿ ಶಿಬಿರ ನಡೆಸಿ ವಿಕಲಾಂಗರನ್ನು ಗುರ್ತಿಸಿ ಅವರಿಗೆ ಅವಶ್ಯಕವಿರುವ 32 ಬಗೆಯ ಸಾಧನ ಸಲಕರಣೆಗಳನ್ನು ವಿತರಿಸಲಾಗಿದೆ. ಸಾಮಾಜಿಕ ಸಮುಚ್ಛಯ ನಿರ್ಮಾಣಕ್ಕೆ ಶ್ರೀಕಂಠೇಶ್ವರ ದೇವಾಲಯದ 8 ಕೋಟಿ ಅನುದಾನ ಬಳಕೆ ಮಾಡಿ ಕೊಡಲು ಮುಖ್ಯಮಂತ್ರಿಗಳು ಒಪ್ಪಿಗೆ ನೀಡಿದ್ದಾರೆ. ಸಮುಚ್ಛಯದ ಯೋಜನೆ ಸಿದ್ಧಗೊಳ್ಳುತ್ತಿದ್ದು ನಿರ್ಮಾಣಕ್ಕೆ ಚಾಲನೆ ನೀಡಲಾಗುವುದು ಎಂದರು.

ಸಮಾರಂಭದಲ್ಲಿ ಶಾಸಕ ಬಿ.ಹರ್ಷವರ್ಧನ್, ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಕಾಡಾ ಅಧ್ಯಕ್ಷ ನಿಜಗುಣರಾಜು, ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವ ಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಜಿಲ್ಲಾಧಿಕಾರಿ ಕೆ.ಇ.ರಾಜೇಂದ್ರ, ಎಸಿ ಕಮಲಾಬಾಯಿ, ಜಿಪಂ ಸಿಇಓ ಪೂರ್ಣಿಮಾ, ಕಾರ್ಯದರ್ಶಿ ಕೃಷ್ಣಂರಾಜು, ತಹಸೀಲ್ದಾರ್ ಎಂ.ಶಿವಮೂರ್ತಿ, ತಾಪಂ ಇಓ ಹೆಚ್.ಜಿ. ಶ್ರೀನಿವಾಸ್ ಇನ್ನಿತರರಿದ್ದರು.

ಮುಖ್ಯಮಂತ್ರಿಗೆ ಕಪ್ಪು ಬಾವುಟ ಪ್ರದರ್ಶನ ಯತ್ನ

ದಸಂಸ ಮುಖಂಡರ ಬಂಧನ, ಬಿಡುಗಡೆ

ನಂಜನಗೂಡು, ಜ.29– ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಸಮೀಪ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಲು ಯತ್ನಿಸಿದ ದಸಂಸ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದು ನಂತರ ಬಿಡುಗಡೆಗೊಳಿಸಿದರು.

ದಸಂಸ ಮುಖಂಡರಾದ ಮಲ್ಲಹಳ್ಳಿ ನಾರಾಯಣ್, ನಗರ್ಲೆ ವಿಜಯಕುಮಾರ್ ಅವರನ್ನು ವಶಕ್ಕೆ ಪಡೆದು ನಂತರ ಬಿಡುಗಡೆಗೊಳಿಸಿದರು.

ನಾರಾಯಣ ಸುದ್ದಿಗಾರರೊಂದಿಗೆ ಮಾತನಾಡಿ, ಕಳೆದ ಬಾರಿ ಮುಖ್ಯಮಂತ್ರಿಗಳು ನಂಜನಗೂಡಿಗೆ ಆಗಮಿಸಿದ್ದ ವೇಳೆ ರಾಜ್ಯದಲ್ಲಿ 60 ಲಕ್ಷ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಕಡಿತಗೊಳಿಸಿರುವುದನ್ನು ಬಿಡುಗಡೆ ಮಾಡಬೇಕು ಹಾಗೂ ಎನ್‌ಇಪಿ ನೆಪದಲ್ಲಿ ಶಿಕ್ಷಣ ಕೇಸರಿಕರಣಗೊಳಿಸಲು ಹೊರಟಿರುವುದನ್ನು ಖಂಡಿಸಿ ಹೊಸ ಶಿಕ್ಷಣ ನೀತಿ ವಾಪಸ್ ಪಡೆಯಬೇಕು. ರಾಜ್ಯದಲ್ಲಿ ಹೆಚ್ಚಾಗುತ್ತಿರುವ ಪರಿಷ್ಟ ಜಾತಿ ಮತ್ತು ಪಂಗಡದ ಮೇಲಿನ ದೌರ್ಜನ್ಯ ತಡೆಯಲು ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿತ್ತು. ಆದರೆ ನಮ್ಮ ಮನವಿಗೆ ಸ್ಪಂದಿಸಿದ ಕಾರಣ ಮುಖ್ಯಮಂತ್ರಿಗಳಿಗೆ ಕಪ್ಪುಪಟ್ಟಿ ಪ್ರದರ್ಶಿಸಲು ತೀರ್ಮಾನಿಸಿದ್ದೆವು ಎಂದರು.



ಪಿರಿಯಾಪಟ್ಟಣ ತಾಲೂಕಿನ ಸುರಗನಹಳ್ಳಿ ಸರ್ಕಾರಿ ಶಾಲೆ ವಾರ್ಷಿಕೋತ್ಸವ ನಡೆಯಿತು. ಈ ವೇಳೆ ಬಿಇಓ ಬಸವರಾಜ್, ಮಾಜಿ ತಾಪಂ ಸದಸ್ಯ ಶಂಕರೇಗೌಡ, ಮುಖಂಡರಾದ ಮಾರುತಿಗೌಡ, ವೆಂಕಟೇಶ್, ಐಕಾನ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ರವಿ, ಜೆಡಿಎಸ್ ಪ್ರಧಾನ ಕಾರ್ಯದರ್ಶಿ ವಿದ್ಯಾಶಂಕರ್, ಎಸ್‌ಡಿಎಂಸಿ ಅಧ್ಯಕ್ಷ ಚಂದ್ರೇಗೌಡ, ನಿವೃತ್ತ ಮುಖ್ಯ ಶಿಕ್ಷಕ ತಿಮ್ಮೇಗೌಡ, ಸಿಆರ್‌ಪಿ ಮಲ್ಲಿಕಾರ್ಜುನ್, ಶಿಕ್ಷಕರಾದ ನಾಗಣ್ಣೇಗೌಡ, ಕೃಷ್ಣ ನಾಯಕ್, ಕ್ಷೇತ್ರ ಸಮಯ ಅಧಿಕಾರಿ ಗಣೇಶ್, ಮುಖ್ಯ ಶಿಕ್ಷಕಿ ರಾಧಾಮಣಿ ಹಾಗೂ ಸಹ ಶಿಕ್ಷಕರು ಗ್ರಾಮಸ್ಥರು ಹಾಜರಿದ್ದರು.

ಜೈ ಭಜರಂಗಿ ಫೌಂಡೇಷನ್ ಸೇವಾ ಟ್ರಸ್ಟ್ ಉದ್ಘಾಟನೆ



ಹುಣಸೂರು, ಜ.29– ನಿಸ್ವಾರ್ಥ, ಸಮಾಜಮುಖಿ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವ ಮೂಲಕ ಸಂಘ ಸಂಸ್ಥೆಗಳ ಸ್ಥಾಪನೆ ಸದುದ್ದೇಶ ಈಡೇರುವಂತೆ ನೋಡಿಕೊಳ್ಳಬೇಕು ಎಂದು ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಹಾಗೂ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ ಕರೆ ನೀಡಿದರು.

ತಾಲೂಕಿನ ಹೊಸಪೆಂಜಹಳ್ಳಿಯಲ್ಲಿ ಜೈ ಭಜರಂಗಿ ಫೌಂಡೇಷನ್ ಸೇವಾ ಟ್ರಸ್ಟ್ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳಲ್ಲಿ ಕಂಡು ಬರುವ ಹಲವು ಸಮಸ್ಯೆಗಳ ನಿವಾರಣೆಗೆ ಜನರು ಹೋರಾಟದ ಮೂಲಕ ಪರಿಹಾರ ಕಂಡುಕೊಳ್ಳಬಹುದಾಗಿದ್ದು, ಹತ್ತಾರು ವರ್ಷಗಳ ಸುದೀರ್ಘ ಹೋರಾಟದ ಫಲವಾಗಿ ಸರ್ಕಾರ ಹಲವು ಕಾರ್ಯಕ್ರಮ ತರಲು ಸಹಕಾರಿಯಾಗುತ್ತದೆ ಎಂದರು.

ಉದ್ಯಮಿ ಅಣ್ಣೇಗೌಡ ಮಾತನಾಡಿ, ತಮ್ಮ ವಚನಗಳ ಮೂಲಕ ಸಮಾಜ ಎಚ್ಚರಿಸಿದ ವಿಶ್ವಗುರು ಬಸವಣ್ಣನವರ ತತ್ವ ಸಂದೇಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳುವ ಮೂಲಕ ಸಮಾಜದಲ್ಲಿ ಶಾಂತಿ ಹಾಗೂ ನೆಮ್ಮದಿ ಕಂಡುಕೊಳ್ಳಬಹುದಾಗಿದೆ ಎಂದರು.

ಈ ವೇಳೆ ಜೆಡಿಎಸ್ ಮುಖಂಡರಾದ ರಂಜಿತಾ ಚಿಕ್ಕಮಾದು, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸತೀಶ್ ಪಾಪಣ್ಣ, ಗ್ರಾಪಂ ಅಧ್ಯಕ್ಷ ರಾಮಕೃಷ್ಣ, ದೊಡ್ಡಹೆಜ್ಜೂರು ಗ್ರಾಪ ಅಧ್ಯಕ್ಷ ಸುಭಾಷ್, ಚಂದ್ರೇಗೌಡ, ಕಾವ್ಯ, ಸುರೇಶ್, ಗೌರವ ಅಧ್ಯಕ್ಷ ಚೇತನ್, ಅಧ್ಯಕ್ಷ ಪ್ರವೀಣ್, ಉಪಾಧ್ಯಕ್ಷ ಅನಿಲ ಕುಮಾರ್, ಪ್ರಧಾನ ಕಾರ್ಯದರ್ಶಿ ರಮೇಶ್, ಸಂತೋಷ್, ಪ್ರಸನ್ನ, ಪುಟ್ಟೇಗೌಡ, ವಿಜಯಶಂಕರ್, ಮಂಜು, ರವಿ, ನಾಗೇಂದ್ರ, ಚೆಲುವರಾಜ್, ಮೋಹನ್ ಹಾಗೂ ಮತ್ತಿತರರಿದ್ದರು.

ಜೆಡಿಎಸ್‌ನಿಂದ ಮಾತ್ರ ರೈತರ ಹಿತ ಕಾಯಲು ಸಾಧ್ಯ

ಹಾಸನದಿಂದ ಯಾರನ್ನೇ ಕಣಕ್ಕಿಳಿಸಿದರೂ ಅದಕ್ಕೆ ಬದ್ಧ: ಮಾಜಿ ಸಚಿವ ಹೆಚ್.ಡಿ.ರೇವಣ್ಣ



ಬೆಟ್ಟದಪುರ, ಜ.29– ಜೆಡಿಎಸ್‌ನಿಂದ ಮಾತ್ರ ರಾಜ್ಯದ ರೈತರ ಹಿತ ಕಾಯಲು ಸಾಧ್ಯ. ಹೀಗಾಗಿ ಮತ್ತೊಮ್ಮೆ ಜೆಡಿಎಸ್ ಅಧಿಕಾರಕ್ಕೆ ಬರಬೇಕು ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅಭಿಪ್ರಾಯಪಟ್ಟರು.

ಪಿರಿಯಾಪಟ್ಟಣ ತಾಲೂಕಿನ ಕಣಗಾಲ್ ಗ್ರಾಮದಲ್ಲಿ ಜೆಡಿಎಸ್ ಪಕ್ಷದಿಂದ ಆಯೋಜಿಸಿದ್ದ ಚೈತನ್ಯ ಯಾತ್ರೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಕುಟುಂಬದಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಸನ ವಿಧಾನ ಸಭಾ ಕ್ಷೇತ್ರದಲ್ಲಿ ಯಾರನ್ನೇ ಅಭ್ಯರ್ಥಿಯಾಗಿ ಕಣಕ್ಕಿಳಿಸಿದರೂ ಅದಕ್ಕೆ ನಾವು ಬದ್ಧರಾಗಿರುತ್ತೇವೆ. ಜೆಡಿಎಸ್ ಪಕ್ಷ ಶಾಸಕರನ್ನು ತಯಾರು ಮಾಡುವ ಕಾರ್ಖಾನೆಯಾಗಿದ್ದು, ನಮ್ಮಲ್ಲಿ ಶಾಸಕರು ತಯಾರಾಗಿ ಬೇರೆ ಪಕ್ಷಕ್ಕೆ ಹೋಗಿ ಅಲ್ಲಿ ತಮ್ಮ ಇಂಜಿನ್ ಅನ್ನು ಚಲಾವಣೆ ಮಾಡಿಕೊಳ್ಳುತ್ತಾರೆ ಎಂದರು.

ಶಾಸಕ ಕೆ.ಮಹದೇವ್ ಮಾತನಾಡಿ, ತಾಲೂಕು ಅಭಿವೃದ್ಧಿಯಲ್ಲಿ ಮುಂದಿದೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಅಭಿವೃದ್ಧಿ ಮಾಡಬೇಕಾದರೆ ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಪಕ್ಷಕ್ಕೆ ತಮ್ಮೆಲ್ಲರ ಬೆಂಬಲ ಅಗತ್ಯ. ಮುಂಬರುವ ಚುನಾವಣೆಯಲ್ಲಿ ನನ್ನನ್ನು ಬೆಂಬಲಿಸುವಂತೆ ತಿಳಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಹಲಗನಹಳ್ಳಿ ಗ್ರಾಮದಿಂದ ರಾಜನ ಬಿಳಗುಲಿ ಮಾರ್ಗವಾಗಿ ಕಣಗಾಲ್ ಗ್ರಾಮಕ್ಕೆ ತೆರೆದ ವಾಹನದಲ್ಲಿ ರೋಡ್ ಶೋ ನಡೆಸಿದರು.

ಈ ವೇಳೆ ಪುರಸಭಾಧ್ಯಕ್ಷ ಮಹೇಶ್, ಜಿಪಂ ಮಾಜಿ ಸದಸ್ಯೆ ರುದ್ರಮ್ಮ, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಕಣಗಲ್ ಗ್ರಾ ಪಂ ಅಧ್ಯಕ್ಷೆ ಚಂದ್ರಮ್ಮ, ಚಂದ್ರೇಗೌಡ, ಗೀತಾ, ಉಪಾಧ್ಯಕ್ಷ ಆನಂದ, ಯಜಮಾನರಾದ ಗೋವಿಂದೇಗೌಡ, ಮಾಜಿ ಅಧ್ಯಕ್ಷ ಹನುಮಂತ, ಮಹದೇವ್, ಜೆಡಿಎಸ್ ಮುಖಂಡರಾದ ಕುಮಾರ್‌ಶೆಟ್ಟಿ, ಮಂಜು, ವಿದ್ಯಾಶಂಕರ್, ಹೇಮಂತ್, ಮೋಹನ್ ರಾಜ್, ರಾಮು, ಕುಮಾರ್, ಶಿವರಾಜ್, ಕಾಂತರಾಜು, ಮಂಜುನಾಥ್ ಪುಟ್ಟರಾಜ್, ಕೃಷ್ಣಪ್ಪ, ದಿನೇಶ್ ಹಾಜರಿದ್ದರು.

ಗೋಪಾಲಪುರದಲ್ಲಿ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಗೆ ಚಾಲನೆ



ತಿ.ನರಸೀಪುರ, ಜ.29– ಮುಂಬರುವ ಚುನಾವಣೆಯಲ್ಲಿ ಕ್ಷೇತ್ರದಿಂದ ಪಕ್ಷದ ಶಾಸಕರನ್ನು ಆಯ್ಕೆ ಮಾಡಲು ಕಾರ್ಯಕರ್ತರು ಶ್ರಮಿಸಬೇಕು ಮಾಜಿ ವಿಧಾನ ಪರಿಷತ್ ಸದಸ್ಯ ಸಿ.ರಮೇಶ್ ತಿಳಿಸಿದರು.

ಪಟ್ಟಣದ ಗೋಪಾಲಪುರದಲ್ಲಿ ನಡೆದ ಬಿಜೆಪಿ ಬೂತ್ ವಿಜಯ ಸಂಕಲ್ಪ ಯಾತ್ರೆ ಕಾರ್ಯಕ್ರಮದಲ್ಲಿ ಮನೆ ಮುಂದೆ ಬಿಜೆಪಿ ಬರಹ ಚಿತ್ರ ಬಿಡಿಸುವ ಮೂಲಕ ಅವರು ಮಾತನಾಡಿದರು.

ಬೂತ್ ಎಲ್ಲಿ ಗಟ್ಟಿಯಾಗಿರುತ್ತದೋ ಅಲ್ಲಿ ಮಂಡಲ ಭದ್ರವಾಗಿರುತ್ತದೆ. ಮಂಡಲ ಗಟ್ಟಿಯಾಗಿದ್ದಲ್ಲಿ ಇಡೀ ಕ್ಷೇತ್ರ ಗಟ್ಟಿಯಾಗಿರುತ್ತದೆ. ಆದರೆ ಕ್ಷೇತ್ರ ಗಟ್ಟಿಗೊಳಿಸಲು ಪಕ್ಷದ ಕಾರ್ಯಕರ್ತರು ಹಾಗೂ ಬೂತ್ ಕಮಿಟಿ ಸದಸ್ಯರು ಪರಿಶ್ರಮ ಹಾಕಬೇಕಿದೆ ಎಂದರು.

ಪ್ರಧಾನಿ ಮೋದಿ, ಮಾಜಿ ಸಿಎಂ ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ರಾಜ್ಯದ ಜನತೆಗೆ ನೀಡಿರುವ ಜನೋಪಯೋಗಿ ಕಾರ್ಯಕ್ರಮಗಳನ್ನು ಕ್ಷೇತ್ರದ ಪ್ರತಿ ಮನೆಮನೆಗೂ ತಲುಪಿಸಿ ಜನರಲ್ಲಿ ಪಕ್ಷದ ಬಗ್ಗೆ ವಿಶ್ವಾಸ ಮೂಡಿಸುವ ಕೆಲಸ ಮಾಡಬೇಕು. ಪ್ರತಿಯೊಂದು ಬೂತ್ ಮತ್ತು ಪೇಜ್ ಪ್ರಮುಖ್ ಮಾಡಿ ಪೇಜ್ ಪ್ರಮುಖ್‌ರಿಗೆ ಒಬ್ಬೊಬ್ಬ ಮುಖಂಡರನ್ನು ನೇಮಕ ಮಾಡಿ ಪಕ್ಷ ಸಂಘಟಿಸುವ ಕಡೆಗೆ ಹೆಚ್ಚು ಗಮನ ನೀಡಬೇಕೆಂದು ಅವರು ಕರೆ ನೀಡಿದರು.

ಪ್ರಧಾನಿ ಮೋದಿ ದೇಶಕ್ಕೆ ಮಾತ್ರ ಸೀಮಿತವಾಗಿರದೇ ಪ್ರಪಂಚದ ನಾಯಕರಾಗಿ ಹೊರಹೊಮ್ಮಿದ್ದಾರೆ. ಇಂದು ಉಕ್ರೇನ್ ಯುದ್ಧ ನಿಲ್ಲಿಸಲು ಅಲ್ಲಿನ ಪ್ರಧಾನಿ ನಮ್ಮ ಮೋದಿಯವರ ಸಲಹೆ ಕೇಳುತ್ತಾರೆ ಎಂದರೆ ನಾವೆಲ್ಲರೂ ಹೆಮ್ಮೆ ಪಡಬೇಕು. ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆ ಮಾಡುವ ಮೂಲಕ ಮುಂಬರುವ ಚುನಾವಣೆಯಲ್ಲಿ ಕ್ಷೇತ್ರದಿಂದ ಶಾಸಕರನ್ನು ಆಯ್ಕೆ ಮಾಡಲು ಸಂಘಟನಾತ್ಮವಾದ ಕೆಲಸ ಮಾಡಬೇಕು ಎಂದರು.

ಈ ವೇಳೆ ಯಜಮಾನರಾದ ಶಿವಮಾದು, ಮಹದೇವಯ್ಯ, ಯುವ ಮುಖಂಡ ಸಂದೀಪ, ಕೂಸಣ್ಣ, ಸುನೀಲ್, ಐಬಿ ಶಿವು, ವಿಕಾಸ್, ಮಹಿಳಾ ಘಟಕದ ಸುಧಾ, ಶ್ರೇಯಸ್, ವಿಷ್ಣು ಹಾಜರಿದ್ದರು.



ಪಿರಿಯಾಪಟ್ಟಣ ತಾಲೂಕು ಮಾಜಿ ಸೈನಿಕರ ಸಂಘದಿಂದ ಸೇನಾ ದಿವಸ್ ಅನ್ನು ಆಚರಿಸಲಾಯಿತು. ಈ ವೇಳೆ ರೋಟೇರಿಯನ್ ಜವರೇಗೌಡ, ನಿವೃತ್ತ ಗ್ರೂಪ್ ಕ್ಯಾಪ್ಟನ್ ವಾಸುಕಿ, ಸಂಘದ ಅಧ್ಯಕ್ಷ ಹಾಗೂ ಕೇಂದ್ರ ತಂಬಾಕು ಮಂಡಳಿ ಸದಸ್ಯ ವಿಕ್ರಮ ರಾಜ, ಕಾರ್ಯದರ್ಶಿ ಧ್ರುವರಾಜ, ಖಜಾಂಚಿ ರಮೇಶ್, ಸದಸ್ಯರಾದ ಸುಬ್ರಹ್ಮಣ್ಯ, ಮಹದೇವ್, ಗಣೇಶ್, ಪೂರ್ಣಚಂದ್ರ ಇನ್ನಿತರರಿದ್ದರು.

ಹೆಚ್‌ಡಿಕೆ ಸಿಎಂ ಆಗಲು ಕೆ.ಎಂ.ಕೃಷ್ಣನಾಯಕ ಮೊದಲ ಮೆಟ್ಟಿಲಾಗಲಿ

ಜೆಡಿಎಸ್ ಕಾರ್ಯಕರ್ತರು, ಸಾರ್ವಜನಿಕರ ಆಶೀರ್ವಾದ



ಹೆಚ್.ಡಿ.ಕೋಟೆ, ಜ.29– ಹೆಚ್.ಡಿ. ಕುಮಾರ ಸ್ವಾಮಿ ಮತ್ತೆ ಮುಖ್ಯಮಂತ್ರಿಯಾಗಲು ಜೆಡಿಎಸ್ ಮುಖಂಡ ಕೆ.ಎಂ. ಕೃಷ್ಣನಾಯಕ ಮೊದಲ ಮೆಟ್ಟಿಲಾಗಲಿ ಎಂದು ಜೆಡಿಎಸ್ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಆಶೀರ್ವದಿಸಿದರು.

ತಾಲೂಕಿನ ಶಕ್ತಿದೇವತೆ ಚಿಕ್ಕದೇವಮ್ಮನ ಬೆಟ್ಟದಲ್ಲಿ ಭಾನುವಾರ ಹೆಚ್.ಡಿ.ಕುಮಾರ ಸ್ವಾಮಿ ಮತ್ತೊಮ್ಮೆ ಮುಖ್ಯಮಂತ್ರಿ ಆಗಲಿ ಎಂದು ವಿಶೇಷ ಪೂಜೆ ಸಲ್ಲಿಸಿ ಮಾದಾಪುರ ಸಮೀಪದ ಫಾರಂ ಹೌಸ್‌ನಲ್ಲಿ ಕೋಟೆ, ಸರಗೂರು ಜೆಡಿಎಸ್ ಕಾರ್ಯಕರ್ತರಿಗೆ ಹಾಗೂ ಜನತೆಗೆ ಚಿಕ್ಕದೇವಮ್ಮನವರ ಪ್ರಸಾದ ಏರ್ಪಡಿಸಿದ್ದ ಸಂದರ್ಭ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಹೆಚ್.ಡಿ.ಕುಮಾರ ಸ್ವಾಮಿ ಅವರು ಮುಖ್ಯಮಂತ್ರಿ ಆಗಲು ಕೆ.ಎಂ.ಕೃಷ್ಣ ನಾಯಕ ಮೊದಲ ಮೆಟ್ಟಿಲಾಗಲಿ ಎಂದು ಸೇಬಿನ ಹಾರ ಹಾಕಿ, ಪಟಾಕಿ ಸಿಡಿಸಿ ಪುಷ್ಪವೃಷ್ಟಿಗೈದು ಹೆಚ್.ಡಿ.ಕೋಟೆಯ ಮುಂದಿನ ಶಾಸಕ ಕೆ.ಎಂ.ಕೃಷ್ಣನಾಯಕ ಎಂದು ಘೋಷಣೆ ಕೂಗಿದರು.

ಈ ವೇಳೆ ಕೃಷ್ಣ ನಾಯಕ ಮಾತನಾಡಿ, ರಾಜ್ಯಾದ್ಯಂತ ಹಮ್ಮಿಕೊಂಡಿರುವ ಪಂಚರತ್ನ ರಥಯಾತ್ರೆ ಯಶಸ್ವಿಯಾಗಬೇಕು. ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗಲಿ ಎಂದು ಭಾನುವಾರ ತಾಲೂಕಿನ ಶಕ್ತಿದೇವತೆ ಚಿಕ್ಕದೇವಮ್ಮನ ಬೆಟ್ಟದಲ್ಲಿ ಪ್ರಾರ್ಥಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು ಎಂದರು.

ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಕೃಷ್ಣನಾಯಕ ಸ್ಪರ್ಧಿಸುವುದು ಖಚಿತ. ಮಾಜಿ ಸಿಎಂ ಕುಮಾರಸ್ವಾಮಿ ಕೃಷ್ಣನಾಯಕ ಅವರಿಗೆ ಟಿಕೆಟ್ ನೀಡುವ ಭರವಸೆ ನೀಡಿದ್ದಾರೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಕೆ.ಎಂ.ಕೃಷ್ಣನಾಯಕರ ಗೆಲುವಿಗೆ ಕಾರ್ಯಕರ್ತರು, ಮುಖಂಡರು ಶ್ರಮಿಸಬೇಕು. –ಸಿ.ವಿ.ನಾಗರಾಜ್, ತಾಲೂಕು ಜೆಡಿಎಸ್ ಮಾಜಿ ಅಧ್ಯಕ್ಷ.

ಇದೇ ವೇಳೆ ಮದಾಪುರ ಸಮೀಪದ ಫಾರಂ ಹೌಸ್‌ನಲ್ಲಿ ಸುಮಾರು 15 ಸಾವಿರಕ್ಕೂ ಹೆಚ್ಚು ಮಂದಿ ಚಿಕ್ಕದೇವಮ್ಮನ ಪ್ರಸಾದ ಸ್ವೀಕರಿಸಿದರು. ತಾಪಂ ಮಾಜಿ ಅಧ್ಯಕ್ಷ ಶಂಬೇಗೌಡ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಬಸವರಾಜು, ಮಾಜಿ ಅಧ್ಯಕ್ಷ ಶಂಕರ ಲಿಂಗೇಗೌಡ, ನಿರ್ದೇಶಕ ಮಹದೇವ್, ಕಾಡ ಮಾಜಿ ನಿರ್ದೇಶಕ ಯತೀಶ್ ಕುಮಾರ್, ತಾಲೂಕು ಒಕ್ಕಲಿಗ ಸಂಘದ ಮಾಜಿ ಅಧ್ಯಕ್ಷ ಟಿ.ವೆಂಕಟೇಶ್, ಮುಖಂಡರಾದ ಹರೀಶ್, ಪ್ರಕಾಶ್, ಶಿವರಾಮೇಗೌಡ, ಗೋವಿಂದೇಗೌಡ, ಶಿವಮಲ್ಲಪ್ಪ, ಶಿವಯ್ಯ, ಮಹೇಂದ್ರ, ಕಾಳೇಗೌಡ, ಕೃಷ್ಣೇಗೌಡ, ಕೆಂಪೇಗೌಡ, ವೈಕುಂಠ ನಾಯಕ, ಶಂಕರ, ಶಿವಮಲ್ಲಪ್ಪ, ಜವರೇಗೌಡ, ನಾಗರಾಜು, ಕಾಳಪ್ಪಾಜಿ, ಸಿರಿ, ಬಿ.ಪಿ.ಸ್ವಾಮಿ, ದಿನೇಶ, ಪ್ರಶಾಂತ, ಪ್ರಸನ್ನ, ಜಿತೇಂದ್ರ ಗಣೇಶ್, ಮಂಜು ಆಚಾರ್, ಪಾಪಣ್ಣ, ಎ.ಆರ್.ಹರೀಶ್, ಬಿ.ಆರ್.ನಾಗರಾಜ್, ವೆಂಕಟೇಶ್, ಶಂಕರ, ಬಸವಣ್ಣ, ಮಹದೇವಸ್ವಾಮಿ, ರವಿ, ತಮ್ಮಣ್ಣ, ನಿಂಗರಾಜು, ಪ್ರಕಾಶ ಸೇರಿದಂತೆ ನೂರಾರು ಕಾರ್ಯಕರ್ತರು, ಮುಖಂಡರಿದ್ದರು.

ಚಿರತೆ ದಾಳಿಯಿಂದ ಸಾವನ್ನಪ್ಪಿದವರ ಕುಟುಂಬಕ್ಕೆ ಸಾಂತ್ವನ



ತಿ.ನರಸೀಪುರ, ಜ.29– ಚಿರತೆ ದಾಳಿಯಿಂದ ಸಾವನ್ನಪ್ಪಿದವರ ಮನೆಗೆ ಬಿಜೆಪಿ ಮುಖಂಡ ಎಸ್.ಅರವಿಂದ್ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ತಾಲೂಕಿನ ಹೊರಳಹಳ್ಳಿ, ಕನ್ನಾಯಕನಹಳ್ಳಿ ಮತ್ತು ಎಂ.ಕೆಬ್ಬೆಹುಂಡಿ ಗ್ರಾಮಗಳ ಸಂತ್ರಸ್ತರ ಮನೆಗೆ ಭೇಟಿ ನೀಡಿ ಕುಟುಂಬ ವರ್ಗದವರಿಗೆ ಧೈರ್ಯ ತುಂಬಿ ವೈಯಕ್ತಿಕವಾಗಿ ಸಹಾಯಧನ ನೀಡಿದರು.

ನಂತರ ಮಾತನಾಡಿದ ಅವರು, ತಾಲೂಕಿನಲ್ಲಿ ದುರ್ಘಟನೆ ಸಂಭವಿಸಿರುವುದು ಬೇಸರ ತಂದಿದೆ. ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಅರಣ್ಯ ಇಲಾಖೆ ನಿಗಾವಹಿಸಬೇಕು. ಸುತ್ತಮುತ್ತಲ ಗ್ರಾಮಗಳಲ್ಲಿರುವ ಚಿರತೆಗಳನ್ನು ಹಿಡಿದು ಸಾರ್ವಜನಿಕರು ನೆಮ್ಮದಿಯಿಂದ ಬದುಕಲು ಅನುವು ಮಾಡಿಕೊಡುವಂತೆ ಆಗ್ರಹಿಸಿದರು.

ಚಿರತೆಗಳನ್ನು ಸೆರೆಹಿಡಿಯುವ ತನಕ ಸಾರ್ವಜನಿಕರು ಅತ್ಯಂತ ಜಾಗ್ರತೆಯಿಂದ ಇರಬೇಕು. ರಾತ್ರಿ ವೇಳೆ ಜನರು ಓಡಾಡಬಾರದು. ಅಲ್ಲದೆ ಹೊಲ ಗದ್ದೆಗಳಿಗೆ ಒಬ್ಬಂಟಿಯಾಗಿ ಹೋಗದಿರುವಂತೆ ಮನವಿ ಮಾಡಿದರು.

ಈ ವೇಳೆ ಸಂದರ್ಭದಲ್ಲಿ ಹಲಸನಹಳ್ಳಿ ಮಹದೇವಸ್ವಾಮಿ, ವಾಟಾಳು ಕಿರಣ್, ಪ್ರಕಾಶ್, ಶಿವಲಿಂಗು, ಸುನೀಲ್, ಪ್ರಮೋದ್, ಮಧುಸೂಧನ್ ಇತರರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಇಟಗಳ್ಳಿಯಲ್ಲಿ 45 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಮಹದೇವ್ ಚಾಲನೆ ನೀಡಿದರು. ಈ ವೇಳೆ ಪಂಚವಳ್ಳಿ ವಿಎಸ್‌ಎಸ್‌ಎನ್ ಅಧ್ಯಕ್ಷ ರಾಜು, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ ಸೇರಿದಂತೆ ಇತರರಿದ್ದರು.

ಅಶೋಕಪುರಂನಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ




ಮೈಸೂರು, ಜ.29(ಎಸ್‌ಪಿಎನ್)– ವಿದ್ಯಾರ್ಥಿಗಳ ಉನ್ನತಿ ಹಿಂದೆ ನಿಮ್ಮ ಪೋಷಕರ ಬೆವರು, ಶ್ರಮ ಸಾವಿರಾರು ಕನಸುಗಳು ಅಡಗಿರುತ್ತವೆ. ನೀವು ಗುರಿ ಮುಟ್ಟಿದ ಮೇಲೆ ಅವರ ಆಸೆಗೆ ವಿರುದ್ಧವಾಗಿ ನಡೆದುಕೊಳ್ಳಬೇಡಿ ಎಂದು ಮೈಸೂರು ವಿವಿ ಜೀವರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಕೆ. ಕೆಂಪರಾಜ್ ಅಭಿಪ್ರಾಯಪಟ್ಟರು.

ಮೈಸೂರು ಅಶೋಕಪುರಂ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ವಿನಾಯಕ ಕ್ರೀಡಾ ಹಾಗೂ ಸಮಾಜ ಸೇವಾ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭ ಹಾಗೂ ಅಶೋಕಪುರಂ ಡಾ.ಬಿ.ಆರ್. ಅಂಬೇಡ್ಕರ್ ನೌಕರರ ಸಂಘದ ಪದಾಧಿಕಾರಿಗಳಿಗೆ ಸನ್ಮಾನಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಬಹುತೇಕ ವಿದ್ಯಾರ್ಥಿಗಳ ಪೋಷಕರು ತಾವು ದುಡಿದ ಹಣದಲ್ಲಿ ಶೇ.75ರಷ್ಟು ಭಾಗವನ್ನು ನಿಮ್ಮ ಏಳಿಗೆಗೆ ವ್ಯಯಿಸುತ್ತಾರೆ. ಜೀವನದಲ್ಲಿ ತಾವು (ಪೋಷಕರು) ಸಾಧಿಸಲು ಸಾಧ್ಯವಾಗದ್ದನ್ನು ತಮ್ಮ ಮಕ್ಕಳ ಮೂಲಕ ಆ ಸಾಧನೆಯನ್ನು ನೋಡಲು ಬಯಸುತ್ತಾರೆ. ಪೋಷಕರ ಈ ಕನಸ್ಸನ್ನು ಪೂರೈಸುವ ಹೊಣೆ ವಿದ್ಯಾರ್ಥಿಗಳದ್ದು ಎಂದರು.

ನಾವು ವಿದ್ಯಾರ್ಥಿಯಾಗಿದ್ದಾಗ ಅಶೋಕಪುರಂನಲ್ಲಿ ನಿವಾಸಿಯಾಗಿದ್ದು, ಇದೇ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 5–7ನೇ ತರಗತಿಯವರೆಗೂ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದೇನೆ. ನಂತರ ಯುವರಾಜ ಕಾಲೇಜಿನಲ್ಲಿ ಬಿ.ಎಸ್ಸಿ. ವ್ಯಾಸಂಗ ಮಾಡಿ, ನಂತರ ಮೈಸೂರು ವಿವಿಯಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದ ನಂತರ ಮೈಸೂರು ವಿವಿಯಲ್ಲಿ ಪ್ರಾಧ್ಯಾಪಕನಾಗಿ ಕೆಲಸ ಮಾಡುತ್ತಿದ್ದೇನೆ ಎಂದು ತಿಳಿಸಿದರಲ್ಲದೆ, ತಮ್ಮ ಮಗ ಐಎಫ್‌ಎಸ್‌ಗೆ ಆಯ್ಕೆಯಾಗಿರುವ ಬಗ್ಗೆಯೂ ತಿಳಿಸಿದರು. ನಂತರ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ಆರ್.ತನ್ವಿ, ಎಸ್.ಸಹನ, ಜಿ.ಮಿಲನ, ಜಿ.ಹೇಮಲತಾ, ಎಸ್.ಅಮೃತ್, ಎನ್.ಭವ್ಯ, ಎನ್.ನಯನ, ವಿ.ಪೂನಂ, ಆರ್.ಸಾರಿಕ, ಎಸ್.ಸಂಜನ, ಎಸ್.ಪೂರ್ಣಾಜ್ಞ, ಡಿ.ಭಾರ್ಗವಿ, ಬಿ.ಚಂದನ್, ಸಿ.ಶೋಭಿತಾ ಅವರನ್ನು ಸನ್ಮಾನಿಸಲಾಯಿತು.

ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಾದ ಬಿ.ದರ್ಶನ, ಕೆ.ಚಂದನ, ಜಿ.ರಶ್ಮಿ, ಎಸ್.ಸೃಜನ, ಎನ್.ಚಿರಾಗ್, ಭುವನ ಶ್ರೀ, ಸಿ.ಎಂ.ಚೈತನ್ಯ, ಎಸ್.ರಚನಾಶ್ರೀ, ಎಸ್.ಎನ್.ಗಿರಿಜ, ಎಸ್.ನಿಸರ್ಗ, ಧೀರಜ್ ಎನ್.ಪ್ರಸಾದ್, ಎಸ್.ಕೀರ್ತನ, ಆರ್.ಗೌತಮ್, ರವಿಕುಮಾರ್, ಕೆ.ನಮ್ರತ, ಡಿ.ಅಭಿಷೇಕ್, ಎಸ್. ರಮ್ಯಶ್ರೀ, ಎಸ್.ಅಪೇಕ್ಷ, ಎಸ್.ಸಿಂಚನ, ಎನ್.ನಿತೀನ್, ಸಿ.ಚಿನ್ಮಯ್, ಎನ್.ನಂದಿನಿ, ಆರ್.ಅರ್ಪಿತ, ಎಸ್.ವಿ.ಅರುಣ್‌ಕಾಂತ್, ಎನ್.ನಮಿತ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ವಿನಾಯಕ ಕ್ರೀಡಾ ಹಾಗೂ ಸಮಾಜ ಸೇವಾ ಸಂಸ್ಥೆ ಕಾರ್ಯದರ್ಶಿ ಎಂ.ಕೆ.ರೇವಣ್ಣ, ಮೈಸೂರು ವಿವಿ ಕಾನೂನು ವಿಭಾಗದ ಪ್ರಾಧ್ಯಾಪಕ ಪ್ರೊ.ರಮೇಶ್, ಪಾಲಿಕೆ ಸದಸ್ಯರಾದ ಪಲ್ಲವಿ ಬೇಗಂ, ಭುವನೇಶ್ವರಿ ಪ್ರಭುಮೂರ್ತಿ, ಶಾರದಮ್ಮ ಈಶ್ವರ್ ಉಪಸ್ಥಿತರಿದ್ದರು. ಮಂಜುಳ ಮತ್ತು ತಂಡವರಿಂದ ಸುಗಮ ಸಂಗೀತ ಗಾಯನ ನಡೆಸಿಕೊಟ್ಟರು.

ಫೆ.3ರಿಂದ ಬಸವ ಕಲ್ಯಾಣದಿಂದ ಸಿದ್ದರಾಮಯ್ಯ, ಕುರಡು ಮಲೆಯಿಂದ ಡಿಕೆಶಿ ಬಸ್ ಯಾತ್ರೆ: ಫೆ.3ರಿಂದ ಆರಂಭ



ಬೆಂಗಳೂರು, ಜ.29– ಫೆ. 3ರಂದು ಬೀದರ್‌ನ ಬಸವ ಕಲ್ಯಾಣದಿಂದ ಬಸ್ ಯಾತ್ರೆಯನ್ನು ಪ್ರಾರಂಭಿಸಲು ವಿಪಕ್ಷ ನಾಯಕ ಸಿದ್ದರಾಮಯ್ಯ ತೀರ್ಮಾನಿಸಿದ್ದಾರೆ. ಅದೇ ದಿನ ಮುಳಬಾಗಿಲಿನ ಕುರುಡುಮಲೆಯಿಂದ ಬಸ್ ಯಾತ್ರೆ ಆರಂಭಿಸಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಿರ್ಧರಿಸಿದ್ದಾರೆ. ಜಂಟಿ ಬಸ್ ಯಾತ್ರೆ ಮಾಡಿರುವ ಉಭಯ ನಾಯಕರು ಈಗ ರಾಜ್ಯದ ಎರಡು ದಿಕ್ಕಿನಿಂದ ಪ್ರತ್ಯೇಕ ಬಸ್ ಯಾತ್ರೆ ಆರಂಭಿಸಲಿದ್ದಾರೆ.

ಅನುಭವ ಮಂಟಪಕ್ಕೆ ಭೇಟಿ ನೀಡಿ ಪ್ರಜಾಧ್ವನಿ ಯಾತ್ರೆ ಪ್ರಾರಂಭಿಸಲಿರುವ ಸಿದ್ದರಾಮಯ್ಯ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಸಾರ್ವಜನಿಕ ಸಭೆ ನಡೆಸಿ ಅದೇ ದಿನ ಬಾಲ್ಕಿಯಲ್ಲಿ ಪ್ರಜಾಧ್ವನಿ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಕುರುಡುಮಲೆ ಗಣಪತಿಗೆ ಪೂಜೆ ಸಲ್ಲಿಸಿ ಬಸ್ ಯಾತ್ರೆ ಆರಂಭಿಸಲಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಂದೇ 2 ಸಮಾವೇಶಗಳಲ್ಲಿ ಭಾಗವಹಿಸಲಿದ್ದಾರೆ.

ಸಿದ್ದರಾಮಯ್ಯ ಬಸ್ ಯಾತ್ರೆ ವಿವರ: ಫೆ.4ರಂದು ಔರಾದ್, ಬೀದರ್ ಹಾಗೂ ಬೀದರ್ ದಕ್ಷಿಣ ಕ್ಷೇತ್ರದಲ್ಲಿ ಪ್ರಜಾಧ್ವನಿ ನಡೆಯಲಿದ್ದು, ಆ ದಿನದ ಸಂಜೆ ಹುಮ್ನಾಬಾದ್‌ನಲ್ಲಿ ಪ್ರಜಾಧ್ವನಿ ಸಮಾವೇಶ ಹಾಗೂ ಅದೇ ದಿನ ಕಲಬುರ್ಗಿಯಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಫೆ.6ರಂದು ಕಲಬುರಗಿ ಗ್ರಾಮೀಣ, ಚಿಂಚೋಳಿ, ಸೇಡಂನಲ್ಲಿ ಪ್ರಜಾಧ್ವನಿ ನಡೆಯಲಿದೆ. ಫೆ.7ರಂದು ಆಳಂದ, ಅಫ್ಜಲಪುರ, ಯಡ್ರಾಮಿ ಜೇವರ್ಗಿ ಕ್ಷೇತ್ರದಲ್ಲಿ ಹಾಗೂ ಫೆ. 8ರಂದು ಚಿತ್ತಾಪುರದಲ್ಲಿ ಪ್ರಜಾಧ್ವನಿ ಸಮಾವೇಶ ನಡೆಯಲಿದೆ. ಫೆ. 10ರಂದು ಸುರಪೂರ, ಶಹಪುರ, ಕಲಬುರ್ಗಿ ಉತ್ತರ ಹಾಗೂ ದಕ್ಷಿಣ ಕ್ಷೇತ್ರಗಳಲ್ಲಿ ಹಾಗೂ ಫೆ. 11ರಂದು ಸಿಂಧಗಿ, ಇಂಡಿ, ನಾಗಠಾಣಾ ಪ್ರಜಾಧ್ವನಿ ಸಮಾವೇಶ ನಡೆಯಲಿದೆ. ಫೆ. 12ರಂದು ಬಬಲೇಶ್ವರ, ದೇವರ ಹಿಪ್ಪರಗಿ, ಬಸವನಬಾಗೇವಾಡಿ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಬಸ್ ಯಾತ್ರೆ ನಡೆಸಲಿದ್ದಾರೆ.

ಡಿ.ಕೆ.ಶಿವಕುಮಾರ್ ನೇತೃತ್ವದ ಬಸ್ ಯಾತ್ರೆ ವಿವರ: ಫೆ.3ರಂದು ಮುಳಬಾಗಿಲು, ಕೆಜಿಎಫ್ ಕ್ಷೇತ್ರ ಹಾಗೂ ಫೆ.4ರಂದು ಮಾಲೂರು, ದೇವನಹಳ್ಳಿ ಕ್ಷೇತ್ರದಲ್ಲಿ ಪ್ರಜಾಧ್ವನಿ ಸಮಾವೇಶ ನಡೆಯಲಿದೆ. ಫೆ6ರಂದು ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು, ಫೆ 7ರಂದು ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ, ಫೆ.8ರಂದು ಶಿಕಾರಿಪುರ, ಸೊರಬ, ಸಾಗರ ತಾಲೂಕಿನಲ್ಲಿ ಹಾಗೂ ಫೆ.9ರಂದು ತೀರ್ಥಹಳ್ಳಿ, ಭದ್ರಾವತಿಯಲ್ಲಿ ಡಿಕೆಶಿವಕುಮಾರ್ ಪ್ರಜಾಧ್ವನಿ ಬಸ್ ಯಾತ್ರೆ ಸಾಗಲಿದೆ. ಉಭಯ ನಾಯಕರು ಒಂದೇ ದಿನ ರಾಜ್ಯದ ಬೇರೆ ಬೇರೆ ದಿಕ್ಕಿನಿಂದ ಬಸ್ ಯಾತ್ರೆ ಆರಂಭಿಸಲಿದ್ದಾರೆ.

ಸೇತುವೆಯಿಂದ ಜಿಗಿಯಲು ಹೋಗಿ 12 ಕೃಷ್ಣಮೃಗಗಳ ದಾರುಣ ಸಾವು



ಮುಂಬೈ, ಜ.29– ಕಾಡಿನ ಮಧ್ಯೆ ಇರುವ ರಸ್ತೆಗಳನ್ನು ದಾಟಲು ಹೋಗಿ ಕಾಡು ಪ್ರಾಣಿಗಳು ಸಾಯುವ ಘಟನೆ ಬಹಳಷ್ಟು ವರದಿಯಾಗುತ್ತವೆ. ಜಿಂಕೆಗಳು ನಾಡಿಗೆ ಬಂದು ನಾಯಿಗಳ ಬಾಯಿಗೆ ಆಹಾರವಾಗುವುದೂ ಇದೆ. ಆದರೆ, ಸೇತುವೆಯಿಂದ ಕೆಳಗೆ ಹಾರಿ 12 ಕೃಷ್ಣಮೃಗಗಳು ಸಾವನ್ನಪ್ಪಿದ ದಾರುಣ ಘಟನೆ ಮಹಾರಾಷ್ಟ್ರ ರಾಜ್ಯದಲ್ಲಿ ಸಂಭವಿಸಿದೆ.

ಸೋಲಾಪುರ್ ಜಿಲ್ಲೆಯಲ್ಲಿ ಮಾಂದರುಪ್ ಬೈಪಾಸ್ ರಸ್ತೆಯಲ್ಲಿ ಈ ದುರ್ಘಟನೆ ನಡೆದಿದೆ. ಕೇಗಾಂವದಿಂದ ಬಿಜಾಪುರ ರಸ್ತೆಗೆ ಹೋಗುವ ಈ ಹೆದ್ದಾರಿಯನ್ನು ಹೊಸದಾಗಿ ನಿರ್ಮಿಸಲಾಗಿದೆ. ಹಿಂಡಾಗಿ ಬರುತ್ತಿದ್ದ ಕೃಷ್ಣಮೃಗಗಳು ರಸ್ತೆ ದಾಟುವ ಪ್ರಯತ್ನದಲ್ಲಿ ಕೃಷ್ಣ ಮೇಲ್ಸೇತುವೆಯಿಂದ 30 ಅಡಿ ಕೆಳಗೆ ಬಿದ್ದಿವೆ. ಹೀಗೆ ಬಿದ್ದ ಎಲ್ಲಾ 15 ಕೃಷ್ಣಮೃಗಗಳು ಗಂಭೀರವಾಗಿ ಗಾಯಗೊಂಡಿವೆ. ಇವುಗಳ ಪೈಕಿ 12 ಪ್ರಾಣಿಗಳು ಸತ್ತುಹೋಗಿವೆ. ಸೋಲಾಪುರ ಪೊಲೀಸರು ಸ್ಥಳಕ್ಕೆ ಆಗಮಿಸಿ ಈ ಪ್ರಾಣಿಗಳ ಕಳೆಬರವನ್ನು ಹೆದ್ದಾರಿಯಿಂದ ತೆರವುಗೊಳಿಸಿದ್ದಾರೆ. ದುರ್ಘಟನೆ ನಡೆದ ಸ್ಥಳದಲ್ಲಿ ರಸ್ತೆಯನ್ನು ಗುಡ್ಡ ಕತ್ತರಿಸಿ ನಿರ್ಮಿಸಿದ್ದು 4 ತಿಂಗಳ ಹಿಂದೆ ಸಂಚಾರಕ್ಕೆ ಮುಕ್ತಗೊಳಿಸಲಾಗಿತ್ತು. ಈ ಸ್ಥಳದ ಸುತ್ತ ಹಸಿರು ಪ್ರದೇಶಗಳಿದ್ದು ಇಲ್ಲಿ ಜಿಂಕೆ ಇತ್ಯಾದಿ ವನ್ಯಜೀವಿಗಳು ಆಹಾರಕ್ಕಾಗಿ ತಿರುಗಾಡುತ್ತಿರುತ್ತವೆ. ಇವುಗಳ ಸಹಜ ಪರಿಸರದಲ್ಲಿ ರಸ್ತೆ ನಿರ್ಮಾಣ ಆಗಿರುವುದು ಈ ಪ್ರಾಣಿಗಳಿಗೆ ಹೊಂದಿಕೊಳ್ಳಲು ಕಷ್ಟವಾಗುತ್ತಿದೆ. ಈ ಹಿಂದೆಯೂ ಹೀಗೆ ರಸ್ತೆ ಸೇತುವೆಯಿಂದ ಬಿದ್ದು ಪ್ರಾಣಿಗಳು ಸಾವನ್ನಪ್ಪಿದ ಘಟನೆ ವರದಿಯಾಗಿದ್ದಿದೆ.

ಭಾರತಕ್ಕೆ ಅಂಡರ್–19 ಮಹಿಳಾ ಟ್ವೆಂಟಿ–20 ವಿಶ್ವಕಪ್ ಕಿರೀಟ



ಪೊಷೆಫ್‌ಸ್ಟ್ರೂಮ್, ಜ.29– 19 ವರ್ಷದೊಳಗಿನ ಮಹಿಳೆಯರ ಟ್ವೆಂಟಿ–20 ವಿಶ್ವಕಪ್ ಫೈನಲ್‌ನಲ್ಲಿ ಶಫಾಲಿ ವರ್ಮಾ ನಾಯಕತ್ವದ ಭಾರತ ತಂಡ ಇಂಗ್ಲೆಂಡ್ ವಿರುದ್ಧ 7 ವಿಕೆಟ್ ಅಂತರದಿಂದ ಗೆಲುವು ಸಾಧಿಸಿದೆ. ಈ ಮೂಲಕ ಇದೇ ಮೊದಲ ಆಯೋಜನೆಗೊಂಡಿರುವ ಐಸಿಸಿ ಅಂಡರ್–19 ಮಹಿಳಾ ಟ್ವೆಂಟಿ–20 ವಿಶ್ವಕಪ್ ಎತ್ತಿ ಹಿಡಿದಿದೆ. ಇಂಗ್ಲೆಂಡ್ ವಿರುದ್ಧ ಟಾಸ್ ಗೆದ್ದ ಭಾರತ, ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಅದರಂತೆ ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 17.1 ಓವರ್‌ಗಳಲ್ಲಿ 68 ರನ್ ಗಳಿಸಿ ಆಲೌಟ್ ಆಯಿತು. 69 ರನ್‌ಗಳ ಸಾಧಾರಣ ಮೊತ್ತ ಬೆನ್ನತ್ತಿದ ಭಾರತ 14 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಗೆಲುವಿನ ನಗೆ ಬೀರಿತು. ಭಾರತದ ಪರ ಗೊಂಗಡಿ ತ್ರಿಷಾ 24, ಸೌಮ್ಯ ತಿವಾರಿ ಔಟಾಗದೆ 24 ರನ್ ಗಳಿಸಿ ತಂಡದ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದರು. 19 ವರ್ಷದೊಳಗಿನ ಮಹಿಳೆಯರ ವಿಶ್ವಕಪ್ ಅನ್ನು ಇದೇ ಮೊದಲ ಸಲ ಆಯೋಜಿಸಲಾಗಿತ್ತು ಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಗೆಲುವು ಸಾಧಿಸುವ ಮೂಲಕ ಶಫಾಲಿ ಪಡೆ ಚಾರಿತ್ರಿಕ ಸಾಧನೆ ಮಾಡಿದೆ. ದಕ್ಷಿಣ ಆಫ್ರಿಕಾದಲ್ಲಿ ನಡೆದ ಟೂರ್ನಿಯಲ್ಲಿ ಭಾರತ ಯುವಪಡೆಯ ನಾಯಕತ್ವದ 19 ವರ್ಷದ ಶಫಾಲಿಗೆ ಇತಿಹಾಸ ಬರೆದಿದ್ದಾರೆ. ಭಾರತದ ಸೀನಿಯರ್ ಮಹಿಳಾ ತಂಡವು ಇದುವರೆಗೂ ಯಾವುದೇ ಮಾದರಿಯಲ್ಲಿಯೂ ವಿಶ್ವಕಪ್ ಜಯಿಸಿಲ್ಲ. ಹೋದ ವರ್ಷ ವಿಶ್ವಕಪ್ ಫೈನಲ್ ಮತ್ತು ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಆಡಿದ್ದ ಮಹಿಳಾ ತಂಡದಲ್ಲಿ ಶಫಾಲಿ ಕೂಡ ಆಡಿದ್ದರು.

ವೇದಿಕೆ ಮೇಲೆ ಕುಸಿದು ಬಿದ್ದ ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ

ದಾವಣಗೆರೆ,ಜ.29– ಬಂಡಾಯ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಕುಸಿದು ಬಿದ್ದಿದ್ದಾರೆ. ಕಾರ್ಯಕ್ರಮದಲ್ಲಿ ಭಾಷಣ ಮಾಡಿದ್ದ ಬರಗೂರು ಅವರು ನಂತರ ಕುಸಿದು ಬಿದ್ದಿದ್ದು ಕೂಡಲೇ ರಾಮಚಂದ್ರಪ್ಪ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ಬಂಡಾಯ ವೇದಿಕೆ ಕಾರ್ಯಕ್ರಮದಲ್ಲಿ ಬರಗೂರು ರಾಮಚಂದ್ರಪ್ಪ ಭಾಗವಹಿಸಿದ್ದರು. ಅವರನ್ನು ಹರಿಹರದ ಅಕ್ಷಯ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಇಂದಿನಿಂದ ಎಂ.ಸಿ.ತಳಲು ಕ್ಲಸ್ಟರ್‌ನಲ್ಲಿ ಕಲಿಕಾ ಹಬ್ಬ

ಮೈಸೂರು, ಜ.29(ಎಸ್‌ಪಿಎನ್)– ಸರಗೂರು ತಾಲೂಕಿನ ಎಂ.ಸಿ.ತಳಲು ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬವನ್ನು ಎಂ.ಸಿ.ತಳಲು ಪ್ರೌಢಶಾಲಾ ಆವರಣದಲ್ಲಿ ಜ.30 ಮತ್ತು 31ರಂದು ಹಮ್ಮಿಕೊಳ್ಳಲಾಗಿದೆ ಎಂದು ಸಿಆರ್‌ಪಿ ಎಸ್.ಚಂದ್ರಶೇಖರ್ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಮತ್ತು ಸಾರಕ್ಷತಾ ಇಲಾಖೆಯ ಡಿಡಿಪಿಐ, ಹೆಚ್.ಡಿ.ಕೋಟೆ ಮತ್ತು ಸರಗೂರು ವಲಯದ ಬಿಇಓ, ಬಿಆರ್‌ಸಿ, ಶಿಕ್ಷಣ ಸಂಯೋಜಕ ಹಾಗೂ ಬಿಆರ್‌ಪಿ, ಅಕ್ಷರ ದಾಸೋಹ ಕಾರ್ಯಕ್ರಮದ ಅಧಿಕಾರಿಗಳು, ಸಹ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು ಭಾಗವಹಿಸಲಿದ್ದಾರೆ. ಅಲ್ಲದೆ, ಈ ಭಾಗದ ಎಸ್‌ಡಿಎಂಸಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಗ್ರಾಮಸ್ಥರು ಆಗಮಿಸಿ ಎರಡು ದಿನದ ಕಲಿಕಾ ಹಬ್ಬದಲ್ಲಿ ಭಾಗವಹಿಸುವಂತೆ ಯಶಸ್ವಿಗೊಳಿಸುವಂತೆ ಮನವಿ ಮಾಡಿದ್ದಾರೆ.

ಎಚ್.ಎಂ.ಗಿರೀಶ್‌ಗೆ ಪಿ.ಹೆಚ್.ಡಿ ಪದವಿ

ಮೈಸೂರು,ಜ.29– ಡಾ.ಪದ್ಮಾಶೇಖರ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿದ ಎಚ್.ಎಂ. ಗಿರೀಶ್ ಸಾದರಪಡಿಸಿದ 'ಕನ್ನಡ ಸಾಹಿತ್ಯಕ್ಕೆ ಕರ್ನಾಟಕದ ಜೈನ ಮಠಗಳ ಕೊಡುಗೆ' ಎಂಬ ಮಹಾಪ್ರಬಂಧವನ್ನು ಕನ್ನಡ ವಿಷಯದಲ್ಲಿ ಪಿಹೆಚ್.ಡಿ ಪದವಿಗಾಗಿ ಅಂಗೀಕರಿಸಲಾಗಿದೆ ಎಂದು ಮೈಸೂರು ವಿಶ್ವ ವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ) ಪ್ರೊ. ಎ.ಪಿ.ಜ್ಞಾನಪ್ರಕಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಎಸ್‌ಐ ಗುಂಡಿನ ದಾಳಿಗೆ ಒಡಿಶಾ ಸಚಿವ ನಬ ದಾಸ್ ಬಲಿ



ಭುವನೇಶ್ವರ್, ಜ.29– ಪೊಲೀಸ್ ಎಎಸ್‌ಐ ನಡೆಸಿದ ಗುಂಡಿನ ದಾಳಿಗೆ ಒಡಿಶಾ ರಾಜ್ಯದ ಆರೋಗ್ಯ ಸಚಿವ ನಬ ಕಿಶೋರ್ ದಾಸ್ ಸಾವನ್ನಪ್ಪಿದ್ದಾರೆ. ಒಡಿಶಾದ ಝಾರಸುಗುಡ ಜಿಲ್ಲೆಯ ಬ್ರಜರಾಜನಗರ್‌ನ ಗಾಂಧಿ ಚೌಕ್ ಎಂಬಲ್ಲಿ ಭಾನುವಾರ ಮಧ್ಯಾಹ್ನ 12:30ಕ್ಕೆ ಎಎಸ್‌ಐ ಗೋಪಾಲ್ ಚಂದ್ರ ದಾಸ್ ಎಂಬುವರು ಸಚಿವರ ಎದೆಗೆ ಗುಂಡು ಹಾರಿಸಿದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿತ್ತು ಚಿಕಿತ್ಸೆ ಫಲಕಾರಿಯಾಗದೇ ಸಚಿವರು ಕೊನೆಯುಸಿರೆಳೆದಿದ್ದಾರೆ.

ನಬ ಕಿಶೋರ್, ಬಿಜು ಪಾಟ್ನಾಯಕ್ ನೇತೃತ್ವದ ಬಿಜೆಡಿ ಸರ್ಕಾರದಲ್ಲಿ ಪ್ರಬಲ ಸಚಿವರಲ್ಲೊಬ್ಬರಾಗಿದ್ದರು. ಸಚಿವರು ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಕಾರಿನಿಂದ ಕೆಳಗಿಳಿಯುವಾಗ ಈ ದಾಳಿ ನಡೆಯಿತು. ಇದರಿಂದಾಗಿ ನಬ ದಾಸ್ ಅವರ ಎದೆಗೆ ಎರಡು ಗುಂಡುಗಳು ಹೊಕ್ಕಿ, ಗಂಭೀರವಾಗಿ ಗಾಯಗೊಂಡಿದ್ದರು. ಆರೋಪಿ ಗೋಪಾಲ್ ಚಂದ್ರದಾಸ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಸ್ಯಾಂಡಲ್‌ವುಡ್‌ನ ಹಿರಿಯ ಹಾಸ್ಯ ನಟ ಮಂದೀಪ್ ರಾಯ್ ನಿಧನ



ಬೆಂಗಳೂರು, ಜ.29– ಕನ್ನಡದ ಹಿರಿಯ ನಟ ಮಂದೀಪ್ ರಾಯ್ ನಿಧನರಾಗಿದ್ದಾರೆ. ಕಳೆದ ಮಧ್ಯರಾತ್ರಿ 1.45ರ ಸುಮಾರಿಗೆ ಬೆಂಗಳೂರಿನ ಭೈರಸಂದ್ರದಲ್ಲಿರುವ ಅವರ ನಿವಾಸದಲ್ಲಿ ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ 73 ವರ್ಷ ವಯಸ್ಸಾಗಿತ್ತು. ಕಳೆದ ಡಿಸೆಂಬರ್ ತಿಂಗಳಲ್ಲಿ ಮಂದೀಪ್ ರಾಯ್ ಹೃದಯಾಘಾತದಿಂದ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದರು. ಕನ್ನಡದ ಖ್ಯಾತ ನಟರಾದ ಅನಂತ್ ನಾಗ್, ಶಂಕರ್ ನಾಗ್, ರಾಜ್ ಕುಮಾರ್, ವಿಷ್ಣುವರ್ಧನ್ ಸೇರಿ ಅನೇಕ ನಾಯಕನಟರು, ಪ್ರಮುಖ ನಟರ ಜೊತೆ ಮಂದೀಪ್ ರಾಯ್ ಇದುವರೆಗೆ 500ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ಮಂದೀಪ್ ರಾಯ್ ಹಾಸ್ಯ ಪಾತ್ರಗಳಲ್ಲಿ ಹೆಚ್ಚು ಮಿಂಚಿದ್ದಾರೆ. ಮಿಂಚಿನ ಓಟ, ಬಾಡದ ಹೂವು, ಆಕಸ್ಮಿಕ, ಅಗ್ನಿ ಐಪಿಎಸ್, ದೀಪಾವಳಿ, ಅಯ್ಯ, ಅಪೂರ್ವ ಸಂಗಮ, ಪ್ರೀತ್ಸೋದ್ ತಪ್ಪಾ, ಏಳು ಸುತ್ತಿನ ಕೋಟೆ, ಗಜಪತಿ ಗರ್ವಭಂಗ, ಆಸೆಗೊಬ್ಬ ಮೀಸೆಗೊಬ್ಬ ಸೇರಿದಂತೆ ಅನೇಕ ಸಿನಿಮಾಗಳಲ್ಲಿ ಮನ್‌ದೀಪ್ ರಾಯ್ ನಟಿಸಿದ್ದಾರೆ.

